Ph: 0824-2430881
Fax : 0824-2430882
design for what is next...
GROUP4
Complete Sanitary and Tiles
Cauvery Building, Near Unity Hospital Falnir Road, Mangalore-1.
Email : group4mangalore@gmail.com
www.group4tiles.com
Hindware NITCO Jaguar GROHE

ಅರಿವಿನ ಅಕ್ಷರ ಕ್ರಾಂತಿ

# ಅಲ್ ಅನ್ಸಾರ್ ವಾರ ಪತ್ರಿಕೆ

AL-ANSAR KANNADA WEEKLY

Hameed Kayyar Proprietor
+91 9916943379
+91 824 2433979
9886796379
SUNHEART SOMANY Hindware CENgres HILTI Kisan
KAYYAR
TILES & SANITARY WARE
Stockists and Dealers in SANITARYWARES, TILES & ALL KINDS OF BUILDING MATERIALS
Vishwas View, Appartment, Near Karnataka Bank, N.H.17, PUMPWELL, MANGALORE.2.

ಸಂಪುಟ:20 ಸಂಚಿಕೆ:42 RNI No:KARKAN/2009/28984 Regd No.:KA/SK/MNG/982/2009-11 ಆಗಸ್ಟ್ 29 - ಸೆಪ್ಟೆಂಬರ್ 4, 2011 ರಮಳಾನ್ 29- ಶವ್ವಾಲ್ 5,1432 ರೂ: 6.00

ಧಾರ್ಮಿಕ-ನೈತಿಕ ತರಬೇತಿ ಪಡೆದು ಸ್ವಯಂ ಉಪವಾಸ ವ್ರತಧಾರಿಯಾದಾಗ ವ್ಯಕ್ತಿ ಸಂಸ್ಕರಣೆಗೊಳ್ಳಬಲ್ಲ. ಇದು ಅವನನ್ನು ಭ್ರಷ್ಟತೆಯಿಂದ ತಡೆಯಬಲ್ಲದು. ಯಾರೋ ಉಪವಾಸವಿರುವುದರಿಂದ ಭ್ರಷ್ಟಾಚಾರಿಗಳು ಸ್ವಚ್ಛಗೊಳ್ಳಲಾರರು. ಅಂತಹ ಉಪವಾಸಿಗರಿಗೆ ಸರ್ಕಾರ ಶರಣಾದರೂ ಅದು ಉಪವಾಸಕ್ಕಾಗಿ ಅಲ್ಲ, ಉಪವಾಸಿಗರ ಹಿಂದಿರುವ ಜನಬೆಂಬಲಕ್ಕೆ ಹೆದರಿ ಮಾತ್ರ.

# ಭ್ರಷ್ಟಾಚಾರಕ್ಕೆ ಉಪವಾಸ ಮದ್ದು!?

ಇದು ಉಪವಾಸದ ಕಾಲ. ಸರಣಿ ಸರಣಿ ಭ್ರಷ್ಟಾಚಾರ ಪ್ರಕರಣಗಳು ಒಂದೆಡೆಯಾದರೆ, ಅವುಗಳ ವಿರುದ್ಧ ಸರದಿ ಸರದಿಯಾಗಿ ಉಪವಾಸ ಕೈಗೊಳ್ಳುವವರು ಇನ್ನೊಂದೆಡೆ. ಈ ಉಪವಾಸಗಳು ಭ್ರಷ್ಟಾಚಾರವನ್ನು ನಿಯಂತ್ರಿಸುವಷ್ಟು ಪರಿಣಾಮಕಾರಿಯೆ ಎಂಬ ಪ್ರಶ್ನೆ ಸಹಜವಲ್ಲವೆ?

ಇಸ್ಲಾಮಿನ ಧಾರ್ಮಿಕ ದೃಷ್ಟಿಕೋನದಲ್ಲಿ ಉಪವಾಸಕ್ಕೆ ಬಹಳ ದೊಡ್ಡ ಶಕ್ತಿಯಿದೆ. ಮನುಷ್ಯನು ಸ್ವತಃ ಮನಃ ಪರಿವರ್ತನೆಗೆ ಒಳಗಾಗಲು, ಆತ್ಮನಿಯಂತ್ರಣವನ್ನು ಸಾಧಿಸಲು ಉಪ ವಾಸಕ್ಕೆ ಸಾಧ್ಯ. ಉಪವಾಸವನ್ನು ಮನುಷ್ಯನಿಗೆ ಕಡ್ಡಾಯಗೊಳಿಸಿರುವುದೇಕೆ? ಎಂಬ ಪ್ರಶ್ನೆಗೆ ಖುರ್‌ಆನ್ ನೀಡುವ ಉತ್ತರ- "ನೀವು ಭಯಭಕ್ತಿಯುಳ್ಳವರಾಗಲು!" ಯಾರು ಅಲ್ಲಾಹನಲ್ಲಿ ಭಯ ಭಕ್ತಿಗಳನ್ನು ಹೊಂದಿರುತ್ತಾರೋ, ಅವರು ಯಾವತ್ತೂ ಕೆಟ್ಟವರಾಗಲು ಸಾಧ್ಯವಿಲ್ಲ ತಾನೆ?

ನಿಜವಾಗಿಯೂ ಭ್ರಷ್ಟಾಚಾರಕ್ಕೆ ಮದ್ದು ಇರುವುದು ದೇವಭಕ್ತಿಯಲ್ಲಿಯೆ. ಅಲ್ಲಾಹನಲ್ಲಿ ನಂಬಿಕೆ, ಅವನ ಶಿಕ್ಷೆಯ ಬಗ್ಗೆ ಭಯ ಇರುವ ಮನುಷ್ಯನು ಅಲ್ಲಾಹು ನ್ಯಾಯವೆಂದು ತಿಳಿಸಿರುವ ದಾರಿಯಲ್ಲಿ ಮಾತ್ರ ಸಾಗುತ್ತಾನೆ. ಭ್ರಷ್ಟಾಚಾರವನ್ನು ಅಲ್ಲಾಹು ಉಗ್ರವಾಗಿ ವಿರೋಧಿಸಿರುವುದರಿಂದ ಭಕ್ತನಾದವನು ಯಾವತ್ತೂ ಅಂತಹ ಕಾರ್ಯಕ್ಕಿಳಿಯಲಾರ. ಅವನ ಮುಂದೆ ಭ್ರಷ್ಟಾಚಾರವೆಸಗಲು ಸಾಕಷ್ಟು ಮುಕ್ತ ಅವಕಾಶಗಳಿದ್ದರೂ, ಸಿಕ್ಕಿ ಬೀಳುವ ಯಾವುದೇ ಅಪಾಯಗಳಿಲ್ಲದಿದ್ದರೂ ಅಲ್ಲಾಹನ ಮುಂದೆ ಸಿಕ್ಕಿ ಬಿದ್ದರೆ? ಎಂಬ ಭಯ ಅವನನ್ನು ಕಾಡುವುದರಿಂದ ಅವನು ಭ್ರಷ್ಟತೆಗಿಳಿಯಲಾರ. ತನಗಾಗಿಯೋ, ತನ್ನ ಕುಟುಂಬಕ್ಕಾಗಿಯೋ ಸರ್ಕಾರೀ ಸೊತ್ತನ್ನು ದುರುಪಯೋಗಪಡಿಸಲಾರ. ನಿದರ್ಶನವಾಗಿ, ನಮ್ಮ ಮುಂದೆ ಖಲೀಫಾ ಉಮರುಲ್ ಫಾರೂಖ್ (ರ) ಇದ್ದಾರೆ. ಅವರ ಕೆಲವು ಘಟನೆಗಳನ್ನು ಗಮನಿಸಿ;

**ಘಟನೆ-1:** ಖಲೀಫಾ ಉಮರುಲ್ ಫಾರೂಖ್ (ರ) ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಗರಡಿಯಲ್ಲಿ ಪಳಗಿದ ಸದ್ಭಕ್ತ. ವಿಶಾಲ ಇಸ್ಲಾಮೀ ಸಾಮ್ರಾಜ್ಯದ ಸರ್ವಾಧಿಪತಿಯಾಗಿದ್ದ ಸಂದರ್ಭದಲ್ಲೊಮ್ಮೆ ನಾಡಿನ ಜನತೆಗೆ ವಿತರಿಸಲೆಂದು ವಿದೇಶದಿಂದ ಸುಗಂಧ ದ್ರವ್ಯ

(ಕೊನೇ ಪುಟಕ್ಕೆ)

# ರಮಳಾನೋತ್ತರ ಧಾರ್ಮಿಕತೆ

ಕೆ.ಎಂ.

ನಿಜಕ್ಕೂ ರಮಳಾನಿನಲ್ಲಿ ಪಿಶಾಚಿಯನ್ನು ಬಂಧಿಸಿಡಲಾಗಿತ್ತು ಎನ್ನುವುದು ರಮಳಾನಿನ ಮರುದಿನ ನಮಗೇ ಮನವರಿಕೆಯಾಗಿ ಬಿಡುತ್ತದೆ. ಆವರೆಗಿನ ಒಂದು ತಿಂಗಳಲ್ಲಿ ಅದ್ಸಾನ್ ಕರೆ ಕೇಳಿಸಿದಾಕ್ಷಣ ಮಸೀದಿಯ ದಾರಿ ಹಿಡಿಯುತ್ತಿದ್ದವನಿಗೆ, ಈದುಲ್ ಫಿತ್ವ್‌ರಿನ ತಕ್ಬೀರ್ ನಿನಾದ ಕೇಳಿಸಿದ ಬಳಿಕ ಅದ್ಸಾನ್ ಕಿವಿಗೆ ಕೇಳಿಸುತ್ತಲೇ ಇಲ್ಲ. ಖುರ್‌ಆನ್ ಗ್ರಂಥವನ್ನು ಬಿಡಿಸಿ ನೋಡುವುದಂತೂ ದೂರದ ಮಾತು. ದ್ವಿಕ್ರ್, ದುಆಗಳಲ್ಲಿ ನಾಲಗೆ ಚಲಿಸುವುದು ಅತ್ಯಂತ ಅಪರೂಪ. ಅಂದರೆ ತಿಂಗಳ ಕಾಲ ಬಂಧನದಲ್ಲಿದ್ದ ಪಿಶಾಚಿ ಬಿಡುಗಡೆಯಾಗಿದ್ದಾನೆನ್ನುವುದು ನಮ್ಮ ಅನುಭವಕ್ಕೇ ಬಂದು ಬಿಡುತ್ತದೆ.

ಪಿಶಾಚಿ ಮನುಷ್ಯನ ಪ್ರತ್ಯಕ್ಷ ಶತ್ರು. ಮನುಕುಲದ ಆರಂಭದಿಂದಲೇ ಆರಂಭಗೊಂಡ ಶತ್ರುತ್ವವದು. ಆದಿ ಮಾನವ ಆದಂ ನಬಿ (ಅ) ರವರಿಗೆ ಅರ್ಹ ಗೌರವ ನೀಡದೆ ಸ್ವರ್ಗದಿಂದ ಹೊರಗಟ್ಟಲ್ಪಟ್ಟ ಕ್ಷಣದಲ್ಲೇ, ಆದಂ ಸಂಗತಿಯನ್ನು ಸ್ವರ್ಗದ ದಾರಿಯಿಂದ ತಪ್ಪಿಸಲು ಪ್ರತಿಜ್ಞೆಮಾಡಿಕೊಂಡವನು ಇಬ್ಲೀಸ್. ಮನುಷ್ಯನ ದೇಹದಲ್ಲಿ ರಕ್ತ ಸಂಚರಿಸುವಲ್ಲೆಲ್ಲ ತಾನು ಕೂಡಾ ಸಂಚರಿಸಿ, ಮನುಷ್ಯನನ್ನು ಕೆಡುಕಿನೆಡೆಗೆ ಪ್ರಚೋದಿಸುವುದು ಪಿಶಾಚಿಯ ಜೀವನ ಪರ್ಯಂತ ಡ್ಯೂಟಿ. ಇಂತಹ ಪಿಶಾಚಿಯನ್ನು ದೂರವಿಟ್ಟಿದ್ದರಿಂದಲೇ ರಮಳಾನಿನಲ್ಲಿ ಸತ್ಕರ್ಮಗಳಿಗೆ ಮುನ್ನುಗ್ಗಲು ಮನುಷ್ಯನಿಗೆ ಸಾಧ್ಯವಾಗಿದೆ ಎಂದ ಮೇಲೆ ಉಳಿದ ದಿನಗಳಲ್ಲೂ ಅವನನ್ನು ದೂರವಿಟ್ಟು ಸದಾ ಸತ್ಕರ್ಮಗಳಲ್ಲಿ ತೊಡಗಿಕೊಂಡು ಸ್ವರ್ಗದ ದಾರಿ ಸೇರುವುದು ಜಾಣ್ಮೆಯಲ್ಲವೆ?

ರಮಳಾನಿನಲ್ಲಿ ಬಂಧನದಲ್ಲಿದ್ದ ಪಿಶಾಚಿಯನ್ನು, ರಮಳಾನಿನ ನಂತರವೂ ನಮ್ಮತ್ತ ಸುಳಿಯದಂತೆ ಮಾಡಲು ಸಾಧ್ಯವಿಲ್ಲವೆ? ಖಂಡಿತಾ ಇದೆ.

→3ನೇ ಪುಟಕ್ಕೆ


We Craft as per your Choice...
Cell : 94815 14543
94815 14541
Rifa Burkha House
Shop No. 220, Kunil Complex, KANKANADY, MANGALORE. Ph.: 0824-2434543
Burkha, Hijab, Shawls, Scarf, Irani Shawls & Stiching



ಸೆಪ್ಟೆಂಬರ್ ಸಂಚಿಕೆ ಮಾರುಕಟ್ಟೆಯಲ್ಲಿ
ಹಾಗೆಲ್ಲ ನೋಡಿದರೆ ಬದುಕುವುದು ಬೇಡವೆ?


ಇನ್ನೂ ಹಲವಾರು ಉತ್ತಮ ಬರಹಗಳೊಂದಿಗೆ...

ಮದುವೆ ಖರೀದಿ ಮೇಲೆ ವಿಶೇಷ ರಿಯಾಯಿತಿ

ಅಭಿಮಾನ್ ಗೋಲ್ಡ್
ಸದಾ ಬಾಳುವ ಪರಿಶುದ್ಧತೆ
916 gold
Gold I Silver I Birth Stone
ಸೌಂದರ್ಯದ ವರ್ಣನೆಗೆಂದೇ...


0820 - 4295313, (S) 2593313, Mob: 9964428159, 9880898343
ಅಂಜುಮಾನ್ ರೋಡ್, ಸಿಟಿ ಬಸ್ ಸ್ಟ್ಯಾಂಡ್, ಉಡುಪಿ.
ನಿಮ್ಮ ಮಳಿಗೆ ಭಾನುವಾರವೂ ತೆರೆದಿರುತ್ತದೆ.
• ಅತ್ಯಂತ ಕಡಿಮೆ ಬೆಲೆಯಲ್ಲಿ ನಿಮ್ಮ ಆಯ್ಕೆಯ ಪರಿಶುದ್ಧ ಚಿನ್ನಾಭರಣ. ಚಿನ್ನಾಭರಣಗಳ ವಿಸ್ತೃತ ಸಂಗ್ರಹ. • ಆಭರಣಕ್ಕಾಗಿ 100% ಬೈಬ್ಯಾಕ್ ಖಾತರಿ. ಜೀವನ ಪರ್ಯಂತ ಉಚಿತ ನಿರ್ವಹಣೆ. • ಚಿನ್ನದ ಪರಿಶುದ್ಧತೆಯನ್ನು ಪರೀಕ್ಷಿಸಲು ಗೋಲ್ಡ್ ಚೆಕ್ ಕ್ಯಾರೆಟ್ ಅನಲೈಸರ್ ವ್ಯವಸ್ಥೆ. • ನಿಮ್ಮ ಹಳೆ ಚಿನ್ನಾಭರಣವನ್ನು ಹೊಸ ಚಿನ್ನಾಭರಣದ ಜೊತೆಗೆ ವಿನಿಮಯ ಮಾಡುವಾಗ ನಿಮ್ಮ ಹಳೆ ಚಿನ್ನಾಭರಣಕ್ಕೆ ಪೂರ್ತಿ ಮೌಲ್ಯ ಪಡೆಯಿರಿ.

# ಧಾರ್ಮಿಕ ವಿದ್ಯೆಯ ಕದ ತೆರೆಯುವಾಗ...

ಧಾರ್ಮಿಕ ಹಿಂದುಳಿಯುವಿಕೆಯ ಕಾರಣದಿಂದ ಉತ್ತರ ಕರ್ನಾಟಕದ ಹಳ್ಳಿಗಳ ಬಗ್ಗೆ ನಾವು ಅನುಕಂಪ ತೋರಿಸುವುದಿದೆ. ನಿಜಕ್ಕೂ ಅಲ್ಲಿನ ಧಾರ್ಮಿಕ ಸ್ಥಿತಿ ಅತ್ಯಂತ ಅನುಕಂಪಾರ್ಹ ಕೂಡಾ. ಅಲ್ಲಾಹು ಮತ್ತು ರಸೂಲ್ ಸ್ವಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಕೂಡಾ ಸರಿಯಾದ ತಿಳುವಳಿಕೆ ಇಲ್ಲದ, ಕಡ್ಡಾಯ ನಮಾಝ್, ವ್ರತಾದಿಗಳ ಬಗ್ಗೆ ಅರಿವಿಲ್ಲದ, ತೌಹೀದ್ ಮತ್ತು ಶಿರ್ಕ್‌ಗಳ ಬಗ್ಗೆ ಅಂತರ ಗೊತ್ತಿಲ್ಲದ, ಮದ್ಯಪಾನ ಮತ್ತಿತರ ನಿಷಿದ್ಧಗಳ ಬಗ್ಗೆ ಪರಿಜ್ಞಾನವಿಲ್ಲದ ಬಹುದೊಡ್ಡ ಜನ ವಿಭಾಗವೊಂದು ಅಲ್ಲಿ ಬದುಕುತ್ತಿದೆ. ಅವರಿಗೆ ಹೋಲಿಸಿಕೊಂಡಾಗ ಕರಾವಳಿಯ ಮುಸ್ಲಿಮರಿಗೆ ತಾವು ಚೆನ್ನಾಗಿದ್ದೇವೆಂಬ ಭಾವನೆ ಬರುವುದುಂಟು. ಆದರೆ ಒಂದೇ ರಾಜ್ಯದೊಳಗಿನ ಒಂದೇ ಸಮಾಜದೊಳಗೆ ಇಷ್ಟೊಂದು ಅಗಾಧವಾದ ಅಂತರ ನಿರ್ಮಾಣಕ್ಕೆ ಕಾರಣ ಮದ್ರಸಗಳು ಎನ್ನುವುದನ್ನು ನಾವು ತಿಳಿದುಕೊಂಡಿದ್ದೇವೆಯೇ?

ಭಾರತದಲ್ಲಿ ಇಸ್ಲಾಮೀ ಧಾರ್ಮಿಕತೆಯ ತವರೂರು ಎನಿಸಿದ ಕೇರಳದಲ್ಲಿ ಮದ್ರಸಾ ಚಳವಳಿ ಬೆಳೆದು ಬಂದಾಗ, ಭೌಗೋಳಿಕವಾಗಿ ಆ ರಾಜ್ಯದೊಂದಿಗೆ ತಗುಲಿಕೊಂಡಿರುವ ಕರಾವಳಿ ಕರ್ನಾಟಕದ ಜಿಲ್ಲೆಗಳಿಗೂ ಮದ್ರಸಾ ಚಳವಳಿಯ ಫಲ ಹರಡಿಕೊಂಡಿತು. ಈ ಬೆಳವಣಿಗೆಯೇ ಇಲ್ಲಿನ ಧಾರ್ಮಿಕ ಮುನ್ನಡೆಯ ಕಾರಣವಾದರೆ, ಉತ್ತರ ಕರ್ನಾಟಕದ ಹಿನ್ನಡೆಗೂ ಮದ್ರಸಗಳ ಕೊರತೆಯೇ ಕಾರಣ.

ಮಸ್ಜಿದ್‌ಗಳ ನಿರ್ಮಾಣ ಎಂಬ ಬಹಳ ದೊಡ್ಡ ಸತ್ಕಾರ್ಯದ ಬಗ್ಗೆ ಸರ್ವೇ ಸಾಮಾನ್ಯವಾಗಿ ಎಲ್ಲರಿಗೂ ಆಸಕ್ತಿಯಿರುತ್ತದೆ. ಮಸೀದಿಯ ತಳಅಂತಸ್ತಿನಲ್ಲೇ ನಮಾಜಿಗೆ ಜನ ಇಲ್ಲದಿದ್ದರೂ ಮೇಲಂತಸ್ತು ನಿರ್ಮಿಸುವುದುಂಟು. ಆದರೆ, ಮಸೀದಿಯಲ್ಲಿ ನಮಾಝ್ ಮಾಡಲು ಬೇಕಾದ ತರಬೇತಿಯನ್ನು ಕೊಡುವ ಮದ್ರಸಗಳ ಬಗ್ಗೆ ಈ ಮಟ್ಟದ ಕಾಳಜಿಯಿಲ್ಲದಿರುವುದು ವಿಪರ್ಯಾಸವಲ್ಲವೆ?

ಮುಸ್ಲಿಂ ಮನೆಗಳಿರುವ ಪ್ರತಿ ಮೊಹಲ್ಲಾಗಳಲ್ಲೂ ಮದ್ರಸಗಳಿರಬೇಕು. ಧರ್ಮದ ಪ್ರಾಥಮಿಕ ಜ್ಞಾನ ಸಿಗದಿದ್ದರೆ ಮುಸ್ಲಿಮನಾಗಿ ಬದುಕಲು ಸಾಧ್ಯವಿಲ್ಲ. ಹಾಗಾಗಿ ಊರಿನಲ್ಲಿ ಮದ್ರಸಗಳನ್ನು ಸ್ಥಾಪಿಸುವುದು ಊರಿನವರ ಸಾಮೂಹಿಕ ಹೊಣೆಗಾರಿಕೆ. ಮಕ್ಕಳಿಗೆ ದೀನೀ ಶಿಕ್ಷಣ ನೀಡಬೇಕಾದ್ದು ಹೆತ್ತವರಿಗೆ ಕಡ್ಡಾಯ. ಮದ್ರಸಗಳ ಮೂಲಕ ಅವರು ಅದನ್ನು ನೀಡಬೇಕು. ಮದ್ರಸಗಳಿದ್ದರೂ ತಮ್ಮ ಮಕ್ಕಳನ್ನು ಅದಕ್ಕೆ ಕಳುಹಿಸದಿರುವ ಹೆತ್ತವರು ತಾವು ಮಾಡುತ್ತಿರುವುದು ಎಂತಹ ಅಪರಾಧ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಪರಲೋಕದಲ್ಲಿ ಸ್ವರ್ಗಕ್ಕೆ ಹೋಗಬೇಕಾದ ಮಾತಾಪಿತರನ್ನು ನರಕ ವಿಧಿಸಲ್ಪಟ್ಟ ಅವರ ಮಕ್ಕಳು ಅಡ್ಡಗಟ್ಟುವ ಬಗ್ಗೆ, ಮಾತಾಪಿತರು ತನಗೆ ಸೂಕ್ತ ತರಬೇತಿ ಕೊಡದ್ದರಿಂದಲೇ ನಾನು ಅಪರಾಧಿಯಾಗಿದ್ದು, ಇದಕ್ಕೆ ಕಾರಣಕರ್ತರಾದ ಮಾತಾಪಿತರಿಗೆ ದುಪ್ಪಟ್ಟು ಶಿಕ್ಷೆ ನೀಡಬೇಕೆಂದು ಮಕ್ಕಳು ಅಲ್ಲಾಹನಲ್ಲಿ ಆಗ್ರಹಿಸುವ ಬಗ್ಗೆ ಖುರ್‌ಆನ್ ಪ್ರಸ್ತಾಪಿಸಿದೆ. ತಮ್ಮ ಮಕ್ಕಳು ತಮ್ಮ ಸ್ವರ್ಗದ ದಾರಿಗೆ ಮುಳ್ಳಾಗುವ ದುರಂತದ ಬಗ್ಗೆ ಪ್ರತಿಯೊಬ್ಬ ಹೆತ್ತವರೂ ಜಾಗರೂಕರಾಗಬೇಕು. ಲೌಕಿಕ ಶಿಕ್ಷಣಕ್ಕೆ ಅಡ್ಡಿಯಾದೀತೆಂಬ ಆತಂಕದಲ್ಲಿ ಮಕ್ಕಳನ್ನು ಮದ್ರಸಾ ಶಿಕ್ಷಣದಿಂದ ವಂಚಿತಗೊಳಿಸುವ ಹೆತ್ತವರು ತಾವೇ ತಮ್ಮ ಗೋರಿ ತೋಡುತ್ತಿದ್ದಾರೆ. ಶಾಲಾ ಕಾಲೇಜಿನ ಶಿಕ್ಷಣಕ್ಕೆ ಅಡ್ಡಿಯಾಗದಂತೆ ದೀನೀ ಶಿಕ್ಷಣಕ್ಕೆ ಇಂದು ಅವಕಾಶಗಳಿವೆ. ತುಸು ತ್ಯಾಗ ಮನೋಭಾವ ಬೇಕಷ್ಟೆ.

ಆಧುನಿಕ ಶಿಕ್ಷಣ ಮನಃಶಾಸ್ತ್ರಕ್ಕೆ ಹೊಂದಿಕೊಂಡ ಮದ್ರಸಾ ವ್ಯವಸ್ಥೆಯನ್ನು ಸಮಾಜ ಸದುಪಯೋಗಪಡಿಸಿಕೊಳ್ಳಬೇಕು. ಅರ್ಹ ಶಿಕ್ಷಕರಿಗೆ ಅರ್ಹ ವೇತನವನ್ನು ನೀಡಬೇಕು. ಕಡಿಮೆ ವೇತನವು ಶಿಕ್ಷಕರನ್ನು ಈ ರಂಗದಿಂದ ವಿಮುಖಗೊಳಿಸಿರುವುದರ ಪರಿಣಾಮವಾಗಿ ವಿದೇಶಗಳಿಗೂ, ಇತರ ವ್ಯಾಪಾರ ವಹಿವಾಟುಗಳೂ ಮುಅಲ್ಲಿಮರ ಪ್ರತಿಭಾ ಪಲಾಯನ ನಡೆದಿದ್ದು, ಮುಅಲ್ಲಿಮರ ಕೊರತೆ ಅನುಭವಕ್ಕೆ ಬರುತ್ತಿದೆ. ಸೂಕ್ತ ವೇತನ ನೀಡುವ ಮೂಲಕ ಮುಅಲ್ಲಿಮರನ್ನು ಉಳಿಸಿಕೊಳ್ಳಲು, ಇನ್ನಷ್ಟು ಮುಅಲ್ಲಿಮರನ್ನು ಸೆಳೆಯಲು ಮದ್ರಸಾ ರಂಗಕ್ಕೆ ಸಾಧ್ಯವಾಗಬೇಕು. ಮಕ್ಕಳನ್ನು ಆಕರ್ಷಿಸುವಂತಹ ವಾತಾವರಣ ವನ್ನು ಮದ್ರಸಗಳಲ್ಲಿ ರೂಪಿಸಬೇಕಿದೆ.

ಮದ್ರಸಾಗಳ ಪ್ರಾಥಮಿಕ ಶಿಕ್ಷಣ ಪಡೆದ ಬಳಿಕ ಪ್ರೌಢ ಶಿಕ್ಷಣ ನೀಡುವ ದರ್ಸ್‌ಗಳು ಇಂದು ಅಸ್ತಮಾನದ ಅಂಚಿನಲ್ಲಿವೆ. ಮದ್ರಸಗಳಿಗೆ ಬೇಕಾದ ಮುಅಲ್ಲಿಮರನ್ನು ಸೃಷ್ಟಿಸಲು, ಸಮಾಜದ ಧಾರ್ಮಿಕ ಚಟುವಟಿಕೆಗಳಿಗೆ ನಾಯಕತ್ವ ನೀಡಲು, ದೀನೀ ಬೋಧನೆಗಳನ್ನು ನಡೆಸಲು ಅರ್ಹರಾದ ವಿದ್ವಾಂಸರ ಸೃಷ್ಟಿ ದರ್ಸ್‌ಗಳನ್ನು ಅವಲಂಬಿಸಿದೆ. ಈಗಾಗಲೇ ಧಾರ್ಮಿಕ ಹುದ್ದೆಗಳಿಗೆ ಅರ್ಹರಾದ ಉಲಮಾಗಳ ಕೊರತೆ ಎದುರಾಗುತ್ತಿದ್ದು ಇದೇ ಪರಿಸ್ಥಿತಿ ಮುಂದುವರಿದರೆ ಭವಿಷ್ಯ ಭಯಾನಕ. ದರ್ಸ್‌ಗಳ ಪುನರುಜ್ಜೀವನಕ್ಕೆ ಹೊಸ ಹೊಸ ಪ್ರಯೋಗಗಳನ್ನು ನಡೆಸುವುದರೊಂದಿಗೆ ಈಗಿನ ದಅ್‌ವಾ ಕಾಲೇಜ್‌ಗಳು ಧಾರ್ಮಿಕ ವಿದ್ವಾಂಸರನ್ನು ಸೃಷ್ಟಿಸುವುದಕ್ಕೆ ಹೆಚ್ಚು ಒತ್ತು ಕೊಡಬೇಕು. ಧಾರ್ಮಿಕ ವಿದ್ವತ್ತಿನ ಪ್ರಯೋಗಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಲು ಸಾಧ್ಯವಾಗಬೇಕು. ಅರಬಿಕ್ ಕಾಲೇಜ್‌ಗಳು ಪದವಿ ನೀಡುವುದಕ್ಕಷ್ಟೇ ಪ್ರಾಮುಖ್ಯತೆ ನೀಡದೆ ವಿದ್ವತ್ ಪೂರ್ಣರಾದ, ಆಧುನಿಕ ಜಗತ್ತಿನೊಂದಿಗೆ ಸ್ಪಂದಿಸುವ ಪ್ರಬುದ್ಧ ವಿದ್ವಾಂಸರನ್ನು ರೂಪುಗೊಳಿಸಲು ವಿಶೇಷ ಗಮನ ನೀಡಬೇಕು.

ಉತ್ತರದ ಜಿಲ್ಲೆಗಳ ದುರಂತ ಚಿತ್ರಣಗಳನ್ನು ಕೇವಲ ಅನುಕಂಪ ಪ್ರಕಟಿಸುವುದಕ್ಕಷ್ಟೇ ಸೀಮಿತಗೊಳಿಸದೆ, ಅಲ್ಲಿ ಕೂಡಾ ವ್ಯವಸ್ಥಿತ ಮದ್ರಸಗಳನ್ನು ಸ್ಥಾಪಿಸುವ ಪ್ರಯತ್ನಕ್ಕೆ ಪ್ರೇರಣೆಯಾಗಬೇಕು. ಮದ್ರಸಗಳ ಮೂಲಕ ಅಲ್ಲೂ ಕಾಲಾಂತರದಲ್ಲಿ ಸಮಗ್ರವಾದ ಸುಧಾರಣೆ ಸಾಧ್ಯವಿದೆ.

ದೀನೀ ಶಿಕ್ಷಣ ಮಕ್ಕಳಿಗಷ್ಟೇ ಅಲ್ಲ, ಆಬಾಲವೃದ್ಧ ಜನರೆಲ್ಲರಿಗೂ ಬೇಕು. ಮಕ್ಕಳು ಮದ್ರಸಾ ಬಿಟ್ಟ ಬಳಿಕವೇ ದಾರಿ ತಪ್ಪುವುದು ಹೆಚ್ಚು. ಈ ಹಂತದಲ್ಲಿ ಅವರನ್ನು ಪ್ರಜ್ಞಾಸ್ಥಿತಿಯಲ್ಲಿಡಲು, ಮಕ್ಕಳನ್ನು ಮೊದಲ ಶಿಕ್ಷಕಿಯೆನಿಸುವ ಮಾತೆಯರಲ್ಲಿ ಹಾಗೂ ಸಮಾಜದ ಪ್ರಬಲ ಶಕ್ತಿಯಾದ ಯುವಜನರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸಲು ವಯಸ್ಕರ ಶಿಕ್ಷಣ ಕೇಂದ್ರಗಳ ತೆರೆಯುವ ಬಗ್ಗೆಯೂ ಸಮಾಜ ಚಿಂತಿಸಬೇಕಿದೆ. ಇಸ್ಲಾಮಿನ ಜೀವಂತಿಕೆಯಿರುವುದೇ ದೀನೀ ಶಿಕ್ಷಣದಲ್ಲಿ. ಧರ್ಮ ಜ್ಞಾನವಿಲ್ಲದವನ ಇಸ್ಲಾಂ ನಾಮಮಾತ್ರ. ಪವಿತ್ರ ರಮಳಾನ್ ಮುಗಿದು ದೀನೀ ವಿದ್ಯಾಲಯಗಳು ತೆರೆಯುವ ಹೊತ್ತಿನಲ್ಲಿ ಸಮಾಜಕ್ಕೆ ಧಾರ್ಮಿಕ ಶಿಕ್ಷಣ ನೀಡಬಲ್ಲ ಹೊಸಹೊಸ ಪ್ರಯೋಗಗಳ ಬಗ್ಗೆ ಸಮಾಜ ಕಣ್ಣು ತೆರೆಯಲಿ. ■

## ಪ್ರವಾದಿ ﷺ ನುಡಿರತ್ನಗಳು

### 549 ಬೀಳ್ಕೊಡುಗೆ

ಉಮರ್ ಬಿನ್ ಖತ್ತಾಬ್ (رضي الله عنه) ಹೇಳುತ್ತಾರೆ; ನಾನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಉಮ್ರಕ್ಕಾಗಿ ಅನುಮತಿ ಕೇಳಿದೆ. ಅನುಮತಿ ನೀಡಿ ಅವರು ಹೇಳಿದರು; ನನ್ನ ಮುದ್ದು ಸಹೋದರಾ, ನಿಮ್ಮ ದುಆದಲ್ಲಿ ನಮ್ಮನ್ನು ಮರೆಯಬೇಡಿ.

ಇನ್ನೊಂದು ವರದಿ: ಸಹೋದರಾ, ನಿಮ್ಮ ಪ್ರಾರ್ಥನೆಯಲ್ಲಿ ನಮ್ಮನ್ನೂ ಪಾಲ್ಗೊಳ್ಳಿಸಿ.

ಉಮರ್ (رضي الله عنه) ಹೇಳುತ್ತಾರೆ; ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಆ ಮಾತುಗಳಿಗೆ ಬದಲಾಗಿ ಇಡೀ ಲೋಕವೇ ಸಿಕ್ಕಿದರೂ ನನಗೆ ಸಂತೋಷವಾಗದು. (ಅಬೂದಾವೂದ್, ತಿರ್ಮುದಿ)

ಸಾಲಿಂ ಬಿನ್ ಅಬ್ದುಲ್ಲಾ (رضي الله عنه) ರಿಂದ ವರದಿ. ಯಾರನ್ನಾದರೂ ಪ್ರಯಾಣಕ್ಕೆ ಬೀಳ್ಕೊಡುವಾಗ ಅಬ್ದುಲ್ಲಾಹಿಬ್ನು ಉಮರ್ (رضي الله عنه) ಹೇಳುತ್ತಿದ್ದರು; ಬನ್ನಿ, ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನು ಬೀಳ್ಕೊಡುತ್ತಿದ್ದ ರೀತಿಯಲ್ಲಿ ನಾನು ನಿಮ್ಮನ್ನು ಬೀಳ್ಕೊಡುತ್ತೇನೆ. ನಂತರ ಅವರು ಹೇಳುವರು; ಅಸ್ತವ್‌ದಿಉಲ್ಲಾಹ ದೀನಕ ವ ಅಮಾನತಕ ವ ಖವಾತೀಮ ಅಮಲಿಕ (ನಿನ್ನ ಧರ್ಮ, ನಿನ್ನ ನಂಬಿಕೆ, ನಿನ್ನ ಕೆಲಸಗಳ ಅಂತಿಮ ಪರಿಣಾಮಗಳ ರಕ್ಷಣೆಯನ್ನು ಅಲ್ಲಾಹನಿಗೆ ನಾನು ವಹಿಸಿಕೊಡುತ್ತಿದ್ದೇನೆ.) (ತಿರ್ಮುದಿ)

'ರಮಳಾನಿನಲ್ಲಿ ಬಂದ ಸ್ವಾತಂತ್ರ್ಯ' ಕೆ.ಎಂ.ರವರ ಲೇಖನವು ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಮರ ಪಾತ್ರ ಹಾಗೂ ಸ್ವತಂತ್ರ ಭಾರತದ ವರ್ತಮಾನ ದುರವಸ್ಥೆಗಳನ್ನು ಚುಟುಕಾಗಿ ವಿಶ್ಲೇಷಿಸಿತು. ದೇಶ ಕಟ್ಟುವುದರಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿದ ಮುಸ್ಲಿಮರನ್ನು ಗಾಂಧೀವಾದಿ ಅಣ್ಣಾ ಹಝಾರೆಯೂ ನಿರ್ಲಕ್ಷಿಸಿದರೆ? ಅಥವಾ ತಮ್ಮ ಟೀಮ್‌ನಲ್ಲಿ ಸೇರಲು ಅರ್ಹರಾದ ಒಬ್ಬ ಮುಸ್ಲಿಮರೂ ಅವರಿಗೆ ಸಿಗಲಿಲ್ಲವೆ? **- ನಸ್ವೀರ್ ಕೆ.ಎ.ವೇಣೂರು**

ಮಾಚಾರ್‌ರವರು ಬರೆಯುತ್ತಿರುವ 'ಗಣ್ಯರು ಇಸ್ಲಾಮಿನತ್ತ' ಲೇಖನ ಮಾಲೆ ಚೆನ್ನಾಗಿದೆ. ಖುರ್‌ಆನ್ ಮುಟ್ಟಿದಾಗಲೇ ಬದಲಾಗಿ ಬಿಟ್ಟ ಕರೀಂ ಬರ್ನ್‌ರವರ ಕಥೆ ಕುತೂಹಲ ಮೂಡಿಸಿತು. **-ರಹ್ಮತುನ್ನಿಸಾ ನೆಲ್ಯಾಡಿ**

ಇಸ್ಲಾಮಿನ ಆದರ್ಶಯೋಗ್ಯ ಆರ್ಥಿಕತೆಯ ಪ್ರಮುಖ ಅಂಗವಾದ ಕಡ್ಡಾಯದಾನ 'ಝಕಾತ್' ವಿತರಣೆಯ ಬಗ್ಗೆ ಸಮಗ್ರ ಮಾಹಿತಿ ನೀಡಿದ ಎಸ್.ಪಿ.ಹಂಝ ಸಖಾಫಿಯವರ ಲೇಖನವು ತುಂಬಾ ಪ್ರಯೋಜನಕಾರಿಯಾಯಿತು. ಲೈಲತುಲ್ ಖದ್‌ರ್ ಕುರಿತ ಬರಹಗಳು ಆಧ್ಯಾತ್ಮಿಕ ಆಸಕ್ತಿ ಮೂಡಿಸಿತು. **-ಮಜೀದ್ ಅಲ್‌ಹುಸ್ನಾ, ಬಿ.ಸಿ.ರೋಡ್**

ರಮಳಾನ್ ವಿಶೇಷಾಂಕ ಸರ್ವಾಂಗ ಸುಂದರವಾಗಿತ್ತು. ಪ್ರತಿಯೊಂದು ಬರಹವೂ ಅಧ್ಯಯನಾರ್ಹ. ಅಭಿನಂದನೆಗಳು.

**- ಸಮೀದಾ ಬಾನು, ಕುಂದಾಪುರ**

## 2011 ವಾರದ ನಮಾಝ್ ವೇಳಾಪಟ್ಟಿ 1432

| | ದಿನಾಂಕ | ಸುಬುಹಿ | ಲುಹರ್ | ಅಸರ್(ಶಾ) | ಅಸರ್(ಹ) | ಮಗ್ರಿಬ್ | ಇಶಾ (ಶಾಫಿ) | ಇಶಾ (ಹನಫಿ) | ಉದಯ |
|---|---|---|---|---|---|---|---|---|---|
| ಆಗಸ್ಟ್ -ಸೆಪ್ಟೆಂಬರ್ | 22, 23, 24 | 4.58 | 12.36 | 3.43 | 4.58 | 6.51 | 8.04 | 8.13 | 6.18 |
| | 25, 26, 27 | 4.58 | 12.35 | 3.44 | 4.57 | 6.50 | 8.02 | 8.11 | 6.18 |
| | 28,29,30,31 | 4.59 | 12.35 | 3.44 | 4.57 | 6.48 | 8.00 | 8.08 | 6.18 |

ಪ್ರಸ್ತುತ ವೇಳಾಪಟ್ಟಿ ಮಂಗಳೂರು ಕೇಂದ್ರವಾಗಿಟ್ಟುಕೊಂಡು 25 ಕಿ.ಮೀ. ತನಕವಾಗಿದ್ದು ನಂತರ ಪ್ರತಿ 25 ಕಿ.ಮೀ.ಗೆ 1 ನಿಮಿಷದಂತೆ ಸೇರಿಸಿ 100 ಕಿ.ಮೀ. ತನಕ ಉಪಯೋಗಿಸಬಹುದಾಗಿದೆ.

# ವಿದೇಶದಲ್ಲಿದ್ದುಕೊಂಡೇ ಸ್ವದೇಶದಲ್ಲಿ ದಅ್‌ವಾ ನಡೆಸುವಿರಾ?

.... ಕೇರಳಕ್ಕೆ ತಾಗಿ ನಿಂತಿರುವ ಹಾಗೂ ಧಾರ್ಮಿಕ ಸಂಪರ್ಕವಿರುವ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಇಸ್ಲಾಮ್ ಧರ್ಮದ ಚಿಹ್ನೆಗಳನ್ನು ಕಾಣಬಹುದು. ಇತರ ಜಿಲ್ಲೆಗಳಿಗೆ ನಾವು ಪ್ರವೇಶಿಸಿದಂತೆಲ್ಲಾ ಧಾರ್ಮಿಕವಾಗಿ ಅಧೋಗತಿಯನ್ನೇ ನಮಗೆ ದರ್ಶಿಸಬಹುದಾಗಿದೆ.

ಅಲ್ಲಿರುವವರು ಮನುಷ್ಯರಷ್ಟೆ. ಬದುಕಲೋಸ್ಕರ ಕೆಲಸ ಮಾಡುವವರು, ತಿಂದುಣ್ಣುವವರು, ಸುಖಪಡುವವರು. ಇಹಲೋಕದ ಬದುಕಿನ ನಂತರದ ಬಗ್ಗೆ ಅವರಿಗೆ ಅರಿವಿಲ್ಲ. ಅರಿತರೂ ಆ ಬಗ್ಗೆ ಪ್ರಜ್ಞೆ ಇಲ್ಲ. ಹೇಗಿದ್ದರೇನು? ಇರುವಷ್ಟು ದಿನ ಹಾಯಾಗಿರುವುದಷ್ಟೇ ಇವರ ಮನದಿಂಗಿತ.

ಇವರಲ್ಲಿ ಮುಸ್ಲಿಮ್ ಹೆಸರಿನವರಿದ್ದರೂ ಇಸ್ಲಾಮಿನ ಆಚರಣೆಗಳಿಲ್ಲ. ಆದರೆ ಇಸ್ಲಾಮೇತರ ಆಚರಣೆಗಳನ್ನೂ, ಸ್ವಯಂ ಘೋಷಿತ ರೀತಿ ರಿವಾಜುಗಳನ್ನೂ ಇಸ್ಲಾಮ್ ಧರ್ಮದ್ದೆಂದೇ ಬಿಂಬಿಸುವಂತೆ ಇಲ್ಲಿನವರು ಮಾಡುತ್ತಿರುವುದು ಮಾತ್ರ ಖೇದಕರ ಸಂಗತಿ.

ಹುಬ್ಬಳ್ಳಿಯ ಸಂಡೂರು ಎಂಬಲ್ಲಿನ ಮಸ್ಜಿದ್‌ಗೆ ವಿಸ್ಕಿಯನ್ನು ಹರಕೆ ನೀಡಿದ್ದು ಅರಿತಾಗ ಮನಸ್ಸು ತುಂಬಾ ದುಃಖಿಸಿತು....

ಇನ್ನೊಂದೆಡೆ ಕೆಲವರು ಕುದುರೆಯೊಂದನ್ನು ಮಸ್ಜಿದ್‌ಗೆ ಹರಕೆ ಮಾಡಿ, ಅದು ಸತ್ತಾಗ ಅದರ ಸಮಾಧಿಯ ಸುತ್ತಲೂ ಪ್ರದಕ್ಷಿಣೆ ಬರುತ್ತಿದ್ದಾರೆ...

ಹೀಗೆ ಎಷ್ಟೊಂದು ಘಟನೆಗಳು...

ಇಲ್ಲಿನವರಲ್ಲಿ ತಿಳುವಳಿಕೆ ಮೂಡಿಸಲು ಕರ್ನಾಟಕ ರಾಜ್ಯ SSF ಅಧೀನದ IHSAN ತಂಡವು ಕಳೆದ ನಾಲ್ಕು ವರ್ಷಗಳಲ್ಲಿ ದುಡಿಯುತ್ತಿದೆ. ಈ ತನಕದ ರಮಳಾನ್ ತಿಂಗಳಲ್ಲಿ ಸುಮಾರು ನಲವತ್ತರಷ್ಟು ಕಾರ್ಯಕರ್ತರು ಅಲ್ಲಿಗೆ ತೆರಳಿ ಧರ್ಮ ಬೋಧನೆಗಾಗಿ ಕಾರ್ಯಾಚರಿಸುತ್ತಿದ್ದವರು ಈ ಸಲ ನೂರು ಕಾರ್ಯಕರ್ತರು ಸಿದ್ಧರಾಗಿದ್ದಾರೆ.

ಆದರೆ ರಮಳಾನ್ ಮುಗಿದಾಗ ಇವರೆಲ್ಲರೂ ವಾಪಾಸು ಬರುವ ಕಾರಣ ಅಲ್ಲಿನ ಜನರಲ್ಲಿ ಬೆರೆತು ವರ್ಷವಿಡೀ ಬೋಧಿಸಲು ಖಾಯಂ ಬೋಧಕರನ್ನು ನೇಮಕ ಮಾಡಬೇಕಾಗಿದೆ. ಸದ್ಯ ಕರಾಯದ ಕೆ.ಎಂ.ಮರ್ಷದ್ ಹುಮೈದಿಯವರು ದುಡಿಯುತ್ತಿದ್ದಾರೆ. ಅಲ್‌ಹಮ್ದುಲಿಲ್ಲಾಹ್...

ಇದರ ಜತೆಗೇ...

ಅಲ್ಲಿ ಮೊಳಕೆಯೊಡೆಯುತ್ತಿರುವ ಧಾರ್ಮಿಕತೆಯನ್ನು ಉಳಿಸಿ, ಪೋಷಿಸಿ, ಬೆಳೆಸಲು ಆ ಊರುಗಳಲ್ಲಿ ಮದ್ರಸಾಗಳನ್ನು ನಿರ್ಮಿಸುವುದು, ರಮಳಾನ್ ತಿಂಗಳಲ್ಲಿ ದಾಈಗಳನ್ನು ನೇಮಿಸುವುದು, ಅಲ್ಲಿನ ಮನೆಗಳಿಗೆಲ್ಲಾ ಉಚಿತವಾಗಿ ಅಲ್ ಅನ್ಸಾರ್ ಪತ್ರಿಕೆಗಳನ್ನು ಹಂಚುವುದು, ಮುಂತಾದ ವ್ಯವಸ್ಥೆಗಳನ್ನು ಮಾಡುವುದಾಗಿದೆ ನಮ್ಮ ಮೊದಲ ಗುರಿ.

ಇದಕ್ಕಾಗಿ ಕೊಡುಗೈ ದಾನಿಗಳಿಂದ, ಸಹೃದಯಿ ಕಾರ್ಯಕರ್ತರಿಂದ, ಉದಾರ ಮನಸ್ಕರಿಂದ ನೆರವನ್ನು ಕೋರುತ್ತಿದ್ದೇವೆ.

| | |
|---|---|
| ಮದರಸ ನಿರ್ಮಾಣ | 1500 ದಿರ್ಹಂ |
| ದಾಈಗಳಿಗೆ ಗೌರವ ಧನ | 400 ದಿರ್ಹಂ |
| ಅಲ್ ಅನ್ಸಾರ್ 10 ಚಂದಾ | 250 ದಿರ್ಹಂ |

**ಆಸಕ್ತರು ಈ ಕೆಳಗಿನ ಹಿತೈಷಿಗಳನ್ನು ಸಂಪರ್ಕಿಸಿರಿ**

| | |
|---|---|
| ಮಂಗಳೂರು | ಜಿ.ಎಂ.ಮುಹಮ್ಮದ್ ಕಾಮಿಲ್ ಸಖಾಫಿ<br>0091 94484 09049 |
| ಸೌದಿ ಅರೇಬಿಯಾ | ಹಾಫಿಳ್ ಜಿ.ಎಂ.ಸುಲೈಮಾನ್ ಹನೀಫೀ ಜಿದ್ದಾ<br>00966 508 666 833 |
| ಯು.ಎ.ಇ | ಮುಹಮ್ಮದ್ ಇಖ್‌ಬಾಲ್ ಕಾಜೂರು<br>00971 557 687 004 |
| | ಕೆ.ಎಂ.ಮುಹಮ್ಮದ್ ಶಹೀರ್ ಕರಾಯ<br>00971 554 404 751 |
| ಕತಾರ್ | ಅಬ್ದುರ್ರಹೀಮ್ ಸಅದಿ ಪಾಣೆಮಂಗಳೂರು<br>0097 455 364 859 |
| ಬಹರೈನ್ | ಎಸ್.ಎಂ.ಫಾರೂಖ್ ಕುಂಬ್ರ<br>0097 338 375 247 |
| ಕುವೈತ್ | ಪಿ.ಪಿ.ಅಬ್ದುಲ್ ಹಮೀದ್ ಕಾಶಿಪಟ್ನ<br>0096 565 520 784 |

# 'ಮಕ್ಕಾಕ್ಕೆ ದಾರಿ' ರಚಿಸಿದ ಅಸದ್

ಗಣ್ಯರು ಇಸ್ಲಾಮಿನತ್ತ 5

**ಇಸ್ಮಾಈಲ್ ಸಅದಿ ಅಲ್ ಅಫ್ಳಲಿ ಮಾಚಾರ್**

**ಉನ್ನತವಾದ ಸ್ಥಾನದಲ್ಲಿ ಭದ್ರವಾಗಿ ನಿಲ್ಲುವ ಇಸ್ಲಾಮನ್ನು ಕಂಡು ಹೊರಗಿನಿಂದ ಹಲವರು ಇತ್ತ ಹಾದು ಬರುತ್ತಿರುವಾಗ ಒಳಗಿರುವವರೇಕೆ ಅದರ ಮಹತ್ವವನ್ನು ಸರಿಯಾಗಿ ತಿಳಿಯುತ್ತಿಲ್ಲ!? ಎಂಬ ನೋವು ನನ್ನ ಮನಸ್ಸನ್ನು ಕೊರೆಯುತ್ತಿದೆ.**

Austriaದ Livow ಪಟ್ಟಣದಲ್ಲಿ ಅಥವಾ ಇಂದಿನ Polandನಲ್ಲಿ ಕ್ರಿ.ಶ 1900ರಲ್ಲಿ ಜನಿಸಿದ Leopold Weiss ಮುಹಮ್ಮದ್ ಅಸದ್ ಎಂಬ ವಿಖ್ಯಾತ ವ್ಯಕ್ತಿಯಾಗಿ ಮಾರ್ಪಟ್ಟ ಕಥೆಯು ತುಂಬಾ ರೋಚಕವಾಗಿದೆ. ತನ್ನ 22ನೇ ವರ್ಷದಲ್ಲೇ Frankfurter Zeintung ಎಂಬ ಪತ್ರಿಕೆಯ outstanding foreign correspondent ಅಥವಾ ವಿದೇಶಿ ಬಾತ್ಮೀದಾರನಾಗಿ ಲಿಪಾಲ್ಡ್ ಆಯ್ಕೆಯಾಗಿದ್ದರು. ಅಲ್ಮೇನಿಯ,ಇಂಗ್ಲೀಷ್, ಅರಬಿ ಬಾಷೆಯಲ್ಲಿ ಇವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. Road to Mecca (ಮಕ್ಕಾದ ದಾರಿ)ಮತ್ತು Islam at the Cross Roads (ಇಸ್ಲಾಂ ತಿರುವು ರಸ್ತೆಗಳಲ್ಲಿ) ಎಂಬುದು ಇವರ ಪ್ರಮುಖ ಕೃತಿಗಳಾಗಿವೆ. Road to Mecca ಎಂಬ ಕೃತಿಯು 'ಅತ್ತರೀಖು ಇಲಲ್ ಇಸ್ಲಾಂ' ಎಂಬ ಹೆಸರಿನಲ್ಲಿ ಅರಬಿ ಭಾಷೆಗೆ ಅನುವಾದಿಸಲ್ಪಟ್ಟಿದೆ. ತನ್ನ ಇಸ್ಲಾಮಿನ ಕಥೆಯನ್ನು ಸ್ವತಹ ಅವರೇ ವಿವರಿಸುತ್ತಾರೆ.

1922ರಲ್ಲಿ ಜನ್ಮ ಭೂಮಿಯನ್ನು ತ್ಯಜಿಸಿ ಆಫ್ರಿಕಾ ಮತ್ತು ರಶ್ಯನ್ ರಾಜ್ಯಗಳಲ್ಲಿ ನಾನು ವಿದೇಶಿ ಪತ್ರಕರ್ತನಾಗಿ ಕೆಲಸಮಾಡುತ್ತಿದ್ದೆ. ಇದರೆಡೆಯಲ್ಲಿ ಅಲ್ಲೆಲ್ಲಾ ವ್ಯಾಪಿಸಿದ್ದ ಇಸ್ಲಾಮಿನ ಸುಂದರ ಆದರ್ಶವನ್ನು ಮನವರಿಕೆ ಮಾಡಲು ನನ್ನಿಂದ ಸಾಧ್ಯವಾಯಿತು. ಅಲ್ಲದೆ ಅದರಲ್ಲಿ ನಾನು ಮಾನಸಿಕ ಶಾಂತಿಯನ್ನು ಪಡೆಯುತ್ತಿದ್ದೆ. ಹೀಗಿರಲು ಒಮ್ಮೆ ನಾನು ಅಫ್ಘಾನಿಸ್ತಾನದ ಪರ್ವತವೊಂದರಲ್ಲಿ ನಿಂತಿದ್ದ ವೇಳೆ ನನ್ನೆಡೆಗೆ ತಿರುಗಿದ ಒಬ್ಬ ಯುವಕನು ನನ್ನನ್ನು ಬೊಟ್ಟು ಮಾಡುತ್ತಾ ಹೇಳಿದ; 'ನೀನು ಮುಸ್ಲಿಮನಾಗಿರುವಿ. ಆದರೆ ನಿನ್ನ ಕುರಿತು ನೀನು ತಿಳಿದಿಲ್ಲ'. ಯುವಕನ ಈ ಮಾತು ನನ್ನಲ್ಲಿ ಅಚ್ಚರಿ ಹುಟ್ಟಿಸಿತು. ನನ್ನ ಕುರಿತು ಇವರು ಏನು ಹೇಳುತ್ತಿರುವುದು? ನಾನು ಮುಸ್ಲಿಮನಂತೆ! ಏನಿದು? ನಾನು ಅಂದು ಏನೂ ಮಾತನಾಡದೆ ಹಿಂದಿರುಗಿದೆ. 1926 ರಲ್ಲಿ ಯುರೋಪ್‌ನತ್ತ ಸಾಗಿದ ನನ್ನ ಮನಸ್ಸು ನೀನು ಮುಸ್ಲಿಮನಾಗು ಎಂದು ನನ್ನಲ್ಲಿ ನಿರಂತರವಾಗಿ ಹೇಳತೊಡಗಿತು. ಅಂತೆಯೇ 1926ರಲ್ಲಿ ಅಫ್ಘಾನಿಸ್ತಾನದಲ್ಲಿ ನಾನು ಪವಿತ್ರ ಇಸ್ಲಾಮಿನತ್ತ ಹಾದು ಬಂದೆ.

ಇಸ್ಲಾಮಿನ ಯಾವ ಕಾರ್ಯವು ನನ್ನನ್ನು ಹೆಚ್ಚಾಗಿ ಆಕರ್ಷಿಸಿತು ಎಂದು ನನಗೆ ತಿಳಿಯುತ್ತಿಲ್ಲ. ಕಾರಣ ಇಸ್ಲಾಮಿನಲ್ಲಿರುವ ಎಲ್ಲವೂ ಆಕರ್ಷಣೀಯವೆ. ಅದು ಒಂದು ಉತ್ತಮ ಕಟ್ಟಡದಂತೆ. ಆ ಕಟ್ಟಡಕ್ಕೆ ಯಾವ ನ್ಯೂನತೆಯನ್ನೂ ತೋರಿಸಲು ಸಾಧ್ಯವಿಲ್ಲ. ಅದರಲ್ಲಿ ಹೆಚ್ಚು ಕಮ್ಮಿ ಎಂದು ಹೇಳಲೂ ಏನೂ ಇಲ್ಲ. ಯಾವುದೇ ಲೋಪದೋಷಗಳಿಲ್ಲದ ಸುಭದ್ರವಾದ ಕಟ್ಟಡವದು. ಇದೀಗ ನಾನು ಖುರ್‌ಆನನ್ನೂ, ಹದೀಸನ್ನೂ,ಇಸ್ಲಾಮೀ ಭಾಷೆ ಮತ್ತು ಸಂಸ್ಕೃತಿಯನ್ನೂ ಕಲಿತಿದ್ದೇನೆ. ಇಸ್ಲಾಮಿನ ಬಗ್ಗೆಯಿರುವ ವಿರೋಧ ಅಭಿಪ್ರಾಯಗಳನ್ನೂ ನಾನು ಕಂಡಿದ್ದೇನೆ. ಸುಮಾರು 5ವರ್ಷಗಳ ಕಾಲ ಹಿಜಾಝ್ ಮತ್ತು ನಜ್‌ದ್‌ನಲ್ಲಿ ವಾಸಿಸಿದ ನನಗೆ ಅದರಲ್ಲಿ ಅಧಿಕ ಸಮಯವನ್ನು ಮದೀನಾದಲ್ಲಿ ಸವೆಸುವ ಭಾಗ್ಯದೊರಕಿತು.

ಆದರೆ ನನ್ನಲ್ಲಿ ಅತ್ಯಂತ ದುಃಖ ತರುತ್ತಿರುವ ಅಂಶವೇನೆಂದರೆ ಇಷ್ಟು ಸೌಂದರ್ಯವುಳ್ಳ ತತ್ವಗಳನ್ನು, ಸಿದ್ಧಾಂತಗಳನ್ನು ಮುಸ್ಲಿಮರೆಂದು ಹೇಳುವವರು ಯಾತಕ್ಕಾಗಿ ಕಡೆಗಣಿಸುತ್ತಿದ್ದಾರೆ ಎಂಬುದು. ಸರ್ವಧರ್ಮಗಳಿಗಿಂತಲೂ ಉನ್ನತವಾದ ಸ್ಥಾನದಲ್ಲಿ ಭದ್ರವಾಗಿ ನಿಲ್ಲುವ ಇಸ್ಲಾಮನ್ನು ಕಂಡು ಹೊರಗಿನಿಂದ ಹಲವರು ಇತ್ತ ಹಾದು ಬರುತ್ತಿರುವಾಗ ಒಳಗಿರುವವರೇಕೆ ಅದರ ಮಹತ್ವವನ್ನು ಸರಿಯಾಗಿ ತಿಳಿಯುತ್ತಿಲ್ಲ!? ಎಂಬ ನೋವು ನನ್ನ ಮನಸ್ಸನ್ನು ಕೊರೆಯುತ್ತಿದೆ.

ಮದೀನಾದಿಂದ ಭಾರತಕ್ಕೆ ಬಂದ ನಾನು ಇಲ್ಲಿನ ಖ್ಯಾತ ಕವಿ ಅಲ್ಲಾಮಾ ಮುಹಮ್ಮದ್ ಇಖ್ಬಾಲ್‌ರೊಂದಿಗೆ ಗಾಢ ಸಂಬಂಧವನ್ನೇರ್ಪಡಿಸಿಕೊಂಡೆ. ಇಂಡೋನೇಶ್ಯಾ, ಚೈನಾ, ತುರ್ಕಿ ಮುಂತಾದ ರಾಷ್ಟ್ರಗಳಿಗೆ ಪಯಣಸಬೇಕೆಂದು ತೀರ್ಮಾನಿಸಿದ್ದ ನಾನು ಇಖ್ಬಾಲ್‌ರೊಂದಿಗಿನ ಅಭೇದ್ಯ ನಂಟಿನ ಕಾರಣ ಭಾರತದಲ್ಲೇ ಉಳಿದೆ. ನಂತರ 1948ರಲ್ಲಿ ಪಾಕಿಸ್ತಾನ ರಚನೆಗೊಂಡಾಗ ಅಲ್ಲಿನ ಸರಕಾರದ ಆಹ್ವಾನದ ಮೇರೆಗೆ ನಾನು ಅತ್ತ ಪ್ರಯಾಣ ಬೆಳೆಸಬೇಕಾಯಿತು. ■

# ರಮಳಾನೋತ್ತರ...

←1ನೇ ಪುಟದಿಂದ

ಸತ್ಯವಿಶ್ವಾಸದ ಮುಂದೆ ಇಬ್ಲೀಸನ ಕುತಂತ್ರಗಳು ತೀರಾ ದುರ್ಬಲ. ಆದರೆ ನಮ್ಮ ಸತ್ಯವಿಶ್ವಾಸವನ್ನು ಗಟ್ಟಿಗೊಳಿಸಬೇಕಷ್ಟೆ. ಇಹಪರಗಳಲ್ಲಿ ಯಶಸ್ವಿಯಾಗಬೇಕಾದರೆ ಏನು ಮಾಡಬೇಕೆಂದು ಶಿಷ್ಯರೊಬ್ಬರು ಕೇಳಿದಾಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು; "ನಾನು ಅಲ್ಲಾಹನಲ್ಲಿ ದೃಢವಿಶ್ವಾಸವಿರಿಸಿದ್ದೇನೆಂದು ಹೇಳು. ಮತ್ತು ಸರಿದಾರಿಯಲ್ಲಿ ದೃಢವಾಗಿ ನೆಲೆಯೂರು."ಅಲ್ಲಾಹನ ಸಜ್ಜನ ದಾಸರ ಲಕ್ಷಣವಾಗಿ ಕೂಡಾ ಅಲ್ಲಾಹು ಇದನ್ನು ಎಣಿಸಿದ್ದಾನೆ, "ಅವರು ಅಲ್ಲಾಹು ತಮ್ಮ ಪ್ರಭುವೆಂದು ಹೇಳುವರು ಮತ್ತು ನೇರದಾರಿಯಲ್ಲಿ ದೃಢಗೊಳ್ಳುವರು" (ಖುರ್‌ಆನ್). ಇಂತಹುದೊಂದು ಸತ್ಯಹಾದಿಯ ಸದೃಢ ನಿಲುವಿಗೆ ಅವಕಾಶವಿತ್ತ ರಮಳಾನಿನ ಬದುಕನ್ನು ರಮಳಾನೋತ್ತರ ಜೀವನಕ್ಕೂ ಅನ್ವಯಗೊಳಿಸಲು ಸಾಧ್ಯವಾಗಬೇಕು.

ನಮಾಝ್ ಮುಸ್ಲಿಮನ ಗುರುತು ಪತ್ರ. ಮುಸ್ಲಿಂ ಮತ್ತು ಅಮುಸ್ಲಿಮನ ನಡುವಿನ ವ್ಯತ್ಯಾಸ ನಮಾಝುನ್ನು ತೊರೆಯುವುದು ಎಂಬುದಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಅದು ಸ್ವರ್ಗದ ಕೀಲಿಕೈ ಕೂಡಾ. ಪರಲೋಕ ವಿಚಾರಣೆಯಲ್ಲಿ ದೈಹಿಕ ಆರಾಧನೆಗಳ ಪೈಕಿ ಮೊದಲ ಪ್ರಶ್ನೆ ಇರುವುದು ನಮಾಝಿನ ಬಗ್ಗೆಯೆ. ಆರಾಧನೆಗಳ ಪೈಕಿ ಅತ್ಯಂತ ಶ್ರೇಷ್ಠವಾದುದು ಸಮಯದ ಆರಂಭದಲ್ಲೇ ನಮಾಝ್ ನಿರ್ವಹಿಸುವುದು. ಪುರುಷರು ಮಸೀದಿಗಳಲ್ಲಿ ಜಮಾಅತ್ ಆಗಿ ನಿರ್ವಹಿಸುವುದಂತೂ ಇನ್ನೂ ಶ್ರೇಷ್ಠ. ರಮಳಾನಿನಲ್ಲಿ ಈಯೆಲ್ಲ ವಿಷಯಗಳ ಬಗ್ಗೆ ಗಂಭೀರ ಗಮನ ನೀಡಿದವರು ರಮಳಾನಿನ ನಂತರವೂ ಉಳಿಸಿಕೊಂಡರೆ ಸ್ವರ್ಗಕ್ಕೆ ಬೇಕಾದ ಪ್ರಮುಖ ಅರ್ಹತೆ ಕೈಗೆ ಬಂದಂತೆಯೆ.

ಸ್ವರ್ಗಕ್ಕೆ ಹೋಗಬೇಕೆಂದರೆ ಸುಜೂದ್ ಹೆಚ್ಚಿಸಬೇಕು. ಒಂದು ಸುಜೂದ್ ಮಾಡಲೊಪ್ಪದ ಕಾರಣಕ್ಕೆ ಇಬ್ಲೀಸ್ ಸ್ವರ್ಗದಿಂದ ಹೊರಬೀಳಬೇಕಾಯಿತು. ಸ್ವಹಾಬೀವರ್ಯ ರಬೀಅತ್ (ರ) ರವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಸ್ವರ್ಗ ಕೇಳಿದಾಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ಉತ್ತರ - "ಸುಜೂದ್ ಹೆಚ್ಚಿಸುವ ಮೂಲಕ ನನಗೆ ನೆರವಾಗಿ" ಎಂದಾಗಿತ್ತು. ನನಗೆ ಕೊಡಲಾಗದು ಎಂದಲ್ಲ. ಬದಲು, ನಾನು ಕೊಡುತ್ತೇನೆ; ಆದರೆ ಅದಕ್ಕೆ ಅರ್ಹನಾಗಲು ಬೇಕಾದ ಸುಜೂದ್‌ಗಳನ್ನು ಹೆಚ್ಚಿಸು ಎಂದು. ಸುನ್ನತ್ ನಮಾಝ್‌ಗಳ ಮೂಲಕ ಸುಜೂದ್‌ಗಳನ್ನು ಸಾಧ್ಯವಿರುವಷ್ಟು ಹೆಚ್ಚಿಸಬೇಕು. ರಮಳಾನಿನಲ್ಲಿ ಫರ್ಳ್, ರವಾತೀಬ್, ತರಾವೀಹ್, ವಿತ್‌ರ್ ನಮಾಝ್‌ಗಳ ಮೂಲಕ ಕನಿಷ್ಠ ನೂರು ಸುಜೂದ್‌ಗಳನ್ನು ನಿರ್ವಹಿಸಿದ ವ್ಯಕ್ತಿ, ರಮಳಾನಿನ ಬಳಿಕವೂ ತರಾವೀಹ್ ಬಿಟ್ಟು ಉಳಿದ ಸುಜೂದ್‌ಗಳನ್ನಾದರೂ ನಿರ್ವಹಿಸಬೇಕು. ದಿನಕ್ಕೆ ಕಡ್ಡಾಯ ನಮಾಝ್ ಅಲ್ಲದೆ ಹನ್ನೆರಡು ರಕ್‌ಅತ್ ಸುನ್ನತ್ ನಮಾಝ್ ನಿರ್ವಹಿಸಿದವನಿಗೆ ಅಲ್ಲಾಹು ಸ್ವರ್ಗದಲ್ಲೊಂದು ಭವನ ಕಟ್ಟಿಕೊಡದಿರಲಾರ ಎಂಬುದಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. (ಮುಸ್ಲಿಂ) ಪ್ರತೀ ಫರ್ಳ್ ನಮಾಝ್‌ನ ಹಿಂದು-ಮುಂದು ಇರುವ 22 ರಕ್‌ಅತ್ ರವಾತೀಬ್ ಸುನ್ನತ್ ನಮಾಝ್‌ಗಳ ಪೈಕಿ ಸುಬ್‌ಹ್‌ಗೆ ಮುನ್ನ 2, ಳುಹ್ರ್‌ನ ಮುನ್ನ ಮತ್ತು ಬಳಿಕ 2, ಮಗ್ರಿಬ್, ಇಶಾಗಳ ಬಳಿಕ ಎರಡು ಹೀಗೆ ಕನಿಷ್ಠ 10 ಆದರೂ ರೂಢಿಸಬೇಕು.

ಅಬೂಹುರೈರಾ (ರ) ಹೇಳುತ್ತಾರೆ; ನನ್ನ ಪ್ರೀತಿಯ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತೀ ತಿಂಗಳು ಮೂರು ದಿನ ಉಪವಾಸ ವ್ರತಾಚರಿಸಲು, ಎರಡು ರಕ್‌ಅತ್ ಳುಹಾ

➔11ನೇ ಪುಟಕ್ಕೆ


## ದಾರುಲ್ ಹುನಫಾ ಅರಬಿಕ್ ಕಾಲೇಜ್

ಖಲೀಲಾಬಾದ್, ಮಣಿಂಪಾರ, P.O.ಕುಂಡಾರ್ ಕಾಸರಗೋಡು, ಕೇರಳ-671543. Ph: 04994-327198

**ಹನೀಫಿಯ್ಯ ಶರೀಅತ್ ಕಾಲೇಜ್ ಹಾಗೂ ಸುಬುಲುಸ್ಸಲಾಂ ದರ್ಸ್‌ಗೆ**

**ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಕರೆಯಲಾಗಿದೆ**

ವಿಶೇಷತೆಗಳು

● ಹಿಫ್ಝ್ ● ಟ್ರೈನಿಂಗ್ ● ಮೊಹಲ್ಲಾಡಳಿತ ತರಬೇತಿ ● ಧಾರ್ಮಿಕ-ಲೌಕಿಕ ಸಮನ್ವಯ ಶಿಕ್ಷಣ ವ್ಯವಸ್ಥೆ ● ಸ್ಪೋಕನ್ ಇಂಗ್ಲಿಷ್ ● ಮೋಡರ್ನ್ ಅರಬಿ ● ಉರ್ದು ಭಾಷಾ ತರಗತಿ

**ಅರ್ಹತೆ ಸಾಬೀತು ಮಾಡುವ ಇಂಟರ್‌ವ್ಯೂ: ಸೆಪ್ಟಂಬರ್ 10,11 (ಶನಿ, ಆದಿತ್ಯ)**

ಅರ್ಜಿಪತ್ರಕ್ಕಾಗಿ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ನಂಬ್ರ

**8453019301,09747300592**

ಇತೀ, ಪಿ.ಎ.ಅಬ್ದುರ್ರಹ್ಮಾನ್ ಮುಸ್ಲಿಯಾರ್ ಜುನೈದಿ, ಬಾಖವಿ (ಪ್ರಿನ್ಸಿಪಾಲ್)

**Mob: 0944 743 9868**

# ಕಳ್ಳತನ ಮಗಳು ನಡೆಸಿದರೂ...

24



ಕಾಂತಪುರಂ ಎ.ಪಿ.
ಅಬೂಬಕರ್ ಮುಸ್ಲಿಯಾರ್

## ನ್ಯಾಯ ನಿಷ್ಠೆ:

ಅರೇಬಿಯಾದ ಉನ್ನತ ಗೋತ್ರಗಳಲ್ಲೊಂದು ಮಖ್‌ಝೂಮಿಯ್ಯ್. ಆ ಗೋತ್ರಾಕ್ಕೆ ಸೇರಿದ ಹೆಂಗಸೊಬ್ಬರು ಕಳ್ಳತನ ನಡೆಸಿದರು. ಕೈ ಕಡಿಯುವ ಶಿಕ್ಷೆ ಜಾರಿಗೊಳಿಸದೆ ಗೋತ್ರದ ಮಾನ ಕಾಪಾಡಬೇಕು. ಈ ಸಂಗತಿಯನ್ನು ಹೇಳಲು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಉಸಾಮತ್ ಬಿನ್ ಝೈದ್ رضي الله عنه ರನ್ನು ನಿಯೋಜಿಸಲಾಯಿತು. ಆಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಉಸಾಮತ್‌ರೊಂದಿಗೆ, ಅಲ್ಲಾಹುವಿನ ಶಿಕ್ಷೆಯಲ್ಲಿ ರಿಯಾಯಿತಿ ಮಾಡಬೇಕೆಂದು ನೀವು ನನ್ನಲ್ಲಿ ಶಿಫಾರಸು ಮಾಡುತ್ತಿದ್ದೀರಾ? ಎಂದು ಕೇಳುತ್ತಾ ಹೀಗೆಂದರು; 'ನಿಮ್ಮ ಪೂರ್ವಿಕರು ನಾಶ ಹೊಂದುವುದಕ್ಕಿದ್ದ ಕಾರಣ ಮೇಲ್ವರ್ಗದವರನ್ನು ಕಳ್ಳತನದ ಶಿಕ್ಷೆಯಿಂದ ಹೊರತುಪಡಿಸುತ್ತಿದ್ದುದು ಮತ್ತು ಬಡವರನ್ನು ಶಿಕ್ಷೆಗೆ ಗುರಿ ಪಡಿಸುತ್ತಿದ್ದುದು. ಅಲ್ಲಾಹನಾಣೆ! ಮುಹಮ್ಮದನ ಮಗಳು ಫಾತ್ವಿಮಾ ಕಳ್ಳತನ ಮಾಡಿದರೂ ಅವಳ ಕೈಯನ್ನು ನಾನು ಕತ್ತರಿಸದಿರಲಾರೆ' (ಬುಖಾರಿ, ಮುಸ್ಲಿಂ -ಅಲ್ ಇನ್ಸಾನುಲ್ ಕಾಮಿಲ್)

ಬದ್‌ರ್‌ನಲ್ಲಿ ಬಂಧಿತರಾಗಿದ್ದವರಲ್ಲಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪ ಅಬ್ಬಾಸ್ رضي الله عنه ಇದ್ದರು. ಅವರು ಅಂದು ನಿದ್ರಿಸದೆ ಅಳುತ್ತಾ ಇದ್ದರು. ಚಿಕ್ಕಪ್ಪನ ಅಳು ಕೇಳಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮನ ಕರಗಿತು. ಇದನ್ನರಿತ ಒಬ್ಬರು ಅಬ್ಬಾಸ್ رضي الله عنه ರನ್ನು ಬಂಧನದಿಂದ ಮುಕ್ತಗೊಳಿಸಿದರು. ನಂತರ ಅಬ್ಬಾಸ್ رضي الله عنه ರವರ ಧ್ವನಿ ಕೇಳಲಿಲ್ಲ. ಏನಾಯಿತೆಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ವಿಚಾರಿಸಿದಾಗ, ಅವರನ್ನು ಬಂಧನದಿಂದ ಮುಕ್ತಿಗೊಳಿಸಲಾಗಿದೆ ಎಂದು ತಿಳಿಸಲಾಯಿತು. 'ಹಾಗಾದರೆ ಎಲ್ಲರನ್ನು ಬಿಡುಗಡೆಗೊಳಿಸಿ' ಎಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಆದೇಶಿಸಿದರು.

ಹುನೈನ್ ಯುದ್ಧದಲ್ಲಿ ಒಬ್ಬರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲನ್ನು ತನ್ನ ಗಟ್ಟಿಯಾದ ಚಪ್ಪಲಿ ಹಾಕಿ ತುಳಿದರು. 'ನೀವು ನನ್ನನ್ನು ನೋಯಿಸಿದ್ದೀರಿ' ಎನ್ನುತ್ತಾ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಕೈಯಲ್ಲಿದ್ದ ಬೆತ್ತದಿಂದ ಈ ವ್ಯಕ್ತಿಯನ್ನು ಬಡಿದು ದೂರ ಮಾಡಿದರು. ಈ ಘಟನೆಯಿಂದ ಆ ವ್ಯಕ್ತಿ ದುಃಖಿತರಾದರು. ರಾತ್ರಿ ಏಕಾಂಗಿಯಾಗಿ ಅತ್ತರು. ಮುಂಜಾನೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಕರೆದರು. ಭಯಚಕಿತರಾದ ಅವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮುಖ ತೋರಿಸಿದರು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು. ಹೇಳಿದರು; 'ನೀವು ನಿನ್ನೆ ನನ್ನ ಕಾಲಿಗೆ ತುಳಿದು ನೋಯಿಸಿದಿರಿ. ನಾನು ನಿಮ್ಮನ್ನು ಹೊಡೆದು ದೂರಮಾಡಿದೆ. ಇಗೊಳ್ಳಿ, ಎಂಬತ್ತು ಆಡುಗಳು. ತಗೊಂಡು ಹೋಗಿ' (ಅಲ್ ಇನ್ಸಾನುಲ್ ಕಾಮಿಲ್)

ಮರಣಾಸನ್ನ ವೇಳೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; 'ನಾನು ಯಾರಿಗಾದರೂ ಏನಾದರೂ ಮಾಡಿದ್ದರೆ ಇದೋ, ಪ್ರತೀಕಾರಕ್ಕೆ ಅವಕಾಶ. ಯಾರಿಗಾದರೂ ಏನಾದರೂ ನಾನು ಕೊಡುವುದಕ್ಕಿದ್ದರೆ ತಿಳಿಸಿರಿ'. ಕೂಡಲೇ ಫಳಲ್ ಬಿನ್ ಅಬ್ಬಾಸ್ رضي الله عنه ಹೇಳಿದರು; 'ಅಲ್ಲಾಹನ ಸಂದೇಶವಾಹಕರೇ, ತಾವು ನನಗೆ ಮೂರು ಚಿನ್ನದ ನಾಣ್ಯ ಕೊಡುವುದಕ್ಕಿದೆ'. ಹೇಗದು? ಎಂದು ಕೇಳಿದರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಫಳ್‌ಲ್ رضي الله عنه ಹೇಳಿದರು; 'ಒಮ್ಮೆ ಓರ್ವ ಬಡವ ಹೋಗುತ್ತಿರುವಾಗ ಆ ವ್ಯಕ್ತಿಗೆ ಮೂರು ಚಿನ್ನದ ನಾಣ್ಯ ಕೊಡಲು ತಾವು ಹೇಳಿದ್ದೀರಿ. ನಾನು ಕೊಟ್ಟೆ'. ಫಳ್‌ಲ್‌ರವರ ವಿವರಣೆಯನ್ನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅಂಗೀಕರಿಸಿದರು. ನಾಣ್ಯಗಳು ಕೊಟ್ಟರು. (ಅಲ್ ಇನ್ಸಾನುಲ್ ಕಾಮಿಲ್)

## ದೂರದೃಷ್ಟಿ:

ಬರಾಅ್‌ಬಿನ್ ಹಾಸಿಬ್ رضي الله عنه ಹೇಳುತ್ತಾರೆ; ದ್ಸುಲ್‌ಕಅದ್ ತಿಂಗಳಿನಲ್ಲಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲ ಮರು ಉಮ್ರಕ್ಕೆ ಹೊರಟರು. ಶತ್ರುಗಳ ಅಡ್ಡಿಯಿಂದಾಗಿ ಮಕ್ಕಾ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಶತ್ರುಗಳು ಒಂದು ಒಪ್ಪಂದಕ್ಕೆ ಬಂದರು. ಕರಾರು ಪತ್ರದಲ್ಲಿ ಅಲೀ رضي الله عنه ಯವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರನ್ನು 'ರಸೂಲುಲ್ಲಾಹಿ' (ಅಲ್ಲಾಹನ ಸಂದೇಶವಾಹಕ) ಎಂದು ಬರೆದುದನ್ನು ಶತ್ರುಗಳಿಗೆ ಸಹಿಸಲಾಗಲಿಲ್ಲ. ಅವರು ಅದನ್ನು ಮುಹಮ್ಮದ್ ಬಿನ್ ಅಬ್ದಿಲ್ಲಾ (ಅಬ್ದುಲ್ಲಾರ ಮಗ ಮುಹಮ್ಮದ್) ಎಂದು ತಿದ್ದುಪಡಿ ಮಾಡಬೇಕೆಂದು ಹೇಳಿದರು. 'ನಾನು ಅಲ್ಲಾಹನ ಸಂದೇಶವಾಹಕನೂ ಅಬ್ದುಲ್ಲಾರ ಮಗನೂ ಆದ ಮುಹಮ್ಮದ್' ಎಂದರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್. ಶತ್ರುಗಳಿಗೆ ಒಪ್ಪಿಗೆಯಾಗಲಿಲ್ಲ. ಆಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅಲಿಯ್ಯ್ رضي الله عنه ರೊಂದಿಗೆ, 'ರಸೂಲುಲ್ಲಾಹಿ' ಎಂಬುದನ್ನು ಹೊಡೆದು ಹಾಕಲು ಹೇಳಿದರು. ಅಲೀ رضي الله عنه ಹಿಂಜರಿದಾಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರವರೇ ಆ ಕಾಗದವನ್ನು ತೆಗೆದು ತಾವೇ ಹೊಡೆದು ಶತ್ರುಗಳ ಬೇಡಿಕೆಯನ್ನೂ ಅಂಗೀಕರಿಸಿದರು. ಮುಂದೆ ಈ ಕರಾರು ಮುಸ್ಲಿಮರಿಗೆ ವರವೇ ಆಯಿತು. (ಬುಖಾರಿ, ಮುಸ್ಲಿಂ)

[ಮುಂದಿನ 10ವರ್ಷಗಳ ತನಕ ಪರಸ್ಪರ ಯುದ್ಧ ನಡೆಸುವುದಿಲ್ಲವೆಂದು ಒಪ್ಪಂದದಲ್ಲಿ ಹೇಳಲಾಗಿತ್ತು. ಆದರೆ ಖುರೈಶರೇ ಆ ಒಪ್ಪಂದವನ್ನು ಮುರಿದಿದ್ದರು. ಹಾಗಾಗಿ ಮುಂದಿನ ವರ್ಷ ಮುಸ್ಲಿಮರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿವಸಲ್ಲಮರವರ ನೇತೃತ್ವದಲ್ಲಿ ಮಕ್ಕಾಕ್ಕೆ ಹೊರಟು, ಇಡೀ ಮಕ್ಕಾ ಮುಸ್ಲಿಮರಿಗೆ ಶರಣಾಯಿತು. ರಕ್ತರಹಿತ ಕ್ರಾಂತಿಯಲ್ಲಿ ಮಕ್ಕಾ ಮುಸ್ಲಿಮರ ಪಾಲಾಗಿ ಅದ್ಭುತ ಯಶಸ್ಸು ದಾಖಲಾಯಿತು.]

ಒಮ್ಮೆ ಒಬ್ಬರು ಬಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಹೇಳಿದರು; "ನಾನು ಎಲ್ಲ ಕೆಡುಕುಗಳಿಂದ ಮುಕ್ತವಾಗಬಲ್ಲೆ. ಆದರೆ ಒಂದು ವಿಷಯದಲ್ಲಿ ರಿಯಾಯಿತಿ ಬೇಕು. ವ್ಯಭಿಚಾರವನ್ನು ನನಗೆ ಅನುಮತಿಸಬೇಕು." ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಸಮಾಧಾನದಿಂದಲೇ ಕೇಳಿದರು; "ನಿಮ್ಮ ತಾಯಿಯನ್ನು ಯಾರಾದರೂ ವ್ಯಭಿಚರಿಸುವುದನ್ನು ನೀವು ಒಪ್ಪುವಿರಾ?"

"ಖಂಡಿತಾ ಇಲ್ಲ."

"ತಮ್ಮ ಮಗಳನ್ನು?"

"ಒಪ್ಪಲಾರೆ"

"ತಮ್ಮ ಪತ್ನಿಯನ್ನು"

"ಸಾಧ್ಯವೇ ಇಲ್ಲ"

"ತಾವು ವ್ಯಭಿಚಾರ ನಡೆಸುವುದು ಯಾರದಾದರೂ ಪತ್ನಿಯನ್ನೋ, ಮಗಳನ್ನೋ, ಸಹೋದರಿಯನ್ನೋ ಆಗಿರಬಹುದು. ತಮಗೆ ಸಹಿಸಲು ಸಾಧ್ಯವಿಲ್ಲದಂತೆ ಅವರಿಗೂ ಸಹಿಸಲು ಸಾಧ್ಯವಾಗದಲ್ಲ...!?"

ಬಂದ ವ್ಯಕ್ತಿ ತಲೆಬಾಗಿದ.

ಝೈದುನಿಲ್ ಖೈಲ್ ಅರೇಬಿಯಾದ ದೊಡ್ಡ ದರೋಡೆಕೋರ. ಅವರಿಗೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮದೀನಾ ಯಾತ್ರೆ, ಅಲ್ಲಿನ ಧಾರ್ಮಿಕ ಬೋಧನೆಗಳು ಇಷ್ಟವಾಗಿರಲಿಲ್ಲ. ತನ್ನ ಪ್ರದೇಶಕ್ಕೆ ಮತ್ತೊಬ್ಬರ ಆಗಮನ ಆ ವ್ಯಕ್ತಿಯಲ್ಲಿ ಕೋಪವುಕ್ಕಿಸಿತ್ತು. ತನ್ನ ಸಂಗಡಿಗರೊಂದಿಗೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಹಗೆ ತೀರಿಸಲೆಂದು ಮದೀನಾ ಮಸೀದಿಗೆ ಹೋದರು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಆಗ ಭಾಷಣ ಮಾಡುತ್ತಿದ್ದರು. ಭಾಷಣದ ಬಳಿಕ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಬಂದವರ ಪರಿಚಯ ವಿಚಾರಿಸಿದರು. ಝೈದುನಿಲ್ ಖೈಲ್! ಕೇಳಿ ಪರಿಚಯವಿದ್ದ ಹೆಸರು. ಅರೇಬಿಯಾದ ಮಹಾ ದರೋಡೆಕೋರ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಆ ವ್ಯಕ್ತಿಯೊಂದಿಗೆ ಶಾಂತರಾಗಿ ಹೇಳಿದರು; ಖೈಲ್! ತಮ್ಮ ಹೆಸರು ಝೈದುನಿಲ್ ಖೈಲ್ ಅಲ್ಲ, ಝೈದುನಿಲ್ ಖೈರ್! (ಒಳಿತಿನ ಝೈದ್ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ವಾತ್ಸಲ್ಯದ ಮಾತು ದರೋಡೆಕೋರನ ಮನಃಪರಿವರ್ತನೆ ಮಾಡಿಸಿತು. ಹಗೆತನ ಭಾವ ಕರಗಿ ಹೋಯಿತು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಗಮನವಿಟ್ಟು ಆಲಿಸಿದರು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; "ಅಲ್ಲಾಹು ಮತ್ತು ರಸೂಲ್ ಇಷ್ಟಪಡುವ ಎರಡು ಗುಣಗಳು ನಿಮ್ಮಲ್ಲಿವೆ."

"ಏನವು?" ಆ ವ್ಯಕ್ತಿ ಕುತೂಹಲದಿಂದ ಕೇಳಿದರು.

"ಪ್ರಬುದ್ಧತೆ ಮತ್ತು ಸಹನೆ" ಎಂದರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್. ಆನಂದ ಪುಳಕಿತರಾದ ಖೈಲ್ ಇಸ್ಲಾಂ ಸ್ವೀಕರಿಸಿದರು. (ಅಲ್ ಇನ್ಸಾನುಲ್ ಕಾಮಿಲ್)

ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮೂವತ್ತೈದನೇ ಪ್ರಾಯದಲ್ಲಿ ಕಅ್‌ಬಾ ಪುನರ್ನಿರ್ಮಾಣಕ್ಕೆ ಸಂಬಂಧಿಸಿದ ವಿಚಾರದಲ್ಲಿ ಖುರೈಶಿಗಳ ನಡುವೆ ವಿವಾದವೆದ್ದಿತು. ನಿರ್ಮಾಣ ಕೆಲಸದಲ್ಲಿ ಎಲ್ಲ ಖುರೈಶರೂ ಭಾಗವಹಿಸಿದ್ದರಾದರೂ ಹಜರುಲ್ ಅಸ್ವದ್ ಮರು ಪ್ರತಿಷ್ಠಾಪಿಸುವುದು ಯಾರು ಎಂಬುದಾಗಿತ್ತು ವಿವಾದ. ಒಂದೊಂದು ಮನೆತನವೂ ತಮ್ಮ ಹಕ್ಕು ಮಂಡನೆ ಮಾಡುತ್ತಿದ್ದರು. ಈ ಹಂತದಲ್ಲಿ ಖುರೈಶರ ಪೈಕಿ ಅತ್ಯಂತ ಹಿರಿಯರಾಗಿದ್ದ ಅಬೂಉಮಯ್ಯತ್ ಎಂಬವರು ಒಂದು ಪರಿಹಾರ ಸೂತ್ರ ಮುಂದಿಟ್ಟರು. ರಾಜಿಯಲ್ಲಿ ಸಮಸ್ಯೆ ಪರಿಹರಿಸುವುದು. ನಾಳೆ ಬೆಳಿಗ್ಗೆ ಮೊದಲು ಯಾರು ಕಅ್‌ಬಾಲಯಕ್ಕೆ ಬರುತ್ತಾರೋ, ಅವರ ಮಧ್ಯಸ್ಥಿಕೆಯಲ್ಲಿ ಸಮಸ್ಯೆ ಮುಗಿಸುವುದು. ಎಲ್ಲರೂ ಇದಕ್ಕೆ ಒಪ್ಪಿದರು. ಹಾಗೇ ಕಅ್‌ಬಾಲಯಕ್ಕೆ ಮೊದಲು ಪ್ರವೇಶಿಸಿದವರು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದರು. ಖುರೈಶಿಗಳಿಗೆ ಖುಷಿಯಾಯಿತು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಖುರೈಶೀ ಕುಟುಂಬದ ಪ್ರತಿ ಮನೆತನದಿಂದ ಒಬ್ಬೊಬ್ಬರು ನಾಯಕರನ್ನು ಆರಿಸಿದರು. ಹೆಗಲಲ್ಲಿದ್ದ ಶಾಲಿನಲ್ಲಿ ಹಜರುಲ್ ಅಸ್ವದ್ ಅನ್ನು ಇಟ್ಟು ಶಾಲಿನ ಸುತ್ತಲೂ ಅದರ ಅಂಚನ್ನು ಹಿಡಿಯುವಂತೆ ಆ ನಾಯಕರಿಗೆ ಹೇಳಿದರು. ಎಲ್ಲರೂ ಜತೆಗೂಡಿ ಕೊಂಡೊಯ್ದು ತಲುಪಬೇಕಾದ ಜಾಗಕ್ಕೆ ತಲುಪಿದಾಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಕಲ್ಲನ್ನು ಎತ್ತಿ ಯಥಾಸ್ಥಾನದಲ್ಲಿ ಇಟ್ಟರು. (ಸೀರತ್ ಇಬ್‌ನು ಹಿಶಾಂ, ಇಬ್ನುಲ್ ಜೌಝಿ)

## ಸರಳತೆ:

ಆಇಶಾ رضي الله عنها ಹೇಳುತ್ತಾರೆ; ನಿರಂತರವಾಗಿ ಮೂರು ದಿನ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೊಟ್ಟೆ ತುಂಬಿಸಿದ್ದಿಲ್ಲ. ಸಾಕಷ್ಟು ಸಂಪತ್ತು ಸನಿಹವಿದ್ದರೂ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಅವನ್ನೆಲ್ಲ ಅನುಚರರಿಗೆ ಹಂಚಿಕೊಡುತ್ತಿದ್ದರು. (ಮುಖ್ತಾರಾತ್)

➔ 10ನೇ ಪುಟಕ್ಕೆ




# ಇರುವೆ ಮಾತಾಡಿದಾಗ...

| ಸೂರಃ | ಸೂರಾ ಅನ್ನಮ್ಲ್ |
|---|---|
| ಅವತೀರ್ಣ | ಮಕ್ಕಾ |
| ಒಟ್ಟು ಸೂಕ್ತಗಳು | 93 |

**15.** ದಾವೂದ್ عليه السلام ಹಾಗೂ ಸುಲೈಮಾನ್ عليه السلامರವರಿಗೆ ನಾವು ಸುಜ್ಞಾನವನ್ನು ನೀಡಿದೆವು. ಅವರಿಬ್ಬರೂ ಹೇಳಿದರು-ಸತ್ಯವಿಶ್ವಾಸಿಗಳಾದ ತನ್ನ ಅನೇಕ ದಾಸರಿಗಿಂತ ನಮ್ಮನ್ನು ಶ್ರೇಷ್ಠಗೊಳಿಸಿದ ಅಲ್ಲಾಹನಿಗೆ ಸರ್ವ ಸ್ತುತಿ. (1)

**16.** ಸುಲೈಮಾನ್ عليه السلامರು ದಾವೂದ್ عليه السلامರ ಉತ್ತರಾಧಿಕಾರಿಯಾದರು. ಅವರು ಹೇಳಿದರು; ಜನರೇ, ನಮಗೆ ಪಕ್ಷಿಗಳ ಭಾಷೆಯನ್ನು ಕಲಿಸಿಕೊಡಲಾಗಿದೆ. ಪ್ರತಿಯೊಂದು ವಸ್ತುಗಳಿಂದಲೂ ನಮಗೆ (ಬೇಕಾದುದನ್ನು) ನೀಡಲಾಗಿದೆ. ನಿಶ್ಚಯ ಸ್ಪಷ್ಟವಾದ ಅನುಗ್ರಹ ಇದುವೇ ಆಗಿದೆ.(2)

**17.** ಪ್ರವಾದಿ ಸುಲೈಮಾನ್ عليه السلامರಿಗೆ ಜಿನ್ನ್, ಮಾನವ ಮತ್ತು ಪಕ್ಷಿಗಳಿಂದ ಸೇರಿದ ತಮ್ಮ ಸೇನೆಯನ್ನು ಜಮಾಯಿಸಲಾಯಿತು. ಆ ಸೇನೆಯನ್ನು ತಡೆದು ನಿಯಂತ್ರಿಸಲಾಗುತ್ತಿತ್ತು. (3)

**18.** ಹಾಗೆಯೇ ಅವರು ಇರುವೆಗಳ ಕಣಿವೆಗೆ ತಲುಪಿದಾಗ ಒಂದು ಇರುವೆಯು ಹೇಳಿತು- ಓ ಇರುವೆಗಳೇ, ನಿಮ್ಮ ನಿವಾಸಗಳಿಗೆ ನೀವು ಪ್ರವೇಶಮಾಡಿಕೊಳ್ಳಿ. ಸುಲೈಮಾನ عليه السلامರು ಹಾಗೂ ಅವರು ಸೇನೆಯು ಗಮನಿಸದೆ ನಿಮ್ಮನ್ನು ತುಳಿಯದಿರಲಿ.

**19.** ಅವರು (ಸುಲೈಮಾನರು) ಅದರ ಮಾತಿಗೆ ಮಂದಹಾಸದ ನಗು ಬೀರಿದರು ಮತ್ತು ಹೇಳಿದರು- ನನ್ನ ಪ್ರಭೂ, ನನ್ನ ಮೇಲೂ, ನನ್ನ ಮಾತಾಪಿತರ ಮೇಲೂ ನೀನು ಮಾಡಿರುವಂತಹ ನಿನ್ನ ಅನುಗ್ರಹಕ್ಕೆ ಕೃತಜ್ಞತೆ ತೋರಲು ಹಾಗೂ ನೀನು ತೃಪ್ತಿಹೊಂದುವ ಸತ್ಕರ್ಮವೆಸಗಲು ನನಗೆ ಪ್ರೇರಣೆಯನ್ನು ನೀಡು. ನಿನ್ನ ಕರುಣೆ ಮೂಲಕ ನನ್ನನ್ನು ನಿನ್ನ ಸಜ್ಜನ ದಾಸರಲ್ಲಿ ಸೇರಿಸು.(4)

**(1)** ಅಧ್ಯಾಯದ ಎರಡನೇ ಚರಿತ್ರೆಯು ಇಲ್ಲಿಂದ ಆರಂಭಗೊಳ್ಳುತ್ತದೆ. ಪ್ರವಾದಿ ಸುಲೈಮಾನ್ عليه السلامರವರ ಚರಿತ್ರೆಯ ಒಂದು ಹ್ರಸ್ವ ಭಾಗವಿದು. ಪ್ರವಾದಿ ದಾವೂದ್ عليه السلامರವರ ಪುತ್ರರಾಗಿದ್ದಾರೆ ಸುಲೈಮಾನ್ عليه السلام. ಪ್ರವಾದಿ ಯಅ್ಕೂಬ್ عليه السلامರವರ ಸಂತಾನಗಳಲ್ಲಿ ಮುಂದುವರಿಯುವ ಪ್ರವಾದಿಗಳಿವರು. ದಾವೂದ್ عليه السلام ಹಾಗೂ ಸುಲೈಮಾನ್ عليه السلامರಿಗೆ ಪ್ರತ್ಯೇಕ ಜ್ಞಾನವನ್ನು ನೀಡಿದ್ದನ್ನೂ ಅದಕ್ಕೆ ಅವರು ಕೃತಜ್ಞತೆ ಸಲ್ಲಿಸಿದ್ದನ್ನೂ ಉಲ್ಲೇಖಿಸುತ್ತಾ ಚರಿತ್ರೆಯು ಆರಂಭಗೊಳ್ಳುತ್ತದೆ. ಪ್ರವಾದಿತ್ವದ ಹೊರತಾಗಿ ಆಡಳಿತ ನಿರ್ವಹಣೆ, ಕಬ್ಬಿಣದ ಕವಚಗಳ ನಿರ್ಮಾಣ, ಪಕ್ಷಿಗಳ ಹಾಗೂ ಪರ್ವತಗಳ ತಸ್ಬೀಹ್‌ಗಳನ್ನು ಆಲಿಸುವುದು, ಪ್ರಾಣಿ, ಪಕ್ಷಿಗಳು ಹೊರಡಿಸುವ ಶಬ್ಧಗಳಿಂದ ಅವುಗಳ ಇಂಗಿತವನ್ನು ತಿಳಿಯುವುದು ಮುಂತಾದ ಜ್ಞಾನಗಳನ್ನು ಅಲ್ಲಾಹನು ಇವರಿಗೆ ನೀಡಿ ಅನುಗ್ರಹಿಸಿರುವನು. ಸತ್ಯವಿಶ್ವಾಸಿಗಳಾದ ಇತರ ದಾಸರಿಗಿಂತ ತಮ್ಮನ್ನು ಶ್ರೇಷ್ಠಗೊಳಿಸಿರುವುದಕ್ಕೆ ಅಲ್ಲಾಹನಿಗೆ ಸರ್ವಸ್ತುತಿ ಎಂದು ಹೇಳಿರುವುದು ಇವರಿಗಿರುವ ಈ ಸವಿಶೇಷತೆಗಳ ಕಾರಣದಿಂದಾಗಿದೆ.

**(2)** ಪ್ರವಾದಿ ದಾವೂದ್ عليه السلام ರವರಿಗೆ ಸುಲೈಮಾನ್ عليه السلام ಅಲ್ಲದೆ ಬೇರೆ ಮಕ್ಕಳಿದ್ದರು. ಕಲಬೀಯವರಿಂದ ಖುರ್‌ತುಬೀ ಉಲ್ಲೇಖಿಸಿದಂತೆ ಅವರಿಗೆ ಹತ್ತೊಂಬತ್ತು ಮಕ್ಕಳಿದ್ದರು. ಅವರ ಪೈಕಿ ಪ್ರವಾದಿತ್ವಕ್ಕೂ ಸುಜ್ಞಾನಕ್ಕೂ ಉತ್ತರಾಧಿಕಾರಿಯಾಗಿ ಬಂದಿರುವುದು ಪ್ರವಾದಿ ಸುಲೈಮಾನ್ عليه السلام ರವರಾಗಿದ್ದರು. ಪ್ರವಾದಿ ಸುಲೈಮಾನ್ عليه السلامರವರು ಬನೂ ಇಸ್ರಾಈಲರನ್ನುದ್ದೇಶಿಸಿ ಅಲ್ಲಾಹನು ತನಗೆ ನೀಡಿದ ಅನುಗ್ರಹಗಳನ್ನು ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಪ್ರವಾದಿ ಸುಲೈಮಾನ್ عليه السلامರವರು ಪಕ್ಷಿಗಳ ಮಾತುಗಳನ್ನು ಗ್ರಹಿಸಬಲ್ಲವರಾಗಿದ್ದರು. ಆಧುನಿಕ ವಿಜ್ಞಾನಿಗಳು ಪಕ್ಷಿಗಳು ಪರಸ್ಪರ ಮಾತನಾಡುತ್ತವೆಯೆನ್ನುವುದನ್ನು ಒಪ್ಪಿಗೊಂಡಿದೆ. ಅವುಗಳಿಂದ ಹೊರಡುವ ಶಬ್ದಗಳು ವಿವಿಧ ಸಂಧರ್ಭಗಳಲ್ಲಿ ವಿವಿಧ ಅರ್ಥಗಳನ್ನು ಸೂಚಿಸುವುದೆಂದೂ, ದುಃಖ, ಸಂತೋಷ, ಬಯಕೆ, ಭಯ ಮುಂತಾದ ಭಾವಗಳನ್ನು ಅವು ಪ್ರಕಟಿಸುತ್ತಿವೆಯೆಂದೂ ಆಧುನಿಕ ಸಂಶೋಧನೆಗಳಿಂದ ಸಾಬೀತಾಗಿದೆ. 'ಪಕ್ಷಿಗಳ ಮಾತು' ಎನ್ನುವ ಮೂಲಕ ಪವಿತ್ರ ಖುರ್‌ಆನ್ ಇದನ್ನು ಸ್ಪಷ್ಟಪಡಿಸಿದ್ದು ಖುರ್‌ಆನಿನ ಒಂದು ಪವಾಡವಿದು. ಪಕ್ಷಿಗಳ ಭಾಷೆಯನ್ನು ತಿಳಿಯುವ ಸಾಮರ್ಥ್ಯವನ್ನು ಅಲ್ಲಾಹನು ತಾನು ಬಯಸಿದವರಿಗೆ ನೀಡಬಲ್ಲನೆಂದೂ ಮನುಷ್ಯನ ಮೆದುಳು ಆ ಮೂಲಕ ಈ ಶಕ್ತಿಯನ್ನು ಪಡೆಯಬಲ್ಲುದೆಂದೂ ಇದರಿಂದ ಗ್ರಹಿಸಬಹುದಾಗಿದೆ.

ಪ್ರತಿಯೊಂದು ವಸ್ತುಗಳಿಂದಲೂ ಅಗತ್ಯವಾಗಿರುವುದನ್ನು ತಮಗೆ ನೀಡಲಾಗಿದೆ ಎಂದಿರುವುದು ಇತರೆಲ್ಲ ಅನುಗ್ರಹಗಳ ಬಗ್ಗೆಯಾಗಿದೆ.

ಪಕ್ಷಿಗಳೂ, ಜಿನ್ನ್, ಶೈತಾನ್‌ಗಳೂ ಅವರ ಸೇವೆಗೆ ನಿಂತು, ಬೀಸುವ ಗಾಳಿ ಕೂಡಾ ತನ್ನ ಆಜ್ಞೆಗೆ ಸ್ಪಂದಿಸು ವಂತಹ ಅನುಗ್ರಹವನ್ನು ಅಲ್ಲಾಹನು ಅವರಿಗೆ ನೀಡಿದ್ದನು. ಅವರ ಆಡಳಿತವು ಅಷ್ಟದಿಕ್ಕುಗಳಿಗೆ ವ್ಯಾಪಿಸಿತ್ತು.

**(3)** ಪ್ರವಾದಿ ಸುಲೈಮಾನ್ عليه السلام ರವರ ಸೇನೆಯಲ್ಲಿ ಮನುಷ್ಯರು ಮಾತ್ರವಲ್ಲದೆ ಜಿನ್ನ್‌ಗಳೂ ಪಕ್ಷಿಗಳೂ ಇದ್ದವು. ಪಕ್ಷಿಗಳು ಪ್ರವಾದಿ ಸುಲೈಮಾನ್ عليه السلامರವರ ಯಾತ್ರಾವೇಳೆ ಬಿಸಿಲಿನಿಂದ ತಡೆಯೊಡ್ಡುತ್ತಿದ್ದವೆಂದು ಚರಿತ್ರೆ ಗ್ರಂಥಗಳಲ್ಲಿ ಕಾಣ ಬಹುದು. ಜಿನ್ನ್, ಶೈತಾನ್‌ಗಳಿಂದ ವಿವಿಧ ಸಂದರ್ಭಗಳಲ್ಲಿ ವಿವಿಧ ಕ್ಲಿಷ್ಟಕರ ಕೆಲಸಗಳನ್ನು ಅವರು ಮಾಡಿಸುತ್ತಿದ್ದರು. ಸೂರಾ ಸಬಅ್ ಮತ್ತು ಮತ್ತು ಸೂರಾ ಸ್ವಾದ್‌ಗಳಲ್ಲಿ ಈ ಬಗ್ಗೆ ಪ್ರಸ್ತಾಪಗಳಿವೆ. ಮೂರು ವಿಭಾಗಗಳನ್ನೂ ಪ್ರತ್ಯೇಕ ಸೇವಾ ವ್ಯವಸ್ಥೆಗೆ ಹೊಂದಿಕೊಂಡು ಒಟ್ಟು ಸೇರಿಸಲಾಗುತ್ತಿತ್ತು. ಕ್ರಮ ತಪ್ಪಿ ಸಾಗದಂತೆ, ಮೇರೆ ಮೀರದಂತೆ ಎಲ್ಲಕ್ಕೂ ನಾಯಕರನ್ನು ನೇಮಿಸಿ ನಿಯಂತ್ರಿಸಲಾಗುತ್ತಿತ್ತು.

**(4)** ಪ್ರವಾದಿ ಸುಲೈಮಾನ್ عليه السلام ಮತ್ತು ಸೇನೆಯು ಶಾಮ್‌ನಲ್ಲಿ ಒಂದೆಡೆ ಸಾಗುತ್ತಿರುವಾಗ ಧಾರಾಳ ಸಂಖ್ಯೆಯಲ್ಲಿ ಇರುವೆಗಳಿದ್ದ ಒಂದು ಕಣಿವೆಯ ಹತ್ತಿರಕ್ಕೆ ಅವರು ಬಂದಿದ್ದರು. ಇವರ ಆಗಮನವನ್ನು ದೂರದಿಂದಲೇ ಅರಿತ ಇರುವೆಯೊಂದು ತನ್ನ ಜತೆಗಾರರಿಗೆ ತಮ್ಮ ನಿವಾಸಗಳ ಒಳಗೆ ಸೇರುವಂತೆ ಕರೆದು ಹೇಳಿತು. ಇರುವೆಗಳ ರಾಣಿ ಇರುವೆಯಾಗಿತ್ತದು. ಪ್ರವಾದಿ ಸುಲೈಮಾನ್ عليه السلام ಹಾಗೂ ಅವರ ಸೇವೆಯು ನಿಮ್ಮನ್ನು ಗಮನಿಸದೆ ತುಳಿದು ಬಿಟ್ಟಾರು, ನೀವು ಒಳಕ್ಕೆ ಸಾಗಿರಿ ಎಂದಿತು. ಇರುವೆಯ ಮಾತು ತಿಳಿಯಲು ಶಕ್ತರಾಗಿದ್ದ ಸುಲೈಮಾನ್ عليه السلامರವರು ಇದನ್ನು ಆಲಿಸಿ ಮಂದಹಾಸದೊಂದಿಗೆ ನಕ್ಕಿದ್ದನ್ನು ಖುರ್‌ಆನ್ ಇಲ್ಲಿ ಪ್ರಸ್ತಾಪಿಸಿದೆ. ತನ್ನ ಅರಿವಿನ ಬಗ್ಗೆ ಅಹಂಕಾರ ತೋರದೆ ಆ ಸಂದರ್ಭ ಅವರು ಅಲ್ಲಾಹನಲ್ಲಿ ಪ್ರಾರ್ಥಿಸಿದರು. ನನಗೂ ನನ್ನ ಮಾತಾಪಿತರಿಗೂ ನೀನು ಧಾರಾಳ ಅನುಗ್ರಹವನ್ನು ನೀಡಿರುವೆನು. ಅದಕ್ಕೆ ಕೃತಜ್ಞತೆ ಸಲ್ಲಿಸಲು, ಸತ್ಕಮಗಳನ್ನು ಮಾಡಲು ನನಗೆ ಪ್ರೇರಣೆಯನ್ನು ನೀಡು, ನನ್ನನ್ನು ಸಜ್ಜನರಲ್ಲಿ ಸೇರಿಸು ಎಂದು ಬೇಡಿಕೊಂಡರು. ■

ಅನ್ಸಾರಿಯ್ಯ ಹಜ್ ಉಮ್ರಾ ಟೂರ್ಸ್ & ಟ್ರಾವೆಲ್ಸ್

ನಮ್ಮ ವಿಶೇಷತೆಗಳು

● ಮಂಗಳೂರಿನಿಂದ-ಮಂಗಳೂರಿಗೆ ● ಹರಮಿನ ಸಮೀಪ ರೂಮಿನ ವ್ಯವಸ್ಥೆ ● ಊರಿನ ಮಾದರಿ ಊಟೋಪಚಾರ ● ಆರಾಧನೆಗಳಿಗೆ ಬೇಕಾದ ಅನುಭವಸ್ಥ ಉಸ್ತಾದರಿಂದ ಸಂದರ್ಭೋಚಿತ ಮಾಹಿತಿ.

ನಮ್ಮ ಸೇವೆಗಳು:
ಟಿಕೆಟಿಂಗ್, ವೀಸಾ ಕ್ಲಿಯೆರೆನ್ಸ್, ಎಮಿಗ್ರೇಷನ್, ಪಾಸ್‌ಪೋರ್ಟ್ ಸರ್ವಿಸ್

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ

ಅಲ್‌ಹಾಜ್ ಮುಹಮ್ಮದ್ ಶರೀಫ್ ಮದನಿ ಉಳ್ಳಾಲ : 9880274410

ಸಯ್ಯಿದ್ ಶಾಹುಲ್ ಹಮೀದ್ ತಂಙಳ್ Cell: 09995000595

ಕಛೇರಿ ನಂ: 0824-4265589

2ನೇ ಮಹಡಿ, ರೀಗಲ್ ಪಾರ್ಕ್, ನೌಫಲ್ ಹೋಟೆಲ್ ಎದುರುಗಡೆ, ಮಿಷನ್ ಸ್ಟ್ರೀಟ್, ಬಂದರ್, ಮಂಗಳೂರು-1



We Supply Soft Drinks for Marriage, Party & Other Occassions
Cell: 9880811537, 9916315496, 08254-233977(F) 230688 (R)
HUNGLURE, KODI, KUNDAPUR - 576 217.

# ಫಿದ್‌ಯಾ–ಒಂದು

ಎಸ್.ಪಿ.ಹಂಝ ಸಖಾ

ರಮಳಾನ್ ಮುಗಿಯುವಾಗ ಪ್ರಾಯಶ್ಚಿತಗಳ ಬಗ್ಗೆ ತಿಳಿಯುವುದು ಅಗತ್ಯವಿದೆ. ಅನೇಕ ಮಂದಿ ಸಕಾರಣವಿದ್ದು ಉಪವಾಸ ಉಪೇಕ್ಷಿಸಿದವರು ಇದಕ್ಕಾಗಿ ತಮಗೊಂದು ಪ್ರಾಯಶ್ಚಿತ ನೀಡಲಿಕ್ಕಿದೆಯೆನ್ನುವುದನ್ನು ತಿಳಿಯದವರಿದ್ದಾರೆ. ಉಪವಾಸ ಉಪೇಕ್ಷಿಸಿದ್ದಕ್ಕಿರುವ ಪ್ರಾಯಶ್ಚಿತದ ಬಗ್ಗೆ ಸಂಕ್ಷಿಪ್ತ ವಿವರಣೆ ಇಲ್ಲಿದೆ.

ಪ್ರಾಯಶ್ಚಿತಕ್ಕೆ ಅರಬೀ ಭಾಷೆಯಲ್ಲಿ ಫಿದ್‌ಯಾ ಎಂದು ಹೆಸರು. ಉಪವಾಸ ಉಪೇಕ್ಷಿಸಿದವರ ಪೈಕಿ ಫಿದ್‌ಯಾ ನೀಡಬೇಕಾದವರೂ, ಫಿದ್‌ಯಾ ಇಲ್ಲದವರೂ ಇದ್ದಾರೆ.

## ಸಾಮಾನ್ಯ ರೋಗ

ರೋಗ ಕಾರಣದಿಂದ ಉಪವಾಸ ಉಪೇಕ್ಷಿಸಿದರೆ ರೋಗ ಶಮನವಾದ ಬಳಿಕ ಖಳಾ ಸಂದಾಯ ಮಾಡಬೇಕು. ಇದಕ್ಕೆ ಬೇರೇನೂ ಫಿದ್‌ಯಾ ನೀಡಬೇಕಿಲ್ಲ.

## ಶಮನದ ನಿರೀಕ್ಷೆಯಿಲ್ಲದ ರೋಗ

ಶಮನವಾಗುವ ನಿರೀಕ್ಷೆ ಇಲ್ಲದ ರೋಗವಾಗಿದ್ದು ಆ ಕಾರಣದಿಂದ ಉಪವಾಸ ಉಪೇಕ್ಷಿಸಿದವನಿಗೆ ಅದನ್ನು ಖಳಾ ಪೂರೈಸುವುದು ಕಡ್ಡಾಯವಿಲ್ಲ. ಅಂತಹ ರೋಗ ಅನಿರೀಕ್ಷಿತವಾಗಿ ಶಮನವಾದರೂ ಖಳಾ ಸಂದಾಯ ಮಾಡಬೇಕಿಲ್ಲ. ಕಾರಣವೇನೆಂದರೆ ಶಮನವಾಗುವ ನಿರೀಕ್ಷೆ ಇಲ್ಲದಂತಹ ರೋಗಿಗೆ ಉಪವಾಸ ಹಿಡಿಯಬೇಕೆಂದು ಆಜ್ಞೆಯೇ ಅನ್ವಯವಾಗುವುದಿಲ್ಲ. ಆದರೆ, ಇವರಿಗೆ ಫಿದ್‌ಯಾ ಕಡ್ಡಾಯವಿದೆ. ಪ್ರತಿಯೊಂದು ಉಪವಾಸಕ್ಕೆ ಒಂದು ಮುದ್ದ್ (ಸುಮಾರು 650 ಗ್ರಾಂ) ಆಹಾರ ಧಾನ್ಯ ಇವರು ಫಿದ್‌ಯಾ ನೀಡಬೇಕು.

## ವೃದ್ಧಾಪ್ಯ

ವೃದ್ಧಾಪ್ಯ ಕಾರಣ ಉಪವಾಸ ಹಿಡಿಯಲಾಗದಂತಹ ಅವಸ್ಥೆಗೆ ತಲುಪಿದ್ದರೆ ಉಪವಾಸ ಕಡ್ಡಾಯವಿಲ್ಲ. ಆದರೆ ಅವರು ಪ್ರತಿಯೊಂದು ಉಪವಾಸಕ್ಕೆ ಒಂದು ಮುದ್ದ್ ಆಹಾರ ಧಾನ್ಯ ಫಿದ್‌ಯಾ ನೀಡಬೇಕು.

ವೃದ್ಧಾಪ್ಯ ಕಾರಣ ಬುದ್ಧಿ ಸ್ಥಿಮಿತ ತಪ್ಪುವುದುಂಟು. ಅಂದರೆ ಇದು ಉಪವಾಸದ ತಿಂಗಳು ಹೌದೋ? ಉಪವಾಸ ಹೇಗೆ? ಎಂಬಿತ್ಯಾದಿ ವಿಷಯಗಳು ತಿಳಿಯದ ಸ್ಥಿತಿಗೆ ತಲುಪುವುದು. ಹಾಗಿದ್ದಲ್ಲಿ ಇವರಿಗೆ ಉಪವಾಸ ಕಡ್ಡಾಯವಾಗುವುದಿಲ್ಲ; ಇವರ ಪರವಾಗಿ ಫಿದ್‌ಯಾ ನೀಡಬೇಕಿಲ್ಲ. ಬುದ್ಧಿ ಸ್ಥಿಮಿತದಲ್ಲಿಲ್ಲದ ಕಾರಣ ಉಪವಾಸದ ಆಜ್ಞೆಯಾಗಲೀ, ಫಿದ್‌ಯಾದ ಆಜ್ಞೆಯಾಗಲೀ ಇವರಿಗೆ ಅನ್ವಯವಾಗುವುದಿಲ್ಲ.

## ಬುದ್ಧಿಭ್ರಮಣೆ

ವೃದ್ಧಾಪ್ಯವಲ್ಲ; ಆದರೆ ಹುಚ್ಚು ರೋಗ ಕಾರಣ ಉಪವಾಸ ಹಿಡಿದಿಲ್ಲ. ಇವರು ನಂತರ ರೋಗ ವಾಸಿಯಾದರೆ ಖಳಾ ಸಂದಾಯ ಮಾಡಬೇಕಿಲ್ಲ; ಬದಲಿಯಾಗಿ ಫಿದ್‌ಯಾವನ್ನೂ ನೀಡಬೇಕಿಲ್ಲ.

## ಗರ್ಭಿಣಿ



ಗರ್ಭಿಣಿ ಮಹಿಳೆ ಉಪವಾಸ ಹಿಡಿಯುವುದರಿಂದ ತನಗೆ ತೊಂದರೆಯಾಗಬಹುದೆಂಬ ಭಯದಿಂದ ಉಪವಾಸ ಉಪೇಕ್ಷಿಸಿದರೆ ಬಳಿಕ ಖಳಾ ಸಂದಾಯ ಮಾಡಿದರೆ ಸಾಕು. ಫಿದ್‌ಯಾ ಕೊಡಬೇಕಿಲ್ಲ. ಆದರೆ ಹೊಟ್ಟೆಯಲ್ಲಿರುವ ಮಗುವಿಗೆ ತೊಂದರೆಯಾಗಬಹುದೆಂಬ ಭಯದಿಂದ ಉಪವಾಸ ಉಪೇಕ್ಷಿಸಿದಲ್ಲಿ ಖಳಾ ಸಂದಾಯದ ಜತೆಗೆ ಒಂದು ಉಪವಾಸಕ್ಕೆ ಒಂದು ಮುದ್ದ್ ಫಿದ್‌ಯಾ ನೀಡಬೇಕು.

## ಬಾಣಂತಿ

ಮಗುವಿಗೆ ಎದೆಹಾಲು ಕೊಡುವ ಬಾಣಂತಿ ಮಹಿಳೆಯ ಉಪವಾಸದ ವಿಧಿ ಮೊದಲು ವಿವರಿಸಿದ ಗರ್ಭಿಣಿ ಮಹಿಳೆಯ ವಿಧಿಯೇ ಆಗಿದೆ.

## ಋತುಸ್ರಾವ / ಹೆರಿಗೆ ರಕ್ತ ಇರುವವಳು

ಋತುಸ್ರಾವ ವಿರುವವಳು ಅಥವಾ ಹೆರಿಗೆ ರಕ್ತಸ್ರಾವ ವಿರುವ ಮಹಿಳೆ ಉಪವಾಸ ಹಿಡಿಯುವುದು ಹರಾಂ ಆಗಿದೆ. ಆದರೆ ಇವರು ಬಳಿಕ ಖಳಾ ಸಂದಾಯ ಮಾಡುವುದು ಕಡ್ಡಾಯವಾಗಿದೆ. ಬೇರಾವುದೇ ಫಿದ್‌ಯಾ ನೀಡಬೇಕಿಲ್ಲ.

## ಯಾತ್ರಿಕ

ನಮಾಝನ್ನು ಜಮ್‌ಅ್, ಖಸ್ರ್ ಮಾಡಲು ಅನುಮತಿಯಿರುವ ದೂರದ; ಅಂದರೆ ಸುಮಾರು 132ಕಿ.ಮೀ. ಧರ್ಮಸಮ್ಮತ ಯಾತ್ರೆಯಲ್ಲಿರುವವನಿಗೆ ಉಪವಾಸ ಉಪೇಕ್ಷೆಗೆ ಅನುಮತಿಯಿದೆ. ಇವರು ಯಾತ್ರೆ ಮುಗಿದ ಬಳಿಕ ಖಳಾ ಸಂದಾಯ ಕಡ್ಡಾಯವಿದೆ.

## ಒಂದು ತಿಂಗಳ ಉಪವಾಸ ಸಿಗದವರು

ಶಅ್‌ಬಾನ್ 30 ಪೂರ್ಣಗೊಂಡ ಬಳಿಕ ಊರಿನಲ್ಲಿ ಉಪವಾಸ ಆರಂಭವಾಗಿದೆ. ತಿಂಗಳ ನಡುವೆ ಅವನು ವಿದೇಶಕ್ಕೆ ತೆರಳಿದ. ಅಲ್ಲಿ ಮೊದಲ ದಿನ ಉಪವಾಸ ಆರಂಭಗೊಂಡಿತ್ತು. ಈದ್ ಚಂದ್ರದರ್ಶನವೂ ಮೊದಲನೇ ದಿನ ನಡೆದ ಕಾರಣ ಆತನಿಗೆ 28 ಉಪವಾಸ ಮಾತ್ರ ಲಭ್ಯವಾಗಿತ್ತು. ಹಾಗಿದ್ದಲ್ಲಿ ತನಗೆ ತಿಂಗಳ ಉಪವಾಸ ಸಿಕ್ಕಿಲ್ಲವೆಂದು ಭಾವಿಸಿ ಆತನು ಈದ್ ದಿನದಂದು ಉಪವಾಸ ಹಿಡಿಯಕೂಡದು. ಬಳಿಕ ತಕ್ಷಣ ಒಂದು ಉಪವಾಸ ಸಂದಾಯ ಮಾಡಬೇಕು.

## ಫಿದ್‌ಯಾ ನೀಡುವುದು

ಮೇಲಿನ ಒಟ್ಟು ವಿವರಣೆಗಳಲ್ಲಿ ಉಪವಾಸ ಉಪೇಕ್ಷಿಸಿದವರನ್ನು ನಾಲ್ಕು ತೆರನಾಗಿ ವಿಂಗಡಿಸಬಹುದು.

1. ಉಪವಾಸ ಖಳಾ ಸಂದಾಯ, ಫಿದ್‌ಯಾ ಎರಡೂ ಕಡ್ಡಾಯವಿಲ್ಲದವರು.
   *(ವದ್ಧಾಪ್ಯ ಅಥವಾ ಹುಚ್ಚು ಕಾರಣ ಬುದ್ಧಿ ಸ್ಥಿಮಿತದಲ್ಲಿಲ್ಲದವರು)*
2. ಉಪವಾಸ ಖಳಾ ಸಂದಾಯ ಕಡ್ಡಾಯವಿಲ್ಲ. ಫಿದ್‌ಯಾ ಕಡ್ಡಾಯವಿರುವವರು.
   *(ವೃದ್ಧಾಪ್ಯ ಅಥವಾ ವಾಸಿಯಾಗುವ ನಿರೀಕ್ಷೆಯಿಲ್ಲದ ರೋಗ ಕಾರಣ ಉಪವಾಸ ಉಪೇಕ್ಷಿಸಿದವರು)*
3. ಖಳಾ ಸಂದಾಯ ಕಡ್ಡಾಯವಿರುವವರು; ಫಿದ್‌ಯಾ ಕಡ್ಡಾಯವಿಲ್ಲದವರು.
   *(ಋತುಸ್ರಾವ, ರೋಗ, ಯಾತ್ರೆ ಮುಂತಾದ ಸಕಾರಣಗಳಿಂದ ಯಾ ಕಾರಣವಿಲ್ಲದೆ ಉಪವಾಸ ಉಪೇಕ್ಷಿಸಿದವರು)*
4. ಖಳಾ ಸಂದಾಯ ಮತ್ತು ಫಿದ್‌ಯಾ ಎರಡೂ ಕಡ್ಡಾಯವಿರುವವರು.
   *(ಮಗುವಿನ ಆರೋಗ್ಯದ ಬಗ್ಗೆ ಭಯ ಕಾರಣ ಉಪವಾಸ ಉಪೇಕ್ಷಿಸಿದ ಗರ್ಭಿಣಿ, ಎದೆಹಾಲು ಕೊಡುವ ತಾಯಿ)*

## ಖಳಾ ಸಂದಾಯ ಯಾವಾಗ?

ಖಳಾ ಸಂದಾಯದ ವಿಧಿ ಹಲವರಿಗೆ ಹಲವು ತರವಿದೆ.

1. ಶರಅ್ ಅನುಮತಿ ನೀಡಿದ ಕಾರಣಗಳಿಗಲ್ಲದೆ ಉಪವಾಸ ಉಪೇಕ್ಷಿಸಿದವರು.
   - *ಇವರು ತಕ್ಷಣ ಖಳಾ ಸಂದಾಯ ಕಡ್ಡಾಯವಿದೆ.*
   - *ಯಾತ್ರೆ, ರೋಗ, ಋತುಸ್ರಾವ ಮುಂತಾದ ಅಡ್ಡಿಗಳಿಲ್ಲದಿದ್ದರೆ ಈದ್‌ನ ಮರುದಿನವೇ ಖಳಾ ಪೂರೈಸಬೇಕು.*
   - *ಅಡ್ಡಿಗಳಿದ್ದರೆ ಅಡ್ಡಿಗಳು ನಿವಾರಣೆಯಾದ ತಕ್ಷಣ ಖಳಾ ಸಂದಾಯ ಮಾಡಬೇಕು. ಮುಂದೂಡುವುದು ನಿಷಿದ್ಧ.*
2. ರೋಗ, ಯಾತ್ರೆ, ಋತುಸ್ರಾವ, ಗರ್ಭಿಣಿ ಯಾ ಬಾಣಂತಿಯಾದ ಕಾರಣ ತನ್ನ ಅಥವಾ ಮಗುವಿನ ಆರೋಗ್ಯದ ಬಗ್ಗೆ ಭಯ ಮುಂತಾದ ಕಾರಣಗಳಿಂದ ಉಪವಾಸ ಉಪೇಕ್ಷಿಸಿದವರು.
   - ಇವರು ತಕ್ಷಣ ಖಳಾ ಸಂದಾಯ ಕಡ್ಡಾಯವಿಲ್ಲ.
   - ಅಡ್ಡಿಗಳಿಲ್ಲದಿದ್ದರೂ ಮುಂದೂಡಬಹುದಾಗಿದೆ.
   - ಅಡ್ಡಿಗಳಿಲ್ಲದಿದ್ದರೆ ಮುಂದಿನ ರಮಳಾನ್ ಆರಂಭವಾಗುವ ತನಕ ಮುಂದೂಡುವುದು ನಿಷಿದ್ಧವಾಗಿದೆ.
   - ದೀರ್ಘಕಾಲದ ರೋಗ, ದೀರ್ಘಕಾಲದ ನಿರಂತರ ಯಾತ್ರೆ ಮುಂತಾದ ಕಾರಣಗಳಿದ್ದರೆ ಮುಂದಿನ ರಮಳಾನ್ ಆರಂಭವಾಗುವ ತನಕ ಮುಂದೂಡುವುದು ನಿಷಿದ್ಧವಲ್ಲ.

## ಖಳಾ ಸಂದಾಯ ಮತ್ತು ಸುನ್ನತ್ ಉಪವಾಸ

ಶವ್ವಾಲ್ ತಿಂಗಳ ಆರು ಉಪವಾಸ, ಆಶೂರಾ, ತಾಸೂಆ, ಅರಫಾ ಮುಂತಾದ ಸುನ್ನತ್ ಉಪವಾಸದ ಜತೆಗೆ ಫರ್ಳ್ ಖಳಾ ಸಂದಾಯ ಸಿಂಧುವಾಗುತ್ತದೆ. ಆದರೆ ಸುನ್ನತ್ ಉಪವಾಸದ ಪ್ರತ್ಯೇಕ ಪುಣ್ಯ ಹಾಗೂ ಖಳಾ ಸಂದಾಯದ ಪ್ರತ್ಯೇಕ ಪುಣ್ಯ ಸಿಗಲು ಖಳಾ ಸಂದಾಯವನ್ನು ಇತರ ದಿನಗಳಲ್ಲಿ ನಿರ್ವಹಿಸಬೇಕು. ಸಕಾರಣವಿಲ್ಲದೆ ಉಪವಾಸ ಉಪೇಕ್ಷಿಸಿದವರು ಫರ್ಳ್‌ಖಳಾ ಸಂದಾಯ ಮಾಡುವ ಮುನ್ನ ಸುನ್ನತ್ ಉಪವಾಸ ಹಿಡಿಯಕೂಡದು. ಮೊದಲು ಫರ್ಳ್ ಖಳಾ ಸಂದಾಯ ಮಾಡಿ ಬಳಿಕವಷ್ಟೆ ಸುನ್ನತ್ ಉಪವಾಸ ಹಿಡಿಯಬೇಕು. ಶವ್ವಾಲ್‌ನ ಆರಂಭದಲ್ಲಿ ಆರು ದಿನ ಉಪವಾಸ ಹಿಡಿಯುವುದಾದರೆ ಇವರು ಖಳಾ ಸಂದಾಯ ಮತ್ತು ಶವ್ವಾಲ್‌ನ ಸುನ್ನತ್ ಇವೆರಡನ್ನು ನಿಯ್ಯತ್ ಮಾಡಬಹುದು.

ಋತುಸ್ರಾವ, ರೋಗ ಮುಂತಾಗಿ ಮೊದಲು ವಿವರಿಸಲಾದ ಸಕಾರಣಗಳಿಗಾಗಿ ಉಪವಾಸ ಉಪೇಕ್ಷಿಸಿದವರು ಶವ್ವಾಲ್‌ನ ಆರು ಸುನ್ನತ್ ಉಪವಾಸಗಳನ್ನು ಬೇಕಿದ್ದರೆ ಪ್ರತ್ಯೇಕವಾಗಿ ಮೊದಲು ಹಿಡಿದು ಬಳಿಕ ಖಳಾ ಸಂದಾಯ ಮಾಡಬಹುದು. ಇಲ್ಲವೇ ಖಳಾ ಸಂದಾಯದ ಜತೆಗೆ ಸುನ್ನತ್‌ನ ನಿಯ್ಯತ್ ಕೂಡಾ ಮಾಡಬಹುದು. ಸುನ್ನತ್‌ನ ನಿಯ್ಯತ್ ಮಾಡದೆ ಆ ದಿನ ಖಳಾ ಸಂದಾಯದ ನಿಯ್ಯತ್ ಮಾತ್ರ ಮಾಡಿದ್ದಲ್ಲಿ, ಆ ದಿನದ ಉಪವಾಸ ಹಿಡಿಯಬೇಕೆಂಬ ಬೇಡಿಕೆಗೆ ಸ್ಪಂದಿಸಿದಂತಾಗುತ್ತದೆ. ಸುನ್ನತ್‌ನ ಪುಣ್ಯ ಸಿಗುವುದಿಲ್ಲ.

ನಮಾಝ್ ವೇಳಾಪಟ್ಟಿ



ಒಂದು ಪುಟದಲ್ಲಿ ಒಂದು ತಿಂಗಳು 12 ಪುಟಗಳು
ಕೇವಲ 15-00 ರೂ. ಮಾತ್ರ
ಅಂಚೆಯಲ್ಲಿ ಬೇಕಾದವರು ರೂ.20 ಕಳುಹಿಸಿಕೊಡಬೇಕು.
ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704

# ...ಮ ಕರ್ಮನೋಟ

...ಝು ಸಖಾಫಿ, ಬಂಟ್ವಾಳ

## ಖಳಾ ಸಂದಾಯ ಮುಂದೂಡಿದವರ ಫಿದ್‌ಯಾ

ಕಾರಣವಿಲ್ಲದೆ ಉಪವಾಸ ಉಪೇಕ್ಷಿಸಿದವರು ತಕ್ಷಣ ಖಳಾ ಸಂದಾಯ ಮಾಡಬೇಕೆಂದೂ ಸಕರಣವಿದ್ದು ಉಪೇಕ್ಷಿಸಿದವರು ಅಡ್ಡಿಗಳಿಲ್ಲದಿದ್ದರೆ ಮುಂದಿನ ರಮಳಾನಿಗೆ ಮುಂಚಿತವಾಗಿ ಖಳಾ ಪೂರೈಸಬೇಕೆಂದೂ ಈ ಮೊದಲು ವಿವರಿಸಿದೆ.

ಇನ್ನು ಖಳಾ ಪೂರೈಕೆಗೆ ಅಡ್ಡಿಗಳಿಲ್ಲದವರು ಮುಂದಿನ ರಮಳಾನ್ ತನಕ ಖಳಾ ಪೂರೈಸದಿದ್ದರೆ...? ಇವರು ಒಂದು ಉಪವಾಸಕ್ಕೆ ಒಂದು ಮುದ್ದ್‌ನಂತೆ ಫಿದ್‌ಯಾ ನೀಡಬೇಕು. ಜತೆಗೆ ಖಳಾಸಂದಾಯ ಮಾಡಬೇಕು.

ಮುಂದಿನ ವರ್ಷವೂ ಖಳಾ ಸಂದಾಯ ಮಾಡದಿದ್ದರೆ...? ಒಂದು ಉಪವಾಸಕ್ಕೆ ಎರಡು ವರ್ಷದ್ದು ಎರಡು ಮುದ್ದ್‌ನಂತೆ ಫಿದ್‌ಯಾ ಕೊಡಬೇಕು. ಹೀಗೆ ವರ್ಷಕ್ಕೆ ಒಂದು ಉಪವಾಸಕ್ಕೆ ಒಂದು ಮುದ್ದ್‌ನಂತೆ ಫಿದ್‌ಯಾ ಕೊಡಬೇಕು.

ಮುಂದೂಡಲು ಸಕಾರಣವಿದ್ದರೆ...? ಈ ವರ್ಷ ರೋಗ ಕಾರಣ ಹತ್ತು ಉಪ ವಾಸ ಉಪೇಕ್ಷಿಸಿದ್ದಾನೆ. ಬಳಿಕ ಹನ್ನೊಂದು ತಿಂಗಳು ಅವನ ರೋಗವು ಉಪವಾಸ ಖಳಾ ಸಂದಾಯ ಮಾಡಲು ಬಿಡಲಿಲ್ಲ. ಮುಂದಿನ ರಮಾಳಾನ್‌ನಲ್ಲಿ ಆತ ರೋಗ ಮುಕ್ತನಾದ, ಹಾಗಿದ್ದರೆ ಅವನಿಗೆ ಖಳಾ ಆದ ಹತ್ತು ಉಪವಾಸವನ್ನು ಖಳಾ ಸಂದಾಯ ಮಾಡಿದರೆ ಸಾಕು. ಒಂದು ವರ್ಷ ಮುಂದೂಡಿದ್ದಕ್ಕೆ ಫಿದ್‌ಯಾ ಕೊಡಬೇಕಿಲ್ಲ. ಮುಂದೂಡಲು ಅವನಿಗೆ ಸಕಾರಣವಿದೆ ತಾನೇ?

## ಖಳಾ ಸಂದಾಯ ಮಾಡದೆ ಮರಣ ಹೊಂದಿದರೆ?

- ರಮಳಾನ್ ತಿಂಗಳಲ್ಲೆ ವ್ಯಕ್ತಿಯೊಬ್ಬ ಮೃತನಾದ. ಅವನು ಅದೇ ತಿಂಗಳಲ್ಲಿ ಕೆಲವು ಉಪವಾಸಗಳನ್ನು ಉಪೇಕ್ಷಿಸಿದ್ದಾನೆ. ಹಾಗಿದ್ದಲ್ಲಿ ಅವನ ಬಾಕಿ ಉಪವಾಸಕ್ಕಾಗಿ ಯಾವುದೇ ಫಿದ್‌ಯಾ ನೀಡಲಿಕ್ಕಿಲ್ಲ. ಬಾಕಿ ಉಪವಾಸಗಳನ್ನು ಕುಟುಂಬದವರು ಖಳಾ ಪೂರೈಸಿ ಸಂದಾಯ ಮಾಡಬೇಕೆಂದೂ ಇಲ್ಲ. ರಮಳಾನಿನಲ್ಲೆ ವ್ಯಕ್ತಿ ಮೃತನಾದ ಕಾರಣ ಉಪೇಕ್ಷಿಸಿದ ಉಪವಾಸದ ಖಳಾ ಸಂದಾಯ ಮಾಡಬೇಕೆಂಬ ವಿಧಿ ಆ ವ್ಯಕ್ತಿಗೆ ಅನ್ವಯವಾಗಿಲ್ಲವಾದ್ದರಿಂದ ಅವನಿಗೆ ಫಿದ್‌ಯಾ ಅನ್ವಯಿಸುವುದಿಲ್ಲ.
- ರಮಳಾನಿನ ಉಪವಾಸ ಬಾಕಿ ಇದೆ. ರಮಳಾನ್ ಮುಗಿದು ದಿನಗಳು ಕಳೆದಿವೆ. ಆದರೆ ಆ ವ್ಯಕ್ತಿಗೆ ರೋಗ ಕಾರಣ ಖಳಾ ಪೂರೈಕೆ ಮಾಡುವ ಅವಕಾಶ ಸಿಕ್ಕಿಲ್ಲ. ಅಥವಾ ಇತರ ಕಾರಣಗಳಿಂದ ಖಳಾ ಪೂರೈಕೆ ಮಾಡಲಾಗಿಲ್ಲ. ಉದಾ: ಈದ್‌ನ ಮರುದಿನ ಆತ ಶರಅ್ ಅನುಮತಿ ನೀಡಿದ ಯಾತ್ರೆಯಲ್ಲಿದ್ದ, ಯಾ ಉಪವಾಸ ಉಪೇಕ್ಷಿಸಿದ ಮಹಿಳೆಗೆ ಈದ್‌ನ ಮರುದಿನ ಋತುಸ್ರಾವ ಆರಂಭಗೊಂಡಿತು. ಅದು ಮುಗಿಯುವುದರೊಂದಿಗೆ ವ್ಯಕ್ತಿ ಮೃತಗೊಂಡಿತು. ಹಾಗಿದ್ದರೂ ಇವರು ಉಪೇಕ್ಷಿಸಿದ ಉಪವಾಸಕ್ಕೆ ಫಿದ್‌ಯಾ ನೀಡಬೇಕಿಲ್ಲ.
- ರಮಳಾನಿನ ಉಪವಾಸ ಉಪೇಕ್ಷಿಸಿದ ವ್ಯಕ್ತಿ ರಮಳಾನ್ ಮುಗಿದು ಖಳಾ ಸಂದಾಯ ಮಾಡುವ ಸಮಯಾವಕಾಶ, ಆರೋಗ್ಯ ಲಭ್ಯವಾಗಿದೆ, ಹಾಗಿದ್ದೂ ಅದನ್ನು ಖಳಾ ಪೂರೈಸದೆ ವ್ಯಕ್ತಿ ಮೃತ ಹೊಂದಿದ್ದಾರೆ. ಹಾಗಿದ್ದರೆ ಆ ವ್ಯಕ್ತಿಯ ನಷ್ಟವಾದ ಉಪವಾಸಕ್ಕಾಗಿ ಆತನ ವಾರೀಸು ಸೊತ್ತಿನಿಂದ ಫಿದ್‌ಯಾ ನೀಡಬೇಕಾಗುತ್ತದೆ.

## ಮೃತರ ಫಿದ್‌ಯಾ

ಖಳಾ ಸಂದಾಯ ಮಾಡಲು ಅಡ್ಡಿಗಳೇನೂ ಇಲ್ಲದೆ ಮುಂದಿನ ರಮಳಾನ್ ತನಕ ಮುಂದೂಡಿದ್ದು ಮುಂದಿನ ರಮಳಾನ್ ಬಳಿಕ ಖಳಾ ಸಂದಾಯ ಮಾಡದೆ ಮರಣ ಹೊಂದಿದರೆ ಒಂದು ಉಪವಾಸಕ್ಕೆ ಎರಡು ಮುದ್ದ್ ಫಿದ್‌ಯಾ ನೀಡಬೇಕಾಗುತ್ತದೆ. ಒಂದು ಮುದ್ದ್ ಉಪವಾಸ ನಷ್ಟವಾದುದಕ್ಕೆ. ಇನ್ನೊಂದು ಮುದ್ದ್ ಒಂದು ವರ್ಷ ಮುಂದೂಡಿದ್ದಕ್ಕೆ. ಉಪವಾಸ ಉಪೇಕ್ಷಿಸಿದ ವ್ಯಕ್ತಿ ಖಳಾ ಸಂದಾಯ ಮಾಡದೆ ಎಷ್ಟು ವರ್ಷಗಳು ಮುಂದೂಡಿರುವರೋ ಮುಂದೂಡಿದ್ದಕ್ಕಾಗಿ ಪ್ರತಿ ವರ್ಷಕ್ಕೆ ಒಂದು ಮುದ್ದ್‌ನಂತೆ ಫಿದ್‌ಯಾ ನೀಡಬೇಕು. ಉಪೇಕ್ಷಿಸಿದ ಉಪವಾಸವೊಂದಕ್ಕೆ ಒಂದು ಮುದ್ದ್‌ನಂತೆ ನೀಡಬೇಕು. ಉದಾ: 2001ನೇ ವರ್ಷದ ನಾಲ್ಕು ಉಪವಾಸಗಳನ್ನು ಒಬ್ಬ ವ್ಯಕ್ತಿ ಹಿಡಿಯಲಿಲ್ಲ. ಬಳಿಕ ಹತ್ತು ರಮಳಾನ್ ದಾಟಿದೆ. ಆ ನಾಲ್ಕು ಉಪವಾಸ ಹಾಗೆಯೇ ಖಳಾ ಸಂದಾಯ ಮಾಡದೆ ಬಾಕಿ ಇದೆ. 2011ರಲ್ಲಿ ವ್ಯಕ್ತಿ ಮರಣ ಹೊಂದಿದೆ. ಹಾಗಿದ್ದಲ್ಲಿ ನಾಲ್ಕು ಉಪವಾಸದ ನಾಲ್ಕು ಮುದ್ದ್ ಮತ್ತು ಮುಂದೂಡಿದ್ದಕ್ಕಾಗಿ ನಾಲ್ಕು ಉಪವಾಸಕ್ಕೆ ಹತ್ತು ವರ್ಷಕ್ಕೆ ನಲ್ವತ್ತು ಮುದ್ದ್ ಹೀಗೆ ಒಟ್ಟು 44 ಮುದ್ದ್ ಆಹಾರ ಧಾನ್ಯವನ್ನು ಮೃತ ವ್ಯಕ್ತಿಯ ವಾರೀಸು ಸೊತ್ತಿನಿಂದ ಫಿದ್‌ಯಾ ಆಗಿ ಕೊಡಬೇಕು.

## ಫಿದ್‌ಯಾ ಏನು?

ಉಪವಾಸದ ಫಿದ್‌ಯಾ ಒಂದು ಉಪವಾಸಕ್ಕೆ ಒಂದು ಮುದ್ದ್ ಊರಿನ ಹೆಚ್ಚಿನ ಬಳಕೆಯ ಆಹಾರಧಾನ್ಯ. ಒಂದು ಮುದ್ದ್ ಅಕ್ಕಿ ಸುಮಾರು 650ಗ್ರಾಂಗಳಿರುತ್ತವೆ.



## ಮೃತರ ಫಿದ್‌ಯಾಕ್ಕೆ ಬದಲಿ

ಉಪವಾಸ ಖಳಾ ಮಾಡಿ ಸಂದಾಯ ಮಾಡದೆ ಮೃತ ಹೊಂದಿದ ವ್ಯಕ್ತಿಯ ಒಂದು ಉಪವಾಸಕ್ಕೆ ಒಂದು ಮುದ್ದ್ ಧಾನ್ಯವನ್ನು ಮೃತ ವ್ಯಕ್ತಿಯ ವಾರೀಸು ಸೊತ್ತಿನಿಂದ ಕೊಡಬೇಕು ಎಂದು ಈ ಮೊದಲು ಹೇಳಲಾಗಿದೆ. ಇಲ್ಲಿ ಮೃತ ವ್ಯಕ್ತಿಯ ಕುಟುಂಬದವರು ಯಾ ಕುಟುಂಬದವರು ಅನುಮತಿ ನೀಡಿದ ವ್ಯಕ್ತಿಗಳು ಮೃತ ವ್ಯಕ್ತಿಯ ಬಾಕಿ ಉಪವಾಸಗಳನ್ನು ತಾವೇ ಹಿಡಿದು ಸಂದಾಯಮಾಡಬಹುದು. ಹಾಗೆ ಸಂದಾಯ ಮಾಡಿದರೆ ಮೃತ ವ್ಯಕ್ತಿಯ ನಷ್ಟವಾದ ಉಪವಾಸಕ್ಕೆ ಬೇರೆ ಫಿದ್‌ಯಾ ನೀಡಬೇಕೆಂದಿಲ್ಲ. ಆದರೆ ಖಳಾ ಸಂದಾಯ ಒಂದು ವರ್ಷ ಅಥವಾ ಹೆಚ್ಚು ಕಾಲ ಮುಂದೂಡಿದ್ದರೆ ಅದಕ್ಕಾಗಿ ನೀಡುವ ಫಿದ್‌ಯಾ ಕೊಡಬೇಕು. ಅದಕ್ಕೆ ಬದಲಿ ಉಪವಾಸವಿಲ್ಲ.

ಇನ್ನು ಮೃತ ವ್ಯಕ್ತಿಗೆ ವಾರೀಸು ಸೊತ್ತುಗಳೇನೂ ಇಲ್ಲದಿದ್ದರೆ...?

ಕುಟುಂಬದವರಿಗೆ ಫಿದ್‌ಯಾ ನೀಡುವುದು ಅಥವಾ ಖಳಾ ಉಪವಾಸ ಸಂದಾಯ ಸುನ್ನತ್ತಿದೆ. ಕಡ್ಡಾಯವಿಲ್ಲ.

## ಫಿದ್‌ಯಾ ಹೇಗೆ?

ಫಿದ್‌ಯಾ ಆಗಿ ಆಹಾರಧಾನ್ಯವನ್ನೇ ನೀಡಬೇಕು. ಅದರ ಬೆಲೆ ನೀಡಿದರೆ ಸಿಂಧುವಲ್ಲ. ಧಾನ್ಯವನ್ನು ಬೇಯಿಸಿ ಊಟ ಬಡಿಸಿದರೂ ಸಾಲದು. ಧಾನ್ಯ ರೂಪದಲ್ಲಿ ನೀಡಿದರೆ ಮಾತ್ರ ಸಿಂಧು.

## ಫಿದ್‌ಯಾ ಪಡೆಯಲು ಅರ್ಹರು

ಝುಕಾತ್ ಪಡೆಯಲು ಅರ್ಹರಾದವರೆಲ್ಲ ಫಿದ್‌ಯಾ ಪಡೆಯಲು ಅರ್ಹರಲ್ಲ. ಫಖೀರ್ (ಅತಿಬಡವರು) ಮಿಸ್ಕೀನ್ (ಬಡವರು) ಎಂಬ ಎರಡು ವಿಭಾಗದವರು ಮಾತ್ರ ಇದಕ್ಕೆ ಅರ್ಹರಾಗಿರುವರು. ಇತರರಿಗೆ ಕೊಟ್ಟರೆ ಸಿಂಧುವಾಗುವುದಿಲ್ಲ.

## ಒಬ್ಬನಿಗೆ ಕೊಟ್ಟರೆ?

ಫಿದ್‌ಯಾವನ್ನು ಝುಕಾತ್‌ನಂತೆ ಹಲವರಿಗೆ ವಿತರಿಸಬೇಕೆಂದು ನಿಬಂಧನೆಯಿಲ್ಲ. ಹಲವು ಉಪವಾಸಗಳ ಫಿದ್‌ಯಾವನ್ನು ಒಬ್ಬನಿಗೆ ಕೊಟ್ಟರೂ ಸಿಂಧುವಾಗುತ್ತದೆ. ಆದರೆ ಒಂದು ಉಪವಾಸದ ಫಿದ್‌ಯಾವನ್ನು ಇಬ್ಬರಿಗೆ ವಿತರಿಸುವಂತಿಲ್ಲ. ಫಿದ್‌ಯಾ ನೀಡುವುದು ಝುಕಾತ್‌ನಂತೆ ಊರಿನ ವ್ಯಾಪ್ತಿಯೊಳಗಿರಬೇಕು ಎಂಬ ನಿಬಂಧನೆಯೂ ಇಲ್ಲ.

➔ 9ನೇ ಪುಟಕ್ಕೆ


# H.I.ಮದರಸ ಉಜಿರ್‌ಬೆಟ್ಟು ರಾಜ್ಯದಲ್ಲಿ ಪ್ರಥಮ



ಮುಹಮ್ಮದ್ ಸಫ್‌ವಾನ್
VII th ಪ್ರಥಮ ರ್‍ಯಾಂಕ್ (ರಾಜ್ಯ)

ಸಮಿನಾಝ್
7ನೇ ದ್ವಿತೀಯ ರ್‍ಯಾಂಕ್
(ರೇಂಜ್)

ಅಖಿಲ ಭಾರತ ಸುನ್ನೀ ವಿದ್ಯಾಭ್ಯಾಸ ಬೋರ್ಡ್ 2011 ಜುಲೈ ತಿಂಗಳಿನಲ್ಲಿ 5 ಮತ್ತು 7ನೇ ತರಗತಿಗಳಿಗೆ ನಡೆಸಿದ ಪಬ್ಲಿಕ್ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ನಮ್ಮ ಮದರಸದ ವಿದ್ಯಾರ್ಥಿಗಳಾದ ಸಫ್‌ವಾನ್, ಸಮಿನಾಝ್, ಸಮೀಮ, ತಹ್‌ಸೀನ ಹಾಗೂ ಇದಕ್ಕೆ ಕಾರಣಕರ್ತರಾದ ಉಸ್ತಾದ್ A.K.ಸಖಾಫಿ ಅಜ್ಜಿಕಲ್ಲು, K.P. ಸಅದಿ ಮಂಗಳಪದವು, ಇಲ್ಯಾಸ್ ಲತೀಫಿ ಉಜಿರ್‌ಬೆಟ್ಟು ಇವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ ಇನ್ನೂ ಹೆಚ್ಚಿನ ಶ್ರೇಯಸ್ಸು ಸಿಗುವಂತಾಗಲಿ ಎಂದು ಹಾರೈಸುತ್ತೇವೆ.

ಸಮೀಮ
Vನೇ ಪ್ರಥಮ
(ರಾಜ್ಯ)

ಫಾತಿಮತುಲ್ ತಹ್‌ಸೀನ
Vನೇ ತೃತೀಯ
(ರಾಜ್ಯ)

ಅಧ್ಯಕ್ಷರು ಮತ್ತು ಸದಸ್ಯರು
SSF ಉಜಿರ್‌ಬೆಟ್ಟು | H.I. ಮದರಸ ಉಜಿರ್‌ಬೆಟ್ಟು

# ಅಭಿನಂದನೆಗಳು

ಸಫೀಕ
(ಪ್ರಥಮ)
10ನೇ ತರಗತಿ
(ರಾಜ್ಯ)



ಮುಹಮ್ಮದ್ ಫಯಾಝ್
(ದ್ವಿತೀಯ)
10ನೇ ತರಗತಿ (ರೇಂಜ್)

ಅಖಿಲ ಭಾರತ ಸುನ್ನೀ ವಿದ್ಯಾಭ್ಯಾಸ ಬೋರ್ಡ್ 10ನೇ ತರಗತಿಗೆ ನಡೆಸಿದ ಪಬ್ಲಿಕ್ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ರ್‍ಯಾಂಕನ್ನು ಪಡೆದ ಸಫೀಕ, ರೇಂಜ್ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದ ಮುಹಮ್ಮದ್ ಫಯಾಝ್ ನಮ್ಮ ಮದರಸ ಹಳೇ ವಿದ್ಯಾರ್ಥಿಗಳಾಗಿರುತ್ತಾರೆ. (ಇಬ್ಬರೂ ಗಿರಿಗುಡ್ಡೆ ಮಜೀದ್, ಆಸಿಯ ದಂಪತಿಗಳ ಮಕ್ಕಳು) ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನೂ, ಇದಕ್ಕೆ ಕಾರಣಕರ್ತರಾದ ಝುಕರಿಯಾ ಸಅದಿ ಉಸ್ತಾದರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

SSF ಉಜಿರ್‌ಬೆಟ್ಟು ಕಾರ್ಯಕರ್ತರು

# ಹಗ್ಗ ಸಿದ್ಧವಿದೆ!

**ನೂಲನ್ನು ಭದ್ರವಾಗಿ ಪೋಣಿಸಿ ಬಳಿಕ ಅದನ್ನು ಬಿಡಿಸಿ ಛಿದ್ರಛಿದ್ರವನ್ನಾಗಿಸುವ ಹೆಣ್ಣಿನಂತೆ ನೀವಾಗಬೇಡಿ.**

*ಎಸ್.ಪಿ. ಹಂಝ ಸಖಾಫಿ, ಬಂಟ್ವಾಳ*

ಅವಳೊಬ್ಬಳು ವೃದ್ಧೆ. ಹೆಸರು ರೈತ್ವತ್. ಜಅರಾನಾದ ಹತ್ತಿರ ಪೇಟೆಯೊಂದರಲ್ಲಿ ಅವಳು ಸುತ್ತಾಡುತ್ತಿದ್ದಾಳೆ. ಅವಳಿಗೆ ಬೇಕಾದುದು ಹತ್ತಿ. ಅತ್ತಿತ್ತ ಸುತ್ತಾಡಿ ಹತ್ತಿಯ ಕೋಡುಗಳನ್ನು ಖರೀದಿಸಿ ಮನೆಗೆ ತರುತ್ತಾಳೆ. ಮನೆಯಲ್ಲಿ ಅವಳಿಗೆ ದಾಸಿಯರಿದ್ದಾರೆ. ಅವರನ್ನು ಸೇರಿಸಿ ಹತ್ತಿಯ ಕೋಡುಗಳನ್ನು ಬಿಚ್ಚಿ ಬೀಜಬೇರ್ಪಡಿಸಿ ಹತ್ತಿ ಸಿದ್ಧಪಡಿಸುತ್ತಾಳೆ. ನಂತರ ಆ ಹತ್ತಿಯಿಂದ ನೂಲು ಮಾಡುವ ಕೆಲಸ. ಅದಕ್ಕೆ ಬೇಕಾದ ಉಪಕರಣ ಅವಳ ಬಳಿಯಿದೆ. ತುಂಬ ಕಷ್ಟಪಟ್ಟು ದಾಸಿಯರೊಂದಿಗೆ ಸೇರಿ ಅವಳು ನೂಲು ಸಿದ್ಧಪಡಿಸುತ್ತಾಳೆ. ಒಂದು ಹಂತದಲ್ಲಿ ಕೆಲಸ ಮುಗಿಯುತ್ತದೆ.

ಅವಳು ಪುನ ಸಿದ್ಧವಾಗುತ್ತಾಳೆ. ತಾನು ಸಿದ್ಧಪಡಿಸಿದ ನೂಲಿನ ರಾಶಿಯನ್ನು ತನ್ನ ದಾಸಿಯರಲ್ಲಿ ತರಲು ಹೇಳುತ್ತಾಳೆ. ಬಳಿಕ ದಾಸಿ ಯರೊಂದಿಗೆ ಸೇರಿ ಆ ನೂಲನ್ನು ಬಿಡಿಸುವ ಕೆಲಸ ಆರಂಭಿಸುತ್ತಾಳೆ. ಪೋಣಿಸಿದ್ದ ನೂಲನ್ನೆಲ್ಲ ಬಿಚ್ಚಿ ಪುನಃ ಅವಳು ಹತ್ತಿಯನ್ನಾಗಿಸಿ ರಾಶಿ ಹಾಕುತ್ತಾಳೆ. ನಂತರ ಆ ರಾಶಿಯತ್ತ ನೋಡಿ ನಗುತ್ತಾಳೆ. ಸಅದ್‌ನ ಪುತ್ರಿ ರೈತ್ವತ್ ಎಂಬ ತಲೆ ಹಿಡುಕ ಹೆಣ್ಣು- ಅವಳ ಈ ಕಥೆಯನ್ನು ಖುರ್‌ಆನ್ ಸೂರಾ ಅನ್ನಹ್‌ಲ್‌ನ 92ನೇ ಸೂಕ್ತದಲ್ಲಿ ಒಂದು ಉಪಮೆಯಾಗಿ ಉಲ್ಲೇಖಿಸಿದೆ. "ನೂಲನ್ನು ಭದ್ರವಾಗಿ ಪೋಣಿಸಿ ಬಳಿಕ ಅದನ್ನು ಬಿಡಿಸಿ ಛಿದ್ರಛಿದ್ರವನ್ನಾಗಿಸುವ ಹೆಣ್ಣಿನಂತೆ ನೀವಾಗಬೇಡಿ."

ಪವಿತ್ರ ರಮಳಾನ್‌ನಲ್ಲಿ ನಾವು ಕಷ್ಟಪಟ್ಟು ಒಂದು ಸುಭದ್ರ ಹಗ್ಗವನ್ನು ಪೋಣಿಸಿದ್ದೇವೆ. ಅದಕ್ಕಾಗಿ ನಮ್ಮ ನಾಲಗೆ, ಕಣ್ಣು, ಕಿವಿ, ಚಿಂತನೆ, ಹೊಟ್ಟೆ, ಗುಪ್ತಾಂಗ ಹೀಗೆ ನಮ್ಮ ಶರೀರ ಮನಸ್ಸುಗಳೆರಡೂ ತುಂಬ ಕಷ್ಟಪಟ್ಟಿರಬಹುದು. ಹಗಲಿಡೀ ಅದಕ್ಕಾಗಿ ಹಸಿದು ಕುಳಿತಿದ್ದೇವೆ. ರಾತ್ರಿ ನಿದ್ದೆ ಬಿಟ್ಟು ನಮಾಜ್‌ಗೆ, ಖುರ್‌ಆನ್ ಪಾರಾಯಣಕ್ಕೆ ನಿಂತಿದ್ದೇವೆ. ನಾಲಗೆಯ ಮಾತಿನ ಚಪಲವನ್ನು ಹಿಡಿದಿಟ್ಟಿದ್ದೇವೆ. ಕಷ್ಟಪಟ್ಟು ಬೆವರು ಸುರಿಸಿದ ಹಣವನ್ನು ಶರೀರೇಚ್ಛೆ ಮೆಟ್ಟಿನಿಂತು ಇತರರಿಗೆ ಕೊಟ್ಟಿದ್ದೇವೆ. ಅನ್ಯ ಹೆಣ್ಣನ್ನು ನೋಡದೆ, ಅಶ್ಲೀಲಗಳತ್ತ ಕಣ್ಣು ಹಾಕದೆ ಕಣ್ಣಿನ ಮೇಲೆ ಬಲ ಪ್ರಯೋಗಿಸಿದ್ದೇವೆ. ಅದಕ್ಕಾಗಿ ಮನೆಯಲ್ಲಿ ದೃಶ್ಯ ಮಾಧ್ಯಮಕ್ಕೆ ಒಂದು ತಿಂಗಳ ರಜೆಯನ್ನೇ ಘೋಷಿಸಿದ್ದೇವೆ. ಪಾರತ್ರಿಕ ಯಶಸ್ಸಿನ ಲೋಕದತ್ತ ಪ್ರಯಾಣ ನಡೆಸಲು ಒಂದು ಸುಭದ್ರ ಹಗ್ಗವನ್ನು ನಾವು ಸಿದ್ಧಪಡಿಸಿದ್ದೇವೆ. ನಮ್ಮೆಲ್ಲರ ಪ್ರಯತ್ನದ ಲಕ್ಷ್ಯ ಅದು ಮಾತ್ರವಾಗಿತ್ತು.

ಇನ್ನು ಸಮುದಾಯಕ್ಕೆ ಸಮಯವಾಗಿದೆ. ಆ ಹಗ್ಗದ ಒಂದೊಂದೇ ಹುರಿಗಳನ್ನು ಬಿಡಿಸಲು. ಬಹುಷ ಎಂದಿನಂತೆ ಸಮುದಾಯದ ಬಹುಪಾಲು ಮಂದಿ ಇಂದೇ ಕೆಲಸದಲ್ಲಿ ನಿರತರಾಗುತ್ತಿದ್ದಾರೆ. ಒಂದು ತಿಂಗಳ ಕಾಲ ದೇಹದ ದುರ್ಗುಣಗಳಿಗೆ ಕಡಿವಾಣ ಹಾಕಿದ್ದು ಕೇವಲ ಪ್ರಹಸನ ಮಾತ್ರವೆಂದು ಅವರೇ ಹೇಳುತ್ತಿದ್ದಾರೆ. ಒಂದು ತಿಂಗಳ ಕಾಲ ಕಣ್ಣು ಮಾಡಿದ ಕೆಲಸವನ್ನು ವ್ಯರ್ಥಗೊಳಿಸಲು ಕಣ್ಣಿನ ಮೇಲಿನ ಕಡಿವಾಣಗಳನ್ನು ಅವರು ಕೈಬಿಡುತ್ತಿದ್ದಾರೆ. ಒಂದು ತಿಂಗಳು ದೃಶ್ಯ ಮಾಧ್ಯಮಕ್ಕೆ ಹಾಕಿದ ರಜೆಯಿಂದ ಮುಂದಿನ ತಿಂಗಳು ಯಾವೆಲ್ಲ ಚಾನಲುಗಳನ್ನು ತೆರೆಯದಿರಬೇಕೆಂಬ ಬಗ್ಗೆ ಯಾವುದೇ ನಿರ್ಧಾರ ಅವರ ಬಳಿಯಿಲ್ಲ. ಒಂದು ತಿಂಗಳ ಕಾಲ ನಾಲಗೆಯನ್ನು ಕಟ್ಟಿಟ್ಟ ಹಗ್ಗವನ್ನು ಸಂಪೂರ್ಣ ಬಿಚ್ಚಿ ಹಾಕುವ ಮೂಲಕ ಆ ನಾಲಗೆಗೆ ಯಾವೆಲ್ಲ ದುರ್ಗುಣಗಳತ್ತೋ ಅವೆಲ್ಲವನ್ನು ಪುನಸೇರ್ಪಡಿಸುವ ಮೂಲಕ ಅದೇ ಖುರ್‌ಆನ್ ಹೇಳಿದ ತಲೆಹಡುಕ ಹೆಣ್ಣಿನ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಒಂದು ತಿಂಗಳ ಕಾಲದ ನಮಾಜಿನ ಜಾಗ್ರತಿ, ಜಮಾಅತ್‌ನ ಕಾಳಜಿ, ಖುರ್‌ಆನ್ ಪಾರಾಯಣದ ರೂಢಿ ಹೀಗೆ ಎಲ್ಲವನ್ನು ಕೈಬಿಡುವ ಮೂಲಕ ಆ ತಿಂಗಳ ಕೆಲಸವನ್ನೇ ಸಮುದಾಯ ಮರೆತು ಬಿಡುತ್ತದೆ. ಬಳಿಕ ಆ ನಾಲಿಗೆ, ಕಣ್ಣು, ಕಿವಿ, ಚಿಂತನೆಗಳಿಗೆ ಯಾವುದೇ ಕಡಿವಾಣಗಳಿಲ್ಲದೆ ಅದು ಬೇಕಾಬಿಟ್ಟಿ ವರ್ತಿಸುತ್ತದೆ. ಬಹುಷ ಇನ್ನು ಸಮುದಾಯ ಆ ಹಗ್ಗವನ್ನು ಪುನಃ ಪೋಣಿಸುವ ಕೆಲಸಕ್ಕೆ ಮುಂದಿನ ರಮಳಾನನ್ನು ಕಾಯುತ್ತಿರಬಹುದು.

ಖುರ್‌ಆನಿನ ಉಪಮೆ ಅದೆಷ್ಟು ಅರ್ಥಪೂರ್ಣ- "ನೀವು ಆ ಮಹಿಳೆಯಂತೆ ಆಗಬೇಡಿರಿ. ಅವಳು ನೂಲನ್ನು ನೂತ ಬಳಿಕ ಅದನ್ನು ಬಿಡಿಸಿ ಛಿದ್ರವಾಗಿಸುತ್ತಾಳೆ."

ಇಂದು ನಾವು ಬಹುಷ ಈ ತಲೆ ಹಿಡುಕ ಹೆಣ್ಣಿಗಿಂತ ಮುಂದುವರಿದಿದ್ದೇವೆಯೋ ಏನೋ? ಹತ್ತಿಯನ್ನು ತಂದು ನೂಲಾಗಿ ಪರಿವರ್ತಿಸುವ ವೇಳೆ ಬಹುಷ ಅದನ್ನು ಪುನಃ ಛಿದ್ರವಾಗಿಸುವ ಇರಾದೆ ಅವಳಿಗಿದ್ದಿರಬೇಕೆಂದಿಲ್ಲ. ಅವಳು ತಲೆ ಹಿಡುಕಿಯಷ್ಟೆ. ನೂಲು ಸಿದ್ಧವಾದ ಬಳಿಕ ಅದನ್ನು ಪೂರ್ವಸ್ಥಿತಿಗೆ ತರಲು ಅವಳ ತಲೆಹಿಡುಕತನವೇ ಕಾರಣ. ಆದರೆ ನಾವು? ಈದ್ ದಿನದ ದಿನಚರಿಯೇ ನಮಗಿಂತಹುದೊಂದು ಸುಭದ್ರ ಹಗ್ಗದ ಸಿದ್ಧತೆಯ ನಿಯ್ಯತ್ತು ಇತ್ತೇ ಎಂಬ ಸಂಶಯಕ್ಕೆ ಬೀಳಿಸುತ್ತದೆ. ತಿರುಗುತ್ತಿರುವ ಚಕ್ರವು ತನ್ನ ತಿರುಗಾಟ ನಿಲ್ಲಿಸಲು ಸ್ವಲ್ಪ ಸಮಯ ಹಿಡಿಯುತ್ತದೆ. ಕ್ಷಣಮಾತ್ರಕ್ಕೆ ಅದು ಸ್ತಭ್ಧವಾಗುವುದಿಲ್ಲ. ಸ್ವಲ್ಪ ಹೊತ್ತು ತಿರುಗುತ್ತಲೇ ಇದ್ದು ನಿಧಾನ ನಿಂತು ಬಿಡುತ್ತದೆ. ಆ ತನಕ ಇದ್ದ ತಿರುಗುವಿಕೆಯ ಪರಿಣಾಮವದು. ಆದರೆ ಒಂದು ತಿಂಗಳ ಕಾಲ ಯಾವ ಸ್ಥಿತಿ ನಮಗಿತ್ತೋ ಆ ಸ್ಥಿತಿಯಿಂದ ನಾವು ಬದಲಾಗಲು ಒಂದು ಕ್ಷಣವನ್ನೂ ತೆಗೆದುಕೊಳ್ಳುವುದಿಲ್ಲವಾದರೆ...? ಪೆರ್ನಾಲ್‌ನ ದಿನವೇ ನಮ್ಮ ನಮಾಜು ಖಳಾ ಆಗುವುದೆಂದರೆ? ಅಂದು ನಡೆಸುವ ಏಕತೆಯ ಭಾಷಣಗಳೇ ಪ್ರಹಸನವಾಗುವುದೆಂದರೆ? ಅದಕ್ಕೆ ಬದ್ಧವಾಗಿರಲು ಯಾರೂ ಸಿದ್ಧನಾಗುವುದಿಲ್ಲವೆಂದರೆ? ಆ ತಲೆ ಹಿಡುಕ ಹೆಣ್ಣು ಮಾಡುವ ಕೆಲಸದ ನಿಯ್ಯತ್ತು ಕೂಡಾ ನಮ್ಮಲ್ಲಿಲ್ಲವೇ? ಹೆಣ್ಣು ತಲೆ ಹಿಡುಕಿ. ನಾವು...?

# ದೇವನೆಡೆಗೆ ತಲುಪುವ ದಾರಿ

ಒಂದು ದಿನ ಮಹಾತ್ಮರಾದ ಸಿರ್ರೀಸಖ್ತೀ (ರ) ರವರು ಬಗ್ದಾದಿನ ಜಾಮಿಅ ಮಸ್ಜಿದ್‌ನಲ್ಲಿ ಪ್ರವಚನ ನೀಡುತ್ತಿದ್ದರು. ಪ್ರವಚನದ ಮಧ್ಯೆ ಓರ್ವ ಹದಿ ಹರೆಯದ ಯುವಕ ಅತ್ಯಾಕರ್ಷಕ ದಿರಿಸನ್ನು ಧರಿಸಿ ತನ್ನ ಮಿತ್ರರೊಂದಿಗೆ ಬಂದು ಆ ಸಭೆಯಲ್ಲಿ ಕುಳಿತುಕೊಂಡ. ನಂತರ ಮಹಾತ್ಮರ ಪ್ರವಚನವನ್ನೇ ತದೇಕ ಚಿತ್ತದಿಂದ ಆಲಿಸತೊಡಗಿದ.

ಮಹಾತ್ಮರು ಪ್ರವಚನದ ಮಧ್ಯೆ "ನನಗೆ ತುಂಬಾ ಆಶ್ಚರ್ಯವೆನಿಸುತ್ತಿದೆ; ದುರ್ಬಲನು ಬಲಾಢ್ಯನಿಗೆ ಅವಿಧೇಯತೆಯನ್ನು ತೋರುತ್ತಿದ್ದಾನಲ್ಲಾ" ಎಂದು ಹೇಳಿದರು. ಇದು ಕೇಳಿ ಆ ಯುವಕನ ಮುಖದ ವರ್ಣ ಬದಲಾಯಿತು.




ಭಾಷಣ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಊರುಗಳಿಗೆ, ಮನೆಗಳಿಗೆ ಮರಳಿದರು. ಮರುದಿನ ಅದೇ ಯುವಕ ಮಹಾತ್ಮರ ಮುಂದೆ ಬಂದು ನಿಂತ. "ನಿನ್ನೆ ತಾವು ದುರ್ಬಲನು ಬಲಾಢ್ಯನಿಗೆ ಅವಿಧೇಯತೆಯನ್ನು ತೋರುತ್ತಿರುವುದು ನನಗೆ ಆಶ್ಚರ್ಯವೆನಿಸುತ್ತಿದೆಯೆಂದು ಹೇಳಿದಿರಲ್ಲಾ, ಏನಿದರ ಅರ್ಥ? ನನಗೆ ಅದರ ಒಳಾರ್ಥ ಮನವರಿಕೆಯಾಗಿಲ್ಲ. ಸ್ವಲ್ಪ ವಿವರಿಸಿ ಕೊಡಿ" ಎಂದು ವಿನಯಾನ್ವಿತನಾಗಿ ಭಿನ್ನವಿಸಿಕೊಂಡ. ಮಹಾತ್ಮರು ಯುವಕನ ಮುಖನೋಡಿ ಕಿರುನಗೆ ಬೀರಿದರು. ನಂತರ "ಅಲ್ಲಾಹನು ಬಲಿಷ್ಠನು; ಬಲಾಢ್ಯನು. ಅವನಿಗಿಂತ ಬಲಾಢ್ಯನಾದವನು ಇನ್ನೊಬ್ಬರಿಲ್ಲ. ಅದೇ ರೀತಿ ಮನುಷ್ಯನು ದುರ್ಬಲನು. ಅವನಷ್ಟು ದುರ್ಬಲನು ಮತ್ತ್ಯಾರೂ ಇಲ್ಲ. ಆದರೂ ಮನುಷ್ಯರಾದ ನಾವು ಅವನಿಗೆ ಅವಿಧೇಯತೆಯನ್ನು ತೋರುತ್ತಿದ್ದೇವಲ್ಲಾ" ಎಂದು ಹೇಳಿದರು. ಇದು ಕೇಳಿ ಆ ಯುವಕ ಅಲ್ಲಿಂದ ಹೊರಟು ಹೋದನು.

ಮರುದಿನ ಆ ಯುವಕ ಸಿರ್ರೀ ಸಖ್ತೀ (ರ) ರವರ ಸನ್ನಿಧಾನಕ್ಕೆ ಮತ್ತೆ ಹಾಜರಾದ. ಅವನ ಮೈ ಮೇಲೆ ಮೊದಲಿನಂತೆ ಅತ್ಯಾಕರ್ಷಕ ವಸ್ತ್ರಗಳಿಲ್ಲ. ಶ್ವೇತವರ್ಣದ ಎರಡು ಬಟ್ಟೆಗಳನ್ನಷ್ಟೇ ಹೊದ್ದುಕೊಂಡಿದ್ದ. ಮಹಾತ್ಮರ ಪ್ರಶೋಭಿತ ವದನವನ್ನು ನೋಡುತ್ತಾ ಆತ ಅವಲತ್ತುಕೊಂಡ "ಮಹಾತ್ಮರೇ, ನನಗೆ ದೇವನೆಡೆಗೆ ತಲುಪುವ ಮಾರ್ಗವನ್ನು ತಿಳಿಸಿಕೊಡಿರಿ."

ಆ ಯುವಕನ ಈ ಪರಿಯ ಮಾತು ಕೇಳಿ ಮಹಾತ್ಮರಿಗೆ ಸಂತೋಷವಾಯಿತು. "ನೀನು ಆರಾಧನೆ ಮಾಡಲು ಉದ್ದೇಶಿಸುವುದಾದರೆ ಹಗಲು ವೇಳೆಯಲ್ಲಿ ಉಪವಾಸ ಆಚರಿಸು; ರಾತ್ರಿಯ ವೇಳೆಯಲ್ಲಿ ಸುನ್ನತ್ ನಮಾಝ್‌ಗಳನ್ನು ನಿರ್ವಹಿಸುವುದರಲ್ಲಿ ತಲ್ಲೀನನಾಗು. ನಿನಗೆ ದೇವನ ಸಂತೃಪ್ತಿ ಲಭ್ಯವಾಗಬೇಕಾದರೆ ಮನದಲ್ಲಿ ದೇವನನ್ನು ಮಾತ್ರ ಸ್ಮರಿಸುತ್ತಾ ಧ್ಯಾನಾಸಕ್ತನಾಗು. ಮನದಲ್ಲಿ ಅವನ ಹೊರತು ಏನೆಲ್ಲಾ ಸಂಗತಿಗಳಿವೆಯೋ ಅವನ್ನೆಲ್ಲಾ ದೂರ ಮಾಡಿಬಿಡು. ಹಾಗಾದರೆ ನೀನು ಅಲ್ಲಾಹನ ತೃಪ್ತಿಯನ್ನು ಪಡೆಯುವೆ. ಅದೇ ರೀತಿ ಇನ್ನು ಮುಂದೆ ನೀನು ವಾಸಿಸಲು ಮಸೀದಿ, ಕಬರ್‌ಸ್ಥಾನ, ಗುಡ್ಡಗಾಡು ಮುಂತಾದ ಏಕಾಂತ ಸ್ಥಳವನ್ನು ಆಯ್ಕೆ ಮಾಡು" ಎಂದರು.

"ಅಲ್ಲಾಹನಾಣೆ! ಅತ್ಯಂತ ಸಂಕೀರ್ಣವೆನಿಸಿರುವ ಈ ಪಥವನ್ನೇ ನಾನು ಆಯ್ಕೆ ಮಾಡಿದ್ದೇನೆ" ಎನ್ನುತ್ತಾ ಮಹಾತ್ಮರ ಆಶೀರ್ವಾದವನ್ನು ಪಡೆದು ಆ ಯುವಕ ಅಲ್ಲಿಂದ ಹೊರಟು ಹೋದನು.

- ನಈಮಿ


ಮರ್ಸೀನ್ ಪಬ್ಲಿಕೇಷನ್ಸ್ ಹಾಗೂ ಅಲ್‌ಮದೀನಾ ಪಬ್ಲಿಕೇಷನ್ಸ್ | ಪ್ರಕಟಿಸಿರುವ
ಸಂಪೂರ್ಣ ಖುರ್‌ಆನ್ ಕನ್ನಡ ವ್ಯಾಖ್ಯಾನ
ಬೆಲೆ ರೂ. 800.00 | ಗಲ್ಫ್ ರಾಷ್ಟ್ರಗಳಿಗೆ ಬೆಲೆ ರೂ. 2500.00
ಸಂಪರ್ಕಿಸಿರಿ ಅಥವಾ M.O.ಕಳುಹಿಸಿರಿ
ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704

# ವುಳೂ ನಿರ್ವಹಿಸುವುದು ಯಾಕೆ?

**ಒಳಗಿನ ಗುಟ್ಟು 35**

ಅಹ್ಮದ್‌ಯಾರ್ ಖಾನ್ ನಈಮಿ
ಕನ್ನಡಕ್ಕೆ: ನಈಮಿ ಮಂಗಳಪೇಟೆ

***ಪ್ರಶ್ನೆ: ನಮಾಝಿಗಾಗಿ ವುಳೂ ನಿರ್ವಹಿಸುವುದು ಯಾಕೆ?***

ಉತ್ತರ : ನಮಾಝ್ ಹೃದಯವನ್ನು ಶುಚೀಕರಿಸುವ ಶ್ರೇಷ್ಠ ಆರಾಧನೆ. ಈ ಕಾರಣದಿಂದ ಮೊದಲಿಗೆ ಬಾಹ್ಯಾಂಗಗಳನ್ನು ಶುಚೀಕರಿಸಿ ಅಂತರ್ಯದ ಶುಚೀಕರಣಕ್ಕೆ ಪ್ರವೇಶಿಸಲಾಗುತ್ತದೆ. ಬಾಹ್ಯ ಶುಚೀಕರಣವು ಅಂತರ್ಯದ ಶುಚೀಕರಣಕ್ಕೆ ಪ್ರೇರಣೆವೊದಗಿಸುತ್ತದೆ. ಈ ಕಾರಣದಿಂದ ನಮಾಝ್ ನಿರ್ವಹಿಸುವುದಕ್ಕಿಂತ ಮುಂಚೆ ವುಳೂ ಮಾಡುತ್ತೇವೆ.

***ಪ್ರಶ್ನೆ: ವುಳೂಲ್ ನಿರ್ವಹಿಸುವಾಗ ಮುಖ ತೊಳೆಯುವುದು, ಕೈ ತೊಳೆಯುವುದು, ತಲೆಸವರುವುದು ಮತ್ತು ಕಾಲು ತೊಳೆಯುವುದು ಕಡ್ಡಾಯ. ಇಸ್ಲಾಮ್ ಈ ನಾಲ್ಕು ಅಂಗಗಳನ್ನೇ ತೊಳೆಯಲು ಯಾಕೆ ಕಡ್ಡಾಯಗೊಳಿಸಿತು?***

ಉತ್ತರ : ಎರಡು ಕಾರಣಗಳಿಗಾಗಿ ; ಒಂದು, ವುಳೂ ನಿರ್ವಹಿಸುವುದರಿಂದ ಅಂಗಗಳಲ್ಲಿ ಅಂಟಿಕೊಡಿರುವ ಪಾಪಗಳು ನೀಗುತ್ತವೆ. ಆದಿಪಿತ ಆದಂ (ಅ)ರವರು ಸ್ವರ್ಗದ ನಿಷೇಧಿತ ಮರದಿಂದ ಹಣ್ಣನ್ನು ಕೊಯ್ದು ತಿನ್ನುವಾಗ ಅವರ ನಾಲ್ಕು ಅಂಗಗಳು ಹೆಚ್ಚು ಕ್ರಿಯಾಶೀಲವಾಗಿತ್ತು. ಮೊದಲಿಗೆ ಅವರಿಗೆ ಹಣ್ಣನ್ನು ಕಿತ್ತು ತಿನ್ನಬೇಕೆಂಬ ಯೋಚನೆ ತಲೆಯಲ್ಲಿ ಹೊಳೆಯಿತು. ಈ ಕಾರಣದಿಂದ ಅವರು ಆ ಮರದ ಬಳಿಗೆ ತಮ್ಮ ಕಾಲುಗಳಿಂದ ಚಲಿಸಿದರು. ನಂತರ ಆ ಹಣ್ಣನ್ನು ಕೈಗಳ ಮೂಲಕ ಕೊಯ್ದರು. ಮತ್ತು ಕಣ್ಣಿನ ಮೂಲಕ ನೋಡುತ್ತಾ, ಬಾಯಿಯ ಮೂಲಕ ತಿಂದರು. ಈ ಕಾರಣದಿಂದ ನಮಾಝಿನಲ್ಲಿ ತಲೆ, ಕೈ, ಕಾಲುಗಳು ಮತ್ತು ಮುಖವನ್ನು ಪಾಪಗಳಿಂದ ಸಂಶುದ್ಧಗೊಳಿಸಲು ವುಳೂ ನಿರ್ವಹಿಸುವಂತೆ ಆಜ್ಞಾಪಿಸಲಾಯಿತು.

ಎರಡನೆಯ ಕಾರಣ : ಇಂದು ನಮ್ಮಿಂದ ನಡೆಯುವ ಹೆಚ್ಚಿನ ಪಾಪಕೃತ್ಯಗಳಲ್ಲಿ ಈ ನಾಲ್ಕು ಅಂಗಗಳ ಪಾತ್ರವೇ ಮುಖ್ಯವಾಗಿರುತ್ತದೆ. ನಮ್ಮ ಬುದ್ಧಿ, ಕೈ ಕಾಲುಗಳು ಕಣ್ಣು, ಕಿವಿ, ಮೂಗು ಮುಂತಾದವು ಪಾಪಕೃತ್ಯಗಳನ್ನೆಸಗುವಾಗ ಹೆಚ್ಚಿನ ಪಾತ್ರವನ್ನು ವಹಿಸುತ್ತದೆ.

ಹೃದಯ ಮತ್ತು ಬುದ್ಧಿಯ ಸಂಬಂಧ ರಾಜ ಮತ್ತು ಮಂತ್ರಿಯಂತಿದೆ. ಮೆದುಳಿನಲ್ಲಿ ಕೆಟ್ಟ ಯೋಚನೆಗಳು ಉದ್ಭವಿಸಿದಾಗ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ. ಮನಸ್ಸು ಕೂಡಾ ಬುದ್ಧಿಯಂತೆ ಕೆಡುತ್ತದೆ. ಆದರೆ ವುಳೂ ನಿರ್ವಹಿಸುವಾಗ ಹೃದಯದ ಭಾಗವನ್ನು ಸವರದೆ ತಲೆಯನ್ನು ಸವರುವ ಉದ್ದೇಶವೆಂದರೆ, ತಲೆಸವರುವ ಮೂಲಕ ಬುದ್ಧಿಯ ಪಾಪ ನೀಗುತ್ತದೆ. ಬುದ್ಧಿಯು ಪಾಪಗಳಿಂದ ಸಂಶುದ್ಧತೆಯನ್ನು ಪಡೆದಾಗ ಹೃದಯವು ಕೂಡಾ ಶುದ್ಧಗೊಳ್ಳುತ್ತದೆ.ಈ ಕಾರಣದಿಂದ ವುಳೂವಿನಲ್ಲಿ ತಲೆಯನ್ನು ಸವರಲಾಗುತ್ತದೆ.

# ಫಿದ್‌ಯಾ–ಒಂದು ಕರ್ಮನೋಟ

←7ನೇ ಪುಟದಿಂದ

ಊರಿನ ವ್ಯಾಪ್ತಿಯ ಹೊರಗೆ ಎಲ್ಲಿ ಕೊಟ್ಟರೂ ಸಿಂಧು. ಪಡೆಯುವರು ಅರ್ಹರಾಗಿರಬೇಕಷ್ಟೆ.

## ಫಿದ್‌ಯಾ ಯಾವಾಗ ಕೊಡಬೇಕು?

ಫಿದ್‌ಯಾ ಕಡ್ಡಾಯವಾದ ತಕ್ಷಣ ಅದನ್ನು ಕೊಡಬೇಕೆಂಬ ಹೊಣೆ ವ್ಯಕ್ತಿಗೆ ಅನ್ವಯವಾಗುತ್ತದೆ. ಕಡ್ಡಾಯವಾದ ತಕ್ಷಣ ಕೊಡುವುದೇ ಉತ್ತಮ. ರಮಳಾನಿನಲ್ಲಿ ಕೊಡಬೇಕೆಂಬ ನಿಬಂಧನೆಯಿಲ್ಲ. ಒಂದು ವರ್ಷ ಮುಂದೂಡಿದ ಕಾರಣ ಖಳಾ ಸಂದಾಯ ಮತ್ತು ಫಿದ್‌ಯಾ ಎರಡೂ ಇದ್ದರೆ ಉಪವಾಸ ಖಳಾ ಸಂದಾಯ ಮಾಡಿದಂದೇ ಫಿದ್‌ಯಾ ಕೊಡಬೇಕೆಂದಿಲ್ಲ. ಮೊದಲು ಅಥವಾ ನಂತರವೂ ಕೊಡಬಹುದು. ಉಪವಾಸ ಖಳಾ ಸಂದಾಯ ಕಾರಣವಿಲ್ಲದೆ ಮುಂದಿನ ರಮಳಾನ್ ತನಕ ಮುಂದೂಡಿದರೆ ಮುಂದೂಡಿದ್ದಕ್ಕಾಗಿ ವರ್ಷಕ್ಕೊಂದು ಮುದ್ದ್‌ನಂತೆ ಹೆಚ್ಚಾಗುತ್ತದೆ. ಖಳಾ ಸಂದಾಯ ಮಾಡಿ ಫಿದ್‌ಯಾ ಮುಂದೂಡಿದರೆ ಮುಂದೂಡಿದಕ್ಕಾಗಿ ಹೆಚ್ಚು ಫಿದ್‌ಯಾ ಕೊಡಬೇಕೆಂದಿಲ್ಲ.

## ಉಪವಾಸವನ್ನು ಸಂಭೋಗ ಮೂಲಕ ಅಸಿಂಧುಗೊಳಿಸಿದವನಿಗೆ ದಂಡ

ರಮಳಾನಿನಲ್ಲಿ ಉಪವಾಸವಿರುವವನು ಮನಪೂರ್ವಕ ಉಪವಾಸ ಉಪೇಕ್ಷಿಸುವುದು ಪಾಪ. ಉಪವಾಸವಿರುವಾಗ ಪತ್ನಿ ಸಂಪರ್ಕ (ಸಂಭೋಗ) ನಡೆಸುವುದು ಮಹಾಪಾಪ. ಇದಕ್ಕೆ ತೆರಬೇಕಾದ ದಂಡ ಸಣ್ಣದೇನಲ್ಲ.

ಇವನು ಒಬ್ಬ ಗುಲಾಮನನ್ನು ಮುಕ್ತಿಗೊಳಿಸಬೇಕೆಂಬ ಆಜ್ಞೆಯಿದೆ. ಇಂದು ಗುಲಾಮ ಲಭ್ಯವಿಲ್ಲದ ಕಾರಣ ಇವನು ಎರಡನೇ ಹಂತದ ದಂಡ ನೀಡಬೇಕು. ಅಂದರೆ ಎರಡು ತಿಂಗಳು ನಿರಂತರ ಉಪವಾಸ. ನಡುವೆ ಒಂದು ದಿನವೂ ಉಪವಾಸ ತೊರೆಯಕೂಡದು. ನಡುವೆ ಉಪವಾಸ ತೊರೆದರೆ ಪುನ ಎರಡು ತಿಂಗಳ ಉಪವಾಸ ಪುನರಾರಂಭಿಸಬೇಕು. ಅನಾರೋಗ್ಯ ಕಾರಣ ಒಬ್ಬನಿಗೆ ಎರಡು ತಿಂಗಳ ಉಪವಾಸ ಅಸಾಧ್ಯವಾದರೆ ಅವನು ಪ್ರಾಯಶ್ಚಿತದ ಮೂರನೇ ಹಂತಕ್ಕಿಳಿಯಬಹುದು. ಅರುವತ್ತು ಬಡವರಿಗೆ ಒಂದೊಂದು ಮುದ್ದ್‌ನಂತೆ ಆಹಾರ ಧಾನ್ಯ ನೀಡುವುದು. ಉಪವಾಸದ ತಾಕತ್ತು ಇರುವವನಿಗೆ ಇದು ಅನ್ವಯವಲ್ಲ. ಅವರು ಉಪವಾಸವನ್ನೇ ಹಿಡಿಯಬೇಕು. ಈ ದಂಡ ತೆರಬೇಕಾದವನು ಪುರುಷ ಮಾತ್ರ. ಮಹಿಳೆಗೆ ಸಹಕರಿಸಿದ ಪಾಪವಿದೆ. ಉಪವಾಸ ಖಳಾ ಸಂದಾಯ ಮಾಡಬೇಕು. ಪ್ರಾಯಶ್ಚಿತವಿಲ್ಲ.

ಖಳಾ ಸಂದಾಯವನ್ನು ಕಾರಣವಿಲ್ಲದೆ ಮುಂದಿನ ವರ್ಷಕ್ಕೆ ಬಾಕಿ ಇಡುವುದು, ಫಿದ್‌ಯಾ ನೀಡದಿರುವುದು, ಮೃತರ ಬಾಕಿ ಉಪವಾಸದ ಫಿದ್‌ಯಾ ಸಂದಾಯ ಮಾಡದಿರುವುದು ಮುಂತಾದವುಗಳ ಬಗ್ಗೆ ಎಚ್ಚರಿಕೆ ಅಗತ್ಯ. ಫಿದ್‌ಯಾ ರಮಳಾನಿನ ಉಪವಾಸಕ್ಕೆ ನೀಡುವ ಗೌರವ. ಸತ್ಯವಿಶ್ವಾಸಿಗಳು ಅದನ್ನು ಅವಗಣಿಸುವಂತಿಲ್ಲ. ■




*Specialist in :*
***Burkha Stitching as per your choice***
Since 1999




Shop # E - 9
**TOKYO MARKET**
G.H.S.Road, Hampankatta,
MANGALORE-1.
Ph : 0824-2447314

Shop # E-9
**KUNIL CENTRE**
G.H.S.Road, Hampankatta, Mangalore-1.
Ph : 0824-4257315

# FiF 15 (A), 5th Floor
**CITY CENTRE MALL**
Next to spar Hypermarket, K.S.Rao Road, Hampankatta, Mangalore-1.
Ph : 0824-4257316

Mob : 9886571883
Email : burkha.fashion@yahoo.com


## ಹಾರ್ದಿಕ ಅಭಿನಂದನೆಗಳು



ಕ್ರಿಯಾಶೀಲ ಸುನ್ನೀ ಕಾರ್ಯಕರ್ತನಾಗಿ, ರಾಜ್ಯ SSFನ ನಾಯಕನಾಗಿ ದುಡಿಯುತ್ತಿರುವುದರೊಂದಿಗೆ ಇದೀಗ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಪ್ರತಿಷ್ಠಿತ ನಿರ್ದೇಶಕ ಸ್ಥಾನಕ್ಕೆ ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿರುವ ಸಹಕಾರ್ಯಕರ್ತ, ಸನ್ಮಿತ್ರ

**ಅಲ್‌ಹಾಜ್ ಎನ್.ಕೆ.ಎಂ. ಶಾಫೀ ಸಅದಿ**

ಇವರಿಗೆ ಹಾರ್ದಿಕ ಅಭಿನಂದನೆಗಳು. ಸಮಾಜ ಸೇವೆಯ ಸದಾವಕಾಶಗಳು ತಮ್ಮ ಮುಂದೆ ಸದಾ ತೆರೆದಿರಲೆಂದು ಹಾರೈಕೆಗಳೊಂದಿಗೆ,

- ಜೆ.ಎಂ.ಕಾಮಿಲ್ ಸಖಾಫಿ
- ಎಸ್.ಪಿ.ಹಂಝ ಸಖಾಫಿ
- ಸಿದ್ದೀಖ್ ಕೆ.ಎಂ.ಮೋಂಟುಗೋಳಿ

# ಕರ್ನಾಟಕದ ಮುಖ್ಯಮಂತ್ರಿಗಳು

ಪ್ರಜಾಪ್ರಭುತ್ವ ಸರ್ಕಾರದಲ್ಲಿ ಆಡಳಿತ ನಡೆಸುವುದು ಕಾರ್ಯಾಂಗ. ದೇಶದ ಕಾರ್ಯಾಂಗಕ್ಕೆ ಪ್ರಧಾನ ಮಂತ್ರಿ ನಿಜವಾದ ಮುಖ್ಯಸ್ಥರಾದರೆ, ರಾಜ್ಯಕ್ಕೆ ಮುಖ್ಯಮಂತ್ರಿಯೇ ಮುಖ್ಯ. ಕರ್ನಾಟಕದಲ್ಲಿ 64 ವರ್ಷಗಳಲ್ಲಿ 19 ಮಂದಿ ಮುಖ್ಯಮಂತ್ರಿಗಳು ಆಗಿಹೋಗಿದ್ದು, 20ನೆಯವರಾಗಿ ಇತ್ತೀಚೆಗೆಷ್ಟೆ ಡಿ.ವಿ.(ದೇವರಗುಂಡ ವೆಂಕಟಪ್ಪ) ಸದಾನಂದ ಗೌಡ ಅಧಿಕಾರಕ್ಕೇರಿದ್ದಾರೆ.

ಜ್ಞಾನಕಣಜ

ಕರ್ನಾಟಕದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಬಳಿಕ ಪ್ರಥಮ ಚುನಾವಣೆ ನಡೆಯುವ ತನಕ ಅವರು ಅಧಿಕಾರದಲ್ಲಿದ್ದರು. ಚುನಾವಣೆಯ ಬಳಿಕ ಆಯ್ಕೆಯಾದ ಮೊದಲ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ. ಕಡಿದಾಳ್ ಮಂಜಪ್ಪ ಮತ್ತು ಎಸ್.ಆರ್.ಕಂಠಿ 2-3 ತಿಂಗಳ ಮಟ್ಟಿಗೆ ಹಂಗಾಮಿ ಮುಖ್ಯಮಂತ್ರಿಗಳಾಗಿದ್ದರು. ಹೆಚ್ಚು ಕಾಲ ಮುಖ್ಯಮಂತ್ರಿಯಾಗಿದ್ದವರು ದೇವರಾಜ್ ಅರಸು ಮತ್ತು ಎಸ್.ನಿಜಲಿಂಗಪ್ಪ, ಸುಮಾರು 8ವರ್ಷ ಆಡಳಿತ ನಡೆಸಿದ್ದಾರೆ.

ಕರ್ನಾಟಕದ ಮುಖ್ಯಮಂತ್ರಿಗಳ ಪೈಕಿ ಬಿ.ಡಿ. ಜತ್ತಿಯವರು ಮುಂದೆ ಉಪರಾಷ್ಟ್ರ ಪತಿ ಹುದ್ದೆಗೇರಿದ್ದರೆ, ದೇವೇಗೌಡರು ಪ್ರಧಾನಿ ಹುದ್ದೆ ಅಲಂಕರಿಸಿದ್ದಾರೆ. ಒಂದೇ ಕುಟುಂಬದಿಂದ ಮುಖ್ಯಮಂತ್ರಿಯಾದವರೆಂದರೆ ದೇವೇಗೌಡ ಮತ್ತು ಪುತ್ರ ಕುಮಾರಸ್ವಾಮಿ. ಮಾಜಿ ಮುಖ್ಯಮಂತ್ರಿಗಳಲ್ಲಿ 7 ಮಂದಿ ಇಂದೂ ಸಕ್ರಿಯ ರಾಜಕೀಯದಲ್ಲಿದ್ದು, ಇಬ್ಬರು ಕೇಂದ್ರ ಮಂತ್ರಿಗಳಾಗಿದ್ದಾರೆ. ಉಳಿದವರು ದಿವಂಗತರಾಗಿದ್ದಾರೆ.

| ಮುಖ್ಯಮಂತ್ರಿಗಳಾದವರು | ಅವಧಿ |
|---|---|
| 1. ಕೆ.ಸಿ.ರೆಡ್ಡಿ | 1947-52 |
| 2. ಕೆಂಗಲ್ ಹನುಮಂತಯ್ಯ | 1952-56 |
| 3. ಕಡಿದಾಳ್ ಮಂಜಪ್ಪ | 1956-2ತಿಂಗಳು |
| 4. ಎಸ್.ನಿಜಲಿಂಗಪ್ಪ | 56-58,62-68 |
| 5. ಬಿ.ಡಿ.ಜತ್ತಿ | 1958-62 |
| 6. ಎಸ್.ಆರ್.ಕಂಠಿ | 62-3ತಿಂಗಳು |
| 7. ವೀರೇಂದ್ರ ಪಾಟೀಲ್ | 68-71,89-90 |
| 8. ದೇವರಾಜ ಅರಸ್ | 1971-79 |
| 9. ಆರ್.ಗುಂಡೂರಾವ್ | 1980-83 |
| 10. ರಾಮಕೃಷ್ಣ ಹೆಗಡೆ | 1983-88 |
| 11. ಎಸ್.ಆರ್.ಬೊಮ್ಮಾಯಿ | 1988-89 |
| 12. ಎಸ್.ಬಂಗಾರಪ್ಪ | 1990-92 |
| 13. ಎಂ.ವೀರಪ್ಪ ಮೊಯ್ಲಿ | 1992-94 |
| 14. ಎಚ್.ಡಿ.ದೇವೇಗೌಡ | 1994-96 |
| 15. ಜೆ.ಎಚ್.ಪಟೇಲ್ | 1996-99 |
| 16. ಎಸ್.ಎಂ.ಕೃಷ್ಣ | 1999-2004 |
| 17. ಧರಂ ಸಿಂಗ್ | 2004-06 |
| 18. ಎಚ್.ಡಿ.ಕುಮಾರಸ್ವಾಮಿ | 2006-07 |
| 19. ಬಿ.ಎಸ್.ಯಡಿಯೂರಪ್ಪ | 2007-10 |

ಒಂದೇ ಪ್ರಶ್ನೆ 248

**2 ರಾಜ್ಯಗಳ ರಾಜಧಾನಿ ಚಂಡೀಗಢ ನಗರವನ್ನು ಕಟ್ಟಿದ ಕನ್ನಡಿಗ ಇಂಜಿನಿಯರ್ ಯಾರು?**

ಉತ್ತರಕ್ಕೆ ಕೊನೇದಿನ 9.9.11

**ಒಂದೇ ಪ್ರಶ್ನೆ-246ರ ಸರಿಯುತ್ತರ**

ಡಿ.ವಿ.ಸದಾನಂದ ಗೌಡರು ಕರ್ನಾಟಕದ ಮುಖ್ಯಮಂತ್ರಿಯಾಗುತ್ತಿರುವ ಎಷ್ಟನೇ ವ್ಯಕ್ತಿ?

**20ನೇ ವ್ಯಕ್ತಿ**

ಪ್ರಮಾಣ ವಚನ ಸ್ವೀಕರಿಸಿದ ಕ್ರಮದಲ್ಲಿ ಇವರು 26ನೇ ಮುಖ್ಯಮಂತ್ರಿಯಾದರೂ ವ್ಯಕ್ತಿಯಾಗಿ 20ನೆಯವರು. ಕೆಲವು ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವುದರಿಂದ ಈ ವ್ಯತ್ಯಾಸ ಉಂಟಾಗಿದೆ. ಹೆಚ್ಚಿನ ಮಾಹಿತಿಗಾಗಿ 'ಜ್ಞಾನ ಕಣಜ' ಗಮನಿಸಿ.

ಸರಿಯುತ್ತರಿಸಿದವರು : ತಸ್ಲಿಯಾ ಮಲಬಾರ್, ಒಕ್ಕೆತ್ತೂರು

# 3 'ಮಿಸ್ರೀ' ಆದ ನಫೀಸಾ (رضي الله عنها)




ಸುಹಾಪಿತ

ಅಲ್ಲಾಹನ ಸಂತೃಪ್ತಿಗಾಗಿ ಬದುಕನ್ನು ಅರ್ಪಿಸಿದ ನಫೀಸಾ (رضي الله عنها) ಆರಾಧನೆಗಳಲ್ಲೇ ತಲ್ಲೀನರಾದರು. ಜೀವ ಉಳಿಸುವ ಅಗತ್ಯಕ್ಕಾಗಿ ಮಾತ್ರ ಆಹಾರ ಸೇವಿಸುತ್ತಿದ್ದರು. ಮೂರು ದಿನಕ್ಕೊಮ್ಮೆ ಮಾತ್ರ ಆಹಾರ ಸೇವಿಸುತ್ತಿದ್ದರು ಎನ್ನುತ್ತಾರೆ ನಲ್ವತ್ತು ವರ್ಷ ಕಾಲ ಅವರ ಸೇವೆ ಸಲ್ಲಿಸಿದ್ದ ಸಹೋದರ ಪುತ್ರಿ ಝೈನಬ್ ಬಿನ್ತ್ ಯಹ್ಯಾ. ನಮಾಝ್ ಮಾಡುವ ವೇಳೆ ಅವರ ಎದುರಿನಲ್ಲೊಂದು ಚೀಲ ಇರುತ್ತಿತ್ತು. ಅವರಿಗೆ ಬೇಕಾದ ಆಹಾರ ಅದರಲ್ಲಿರುತ್ತಿತ್ತು. ಎಲ್ಲಿಂದ ಅದು ಬರುತ್ತಿತ್ತೆಂದು ಗೊತ್ತಿಲ್ಲ. ಒಮ್ಮೆ ಈ ಬಗ್ಗೆ ಕೇಳಿದಾಗ, 'ಯಾರು ಅಲ್ಲಾಹನ ಅನುಸರಣೆಯಲ್ಲಿ ಸೇರುತ್ತಾರೋ, ಅವರ ಅಗತ್ಯಗಳನ್ನು ಅಲ್ಲಾಹು ಪೂರೈಸುವನು' ಎಂಬುದಾಗಿ ನಫೀಸಾ (رضي الله عنها) ಹೇಳಿದ್ದರು.

ಆರಾಧನೆಗಳ ಪೈಕಿ ಯಾವೊಂದೂ ಕೈ ತಪ್ಪದಂತೆ ನೋಡಿಕೊಳ್ಳುತ್ತಿದ್ದರು. ಧಾರಾಳ ಖುರ್‌ಆನ್ ಪಠಿಸುತ್ತಿದ್ದರು. ಅದು ಕೂಡಾ ಅರ್ಥವರಿತು, ಬಹಳ ಭಯಭಕ್ತಿಯಿಂದ. ಓದುತ್ತಾ ಓದುತ್ತಾ ಕಣ್ಣು ತುಂಬಿ ಬಂದು ಅಳುತ್ತಿದ್ದರು. ಖುರ್‌ಆನ್ ಪಠಣ ಹೃದಯ ಶುದ್ಧಿಗಿರುವ ಬಹುಮುಖ್ಯ ಸಾಧನ ತಾನೆ?

ನಫೀಸಾ (رضي الله عنها) ಯಥೇಚ್ಛ ಹಜ್ ಮಾಡಿದ್ದರು. ಸುಮಾರು ಮೂವತ್ತು ಸಲ! ಹೆಚ್ಚಿನ ಬಾರಿ ಕಾಲ್ನಡಿಗೆಯಾಗಿಯೆ. ಪತಿ ಇಸ್ಹಾಖುಲ್ ಮುಅ್ತಮಿರ್ ಜತೆಗಿರುತ್ತಿದ್ದರು. ಕಅಬಾ ಶರೀಫ್‌ನ ಸನಿಹದಲ್ಲಿ ನಿಂತು ನಿರಂತರ ದುಆ ಮಾಡುತ್ತಿದ್ದರು. ಒಮ್ಮೆ ಹೀಗೆಂದು ದುಆ ಮಾಡಿದ್ದರು; ಅಲ್ಲಾಹನೇ, "ಖಲೀಲುಲ್ಲಾಹಿ ಇಬ್‌ರಾಹೀಂ ನಬಿ (عليه السلام)ರವರ ಮಖ್‌ಬರ ಝಿಯಾರತ್ ಮಾಡಲು ನನಗೆ ಅವಕಾಶ ನೀಡು." ಮಹಾತ್ಮರ ಮಖ್‌ಬರಗಳನ್ನು ಝಿಯಾರತ್ ಮಾಡಲು ಬಯಸುವುದು ಸಜ್ಜನರ ಲಕ್ಷಣ. ಅಲ್ಲಾಹನ ಇಷ್ಟದಾಸರನ್ನು ಪ್ರೀತಿಸುವುದು ಅಲ್ಲಾಹನ ಪ್ರೀತಿಗಳಿಸುವುದಕ್ಕಿರುವ ದಾರಿಗಳಲ್ಲೊಂದು. ಹೀಗಾಗಿ ನಫೀಸಾ (رضي الله عنها) ಇಬ್‌ರಾಹೀಂ (عليه السلام)ರವರ ದರ್ಗಾ ಝಿಯಾರತ್ ಆಶಿಸಿದ್ದರು. ಅವರ ಪ್ರಾರ್ಥನೆಯನ್ನು ಅಲ್ಲಾಹು ಈಡೇರಿಸಿಯೂ ಕೊಟ್ಟ. ನಫೀಸಾ (رضي الله عنها) ಪತಿ ಇಸ್ಹಾಖ್ ಜತೆ ಕೊನೆಯ ಹಜ್ ನಿರ್ವಹಿಸಿದ ಬಳಿಕ ಫೆಲಸ್ತೀನ್‌ಗೆ ಹೊರಟರು. ಅನುಪಮ ತ್ಯಾಗಳಿಗೆ, ಅಲ್ಲಾಹನ ಅಗ್ನಿ ಪರೀಕ್ಷೆಗಳಿಗೆಗುರಿಯಾಗಿ ಎಲ್ಲದರಲ್ಲೂ ಯಶಸ್ಸು ಸಾಧಿಸಿ ಅಲ್ಲಾಹನ ಪರಮಾಪ್ತ - ಖಲೀಲುಲ್ಲಾಹ್ ಆಗಿ ಮಾರ್ಪಟ್ಟ ಇಬ್‌ರಾಹೀಂ (عليه السلام)ರವರ ಖಬ್‌ರ್ ಝಿಯಾರತ್ ನಡೆಸಿದರು. ಹೃದಯ ಬಿಚ್ಚಿದ್ದು ಪ್ರಾರ್ಥನೆ ನಡೆಸಿದರು.

ಅಲ್ಲಿಂದ ಪ್ರಮಾಣ ಮುಂದುವರಿಸಿದ್ದು ಮಿಸ್ರ್‌ಗೆ. ಮಿಸ್‌ರ್, ಅಂದರೆ ಈಗಿನ ಈಜಿಪ್ತ್. ನಫೀಸಾ (رضي الله عنها)ರವರ ಪತಿಯ ಊರು. ಹುಟ್ಟಿ ಬೆಳೆದ, ಅರ್ಧ ಶತಮಾನಗಳ ತನಕ ತಂಗಿದ್ದ ಊರು ಮದೀನಾವನ್ನು ಬಿಟ್ಟು ಈಜಿಪ್ತ್‌ಗೆ ಪ್ರಯಾಣ ಬೆಳೆಸಿದ್ದು ಹಿಜ್‌ರಾ 193 ರಲ್ಲಿ. ಅಂದರೆ ಆಗ ಪ್ರಾಯ ನಲ್ವತ್ತೆಂಟು.

ನಫೀಸಾ (رضي الله عنها)ರವರ ಬಗ್ಗೆ ಈಜಿಪ್ತ್‌ನ ಜನತೆ ಮೊದಲೇ ಕೇಳಿ ತಿಳಿದಿದ್ದರಿಂದ ಅವರ ಆಗಮನ ಅಲ್ಲಿನ ಜನರಿಗೆ ಅತ್ಯಂತ ಆನಂದದ ಸಂಗತಿಯಾಗಿತ್ತು. ಸಾಧ್ವಿಯನ್ನು ಸ್ವಾಗತಿಸಲು ಭಾರೀ ಸಂಖ್ಯೆಯಲ್ಲಿ ಅಲ್ಲಿನ ಜನ ಜಮಾಯಿಸಿದ್ದರು. ನಿಜ, ನಫೀಸಾ (رضي الله عنها) ಪ್ರಚಾರ ಬಯಸಿದವರಲ್ಲ. ತನ್ನನ್ನು ಯಾರೂ ತಿಳಿಯುವುದು ಬೇಡ, ಅಲ್ಲಾಹು ಅರಿತರೆ ಸಾಕೆಂದು ಬಗೆದು ಬದುಕಿದವರು. ಆದರೆ ಸೂರ್ಯ ಎಲ್ಲಿದ್ದರೂ ಬೆಳಕು ತೋರದಿರುತ್ತಾನೆಯೆ? ಶ್ರೀಗಂಧವನ್ನು ಎಲ್ಲಿಟ್ಟರೂ ಪರಿಮಳ ಸೂಸದಿರುತ್ತದೆಯೆ? ನಫೀಸಾ (رضي الله عنها)ರವರ ಕೀರ್ತಿ ಎಲ್ಲೆಡೆ ಹರಡಿಯಾಗಿತ್ತು. ಹಾಗಾಗಿ ಮಿಸ್ರ್‌ಗೆ ಅವರ ಆಗಮನ ದೇಶಾದ್ಯಂತ ದೊಡ್ಡ ಸಂಚಲನ ಮೂಡಿಸಿತ್ತು. ಅಂದಿನಿಂದ ನಫೀಸಾ (رضي الله عنها)ರವರ ಹೆಸರಿನೊಂದಿಗೆ ಮಿಸ್ರ್‌ನ ಹೆಸರು ಕೂಡಾ ತಗುಲಿಬಿಟ್ಟಿತು. 'ನಫೀಸತುಲ್ ಮಿಸ್ರೀ' ಎಂದೇ ಪ್ರಸಿದ್ಧಿಗೆ ಬಂದರು.

ಈಜಿಪ್ಟ್‌ನ ಪ್ರಮುಖ ಉದ್ಯಮಿಯೂ ಉದಾರ ದಾನಿಯೂ ಸದ್ಭಕ್ತರೂ ಆಗಿದ್ದ ಜಮಾಲುದ್ದೀನ್ ಅಬ್ದುಲ್ಲಾ ಎಂಬವರ ಮನೆಯಲ್ಲಾಗಿತ್ತು ಸಾಧ್ವಿನಿಯ ವಾಸ್ತವ್ಯ. ನಾಡಿನೆಲ್ಲೆಡೆಯಿಂದ ಅವರ ಸಂದರ್ಶನಕ್ಕಾಗಿ ಜನ ಜಮಾಲುದ್ದೀನರ ಮನೆಯಲ್ಲಿ ಜಮಾಯಿಸುತ್ತಿದ್ದರು. ■

# ಕಳ್ಳತನ ಮಗಳು ನಡೆಸಿದರೂ...

←4ನೇ ಪುಟದಿಂದ

ಉರ್ವತ್ (رضي الله عنه) ರಿಂದ ವರದಿ. ಆಇಶಾ (رضي الله عنها) ಹೇಳಿದರು; ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗಳಲ್ಲಿ ನಿರಂತರವಾಗಿ ಎರಡು ದಿನ ಒಲೆ ಉರಿಯದ ಸಂದರ್ಭಗಳುಂಟಾಗಿವೆ. ಜೀವ ಉಳಿಸಲು ನೀವೇನು ಸೇವಿಸುತ್ತಿದ್ದಿರಿ? ಎಂದು ಕೇಳಿದಾಗ ಆಇಶಾ (رضي الله عنها) ಹೇಳಿದರು; ಖರ್ಜೂರ ಮತ್ತು ನೀರು! ಈ ಮಧ್ಯೆ ಅನ್ಸಾರೀ ನೆರೆಹೊರೆಯವರು ಕಳುಹಿಸಿ ಕೊಡುತ್ತಿದ್ದ ಹಾಲನ್ನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಕೊಡುತ್ತಿದ್ದರು. (ಬುಖಾರಿ, ಮುಸ್ಲಿಂ)

ಸಈದುಲ್ ಮಖ್‌ಬುರಿಯ್ಯ ವರದಿ: ಒಮ್ಮೆ ಅಬೂಹುರೈರಾ (رضي الله عنه) ಸುಟ್ಟ ಆಡಿನ ಮಾಂಸವನ್ನು ತಿನ್ನುತ್ತಿದ್ದ ಕೆಲವರ ಬಳಿ ಸಾಗುತ್ತಿದ್ದರು. ಆಗ ಅವರು ಅಬೂಹುರೈರಾ (رضي الله عنه) ರನ್ನು ಆಮಂತ್ರಿಸಿದರು. ಅಬೂಹುರೈರಾ ಆಮಂತ್ರಣ ನಿರಾಕರಿಸುತ್ತಾ ಹೇಳಿದರು; "ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಇಹಲೋಕದಿಂದ ಯಾತ್ರೆ ಮುಗಿಸಿದ್ದು ಗೋಧಿಯ ಹೊಟ್ಟಿನ ರೊಟ್ಟಿ ಕೂಡಾ ತಿನ್ನದೆಯಾಗಿತ್ತು." (ಬುಖಾರಿ, ಮುಸ್ಲಿಂ)

ನುಅ್‌ಮಾನ್‌ಬಿನ್ ಬಶೀರ್ (رضي الله عنه) ಹೇಳುತ್ತಾರೆ; ಹೊಟ್ಟೆ ತುಂಬಿಸಲು ಕೆಳ ದರ್ಜೆಯ ಖರ್ಜೂರ ಕೂಡಾ ಇಲ್ಲದ ಸಂದರ್ಭದಲ್ಲಾಗಿತ್ತು ನಾನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಂಡದ್ದು."

ಸಹ್‌ಲ್‌ಬಿನ್ ಸಅದ್ (رضي الله عنه) ಹೇಳುತ್ತಾರೆ; ನುಬುವ್ವತ್‌ನಿಂದ ವಫಾತ್ ಆಗುವವರೆಗೂ ಮೃದುವಾದ ಹಿಟ್ಟನ್ನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ನೋಡಿಯೂ ಇರಲಿಲ್ಲ. "ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಜರಡಿಯಿರಲಿಲ್ಲವೆ?" ಎಂದು ಕೇಳಿದಾಗ ಅವರು ಹೇಳಿದರು;" ಇಲ್ಲ. ಗೋಧಿಯನ್ನು ಹುಡಿ ಮಾಡಿ ಅದಕ್ಕೆ ಊದುವೆವು. ಹಾರುವುದು ಹಾರುತ್ತವೆ. ಉಳಿದುದಕ್ಕೆ ನೀರು ಹಾಕಿ ಕಲಸಿ ರೊಟ್ಟಿ ಮಾಡುತ್ತಿದ್ದೆವು." (ಅಲ್‌ಮವಾಹಿಬ್) ■

## 'ಮರಳಿ ಬಾ ಶಾಲೆಗೆ' ಉದ್ಘಾಟನೆ

ಉಳ್ಳಾಲ: ಸುನ್ನೀ ವಿದ್ಯಾರ್ಥಿ ಸಂಘ ಅಧೀನದಲ್ಲಿ ಇಬ್ರಾಹೀಂ ಬಾದ್‌ಶಾ ಎಜ್ಯುಕೇಶನಲ್ ಫೌಂಡೇಶನ್ ವತಿಯಿಂದ 'ಮರಳಿ ಬಾ ಶಾಲೆಗೆ' ಶೈಕ್ಷಣಿಕ ವರ್ಷದ ಉದ್ಘಾಟನೆ ಹಾಗೂ ಕಳೆದ ವರ್ಷ SSLCಯಲ್ಲಿ ಸದ್ರಿ ಯೋಜನೆಯಿಂದ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವು ನಡೆಯಿತು. ಅಳೇಕಲ ಜುಮಾ ಮಸೀದಿ ಅಧ್ಯಕ್ಷ ಯು.ಎಸ್. ಹಂಝ ಅಧ್ಯಕ್ಷತೆ ವಹಿಸಿದರು. ಮುನೀರ್ ಸಖಾಫಿ, ಡಿಕೆಎಸ್ಸಿ ಕಾರ್ಯಕರ್ತ ಯು.ಡಿ. ಅಬ್ದುಲ್ ಹಮೀದ್ ಮಾತನಾಡಿದರು. ಮಾಜಿ ಪುರಸಭೆ ಅಧ್ಯಕ್ಷ ಯು.ಎ. ಇಸ್ಮಾಈಲ್, ದರ್ಗಾ ಸದಸ್ಯ ಯು.ಎ. ಖಾದಿರ್, ಅಳೇಕಳ ಜಮಾಅತ್ ಸದಸ್ಯರಾದ ಇಬ್ರಾಹೀಂ ಕಕ್ಕೆತೋಟ, ಎನ್.ಇ. ಅಹ್ಮದ್, ಸ್ಥಳೀಯ 'ಅಲ್-ಜಝೀರಾ' ಅಧ್ಯಕ್ಷ ಅಮೀರ್, ಎಸ್.ವಿ.ಎಸ್. ಅಧ್ಯಕ್ಷ ಖುಬೈಬ್ ತಂಙಳ್ ಉಪಸ್ಥಿತರಿದ್ದರು. 'COASTEL MIRROR' ಮಾಸಿಕವನ್ನು ಜನಾಬ್ ಎ.ಎ. ಖಾದರ್‌ರವರು, ಇಬ್ರಾಹೀಂ ಅಳೇಕಲರವರಿಗೆ ನೀಡಿ ಬಿಡುಗಡೆಗೊಳಿಸಿದರು. ಅನ್ಸಾರ್ ಅಳೇಕಲ ಸ್ವಾಗತಿಸಿ, ಎಂ.ಎಸ್. ಸಜ್ಜಾದ್ ಧನ್ಯವಾದವಿತ್ತರು. ಮುಸ್ತಾಖ್ ಕಕ್ಕೆತೋಟ ನಿರೂಪಿಸಿದರು.

## ರಂಝಾನ್ ಕಿಟ್ ವಿತರಣೆ

ಉಳ್ಳಾಲ: ಎಸ್ಸೆಸ್ಸೆಫ್ ಅಳೇಕಲ ಶಾಖೆ ವತಿಯಿಂದ ಬಡ ಕುಟುಂಬಗಳಿಗೆ ಆಹಾರ ಪದಾರ್ಥಗಳ ಕಿಟ್ ವಿತರಿಸಲಾಯಿತು. ಅಳೇಕಲ ಶಾಖೆ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಮುಸ್ಲಿಯಾರ್, ಉಳ್ಳಾಲ ದರ್ಗಾ ಸದಸ್ಯರಾದ ಯು.ಡಿ. ಅಶ್ರಫ್ ಸಂಶುದ್ದೀನ್, ಅಮೀರ್ ಮುಂತಾದವರು ಉಪಸ್ಥಿತರಿದ್ದರು.

## ಮರ್ಕಝ್ ಪ್ರಾಧ್ಯಾಪಕ ಅಬ್ದುಲ್ಲ ಉಸ್ತಾದ್ ವಿಧಿವಶ

ಕಲ್ಲಿಕೋಟೆ: ಮರ್ಕಝ್ ಶರೀಅತ್ ಕಾಲೇಜ್ ಪ್ರಾಧ್ಯಾಪಕರೂ, 'ಸಮಸ್ತ' ಉಲಮಾ ಒಕ್ಕೂಟದ ಸದಸ್ಯರೂ ಆಗಿದ್ದ ಉನ್ನತ ವಿದ್ವಾಂಸ ಅಲನಲ್ಲೂರು ಅಬ್ದುಲ್ಲ ಮುಸ್ಲಿಯಾರ್ ರಮಳಾನ್ 25ರ ಸಂಜೆ ವಿಧಿವಶರಾದರು. 73 ವರ್ಷ ಪ್ರಾಯವಾಗಿದ್ದ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದರು. ಶುಕ್ರವಾರ ಮುಂಜಾನೆ ಅಂತ್ಯಕ್ರಿಯೆ ನಡೆಯಿತು.

ಪಾಲಕ್ಕಾಡ್ ಜಿಲ್ಲೆಯವರಕಾದ ಇವರು, 1963ರಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಬಾಖವೀ ಪದವೀಧರರಾಗಿ ಧಾರ್ಮಿಕ ಸೇವೆಗೆ ಇಳಿದಿದ್ದರು. 1984ರಿಂದ ಮರ್ಕಝ್‌ನ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದರು. ಮುಸ್ಲಿಂ ಲೀಗ್ ರಾಜ್ಯಾಧ್ಯಕ್ಷ ಪೇರೋಡ್ ಅಬ್ದುರ್ರಹ್ಮಾನ್ ಸಖಾಫಿ ಸೇರಿದಂತೆ ಸಾವಿರಾರು ಶಿಷ್ಯಂದಿರನ್ನು ಹೊಂದಿರುವ ಇವರು ಪಾಲಕ್ಕಾಡ್ ಜಿಲ್ಲಾ ಸಂಯುಕ್ತ ಜಮಾಅತ್ ಖಾಝಿಯಾಗಿದ್ದರು.

ಅಬ್ದುಲ್ಲ ಉಸ್ತಾದರ ನಿಧನಕ್ಕೆ ಕರ್ನಾಟಕ ಸಖಾಫೀ ಕೌನ್ಸಿಲ್ ತೀವ್ರ ಸಂತಾಪ ಸೂಚಿಸಿದ್ದು, ಉಸ್ತಾದರ ಹೆಸರಲ್ಲಿ ಮಯ್ಯಿತ್ ನಮಾಝ್ ನಿರ್ವಹಿಸುವಂತೆ ಅಧ್ಯಕ್ಷ ಜಿ.ಎಂ. ಕಾಮಿಲ್ ಸಖಾಫಿ ವಿನಂತಿಸಿದ್ದಾರೆ.

## ಮಯ್ಯಿತ್ ನಮಾಝ್

ಝೈನಬ ಕನ್ನಂಗಾರ್ (100 ವರ್ಷ)
ಬೀಫಾತಿಮ ಗೋಳ್ತಮಜಲು (80 ವರ್ಷ)
ಕೆ.ಎ.ಇಬ್ರಾಹಿಂ ಕಲ್ಪಾದೆ ಬೆಳ್ಮ
ಅಬ್ದುರ್ರಝಾಕ್ ಕೃಷ್ಣಾಪುರ
ಅಬ್ದುಲ್ ರಹ್ಮಾನ್ ಅಂಗಡಿಮುಗರ್ (17 ವರ್ಷ)




## ಬದ್ರ್ ಸ್ಮರಣೆ, ಬುರ್ದಾ

ದಾವಣಗೆರೆ: ಬದ್ರ್ ದಿನದ ಪ್ರಯುಕ್ತ ಮರ್ಕಝ್ ಮದೀನಾ ಮಸ್ಜಿದ್ ಪಿ.ಬಿ.ರೋಡ್‌ನಲ್ಲಿ ಮರ್ಕಝ್ ಮದೀನತುಲ್ ಹುದಾ ಹಾಗೂ ದಾರುಲ್ ಉಲೂಂ ರಹ್ಮಾನಿಯ ಆಶ್ರಯದಲ್ಲಿ ಬದ್‌ರ್ ಮೌಲಿದ್ ಮತ್ತು ಬುರ್ದಾ ಮಜ್ಲಿಸ್ ನಡೆಯಿತು. ಸಯ್ಯಿದ್ ಮುಕ್ತಾರ್ ರಝ್ವಿ ದುಆ ನಡೆಸಿದರು. ಬಿ.ಎ.ಇಬ್ರಾಹೀಂ ಸಖಾಫಿ ನೇತೃತ್ವ ನೀಡಿದರು. ಶಾಹುಲ್ ಹಮೀದ್ ಯೂಸುಫ್ ಅಮ್ಜದಿ, ಹಾಶಿಂ ಸಖಾಫಿ ಭಾಷಣ ಮಾಡಿದರು.

## ಹಾಸನದಲ್ಲಿ ತರ್ಖಿಯತ್ ನೈಟ್

ಸಕಲೇಶಪುರ: ಹಾಸನ ಜಿಲ್ಲಾ ಎಸ್ಸೆಸ್ಸೆಫ್ ವತಿಯಿಂದ ರಮಳಾನ್ 21ನೇ ರಾತ್ರಿ 'ತರ್ಖಿಯತ್ ನೈಟ್' ಆಧ್ಯಾತ್ಮಿಕ ಸಂಗಮವು ಹಾನುಬಾಳು ಜಾಮಿಯಾ ಮಸ್ಜಿದ್‌ನಲ್ಲಿ ನಡೆಯಿತು. ಸಯ್ಯಿದ್ ಸಿದ್ದೀಖ್ ತಂಙಳ್ ಅಲ್‌ಹಾದಿ ಮುರ ನೇತೃತ್ವ ನೀಡಿದರು. ರಾಜ್ಯ ಕಾರ್ಯದರ್ಶಿ ಹಸೈನಾರ್ ಆನೆಮಹಲ್, ರಾಜ್ಯ ಸಮಿತಿ ಸದಸ್ಯ ಸೈದಲವಿ ಸಖಾಫಿ, ಜಿಲ್ಲಾ ಉಪಾಧ್ಯಕ್ಷ ಬಶೀರ್ ಸಅದಿ ಅಲ್‌ಅಫ್‌ಳಲಿ, ಅಬ್ದುಲ್ ಅಝೀಝ್ ಅಮ್ಜದಿ, ಖತೀಬ್ ಯೂಸುಫ್ ಮದನಿ ಮೊದಲಾದವರು ಭಾಗವಹಿಸಿದರು. ಜಿಲ್ಲಾ ಕಾರ್ಯದರ್ಶಿ ಫಾರೂಖ್ ಬಿಕ್ಕೋಡು ಸ್ವಾಗತಿಸಿದರು.

## ಉ.ಕ.: ತರ್ಖಿಯತ್ ನೈಟ್

ಹೊನ್ನಾವರ: ಉತ್ತರ ಕನ್ನಡ ಜಿಲ್ಲಾ ಎಸ್ಸೆಸ್ಸೆಫ್ ವತಿಯಿಂದ ರಮಳಾನ್ 21ನೇ ರಾತ್ರಿ ಆಧ್ಯಾತ್ಮಿಕ ಸಂಗಮವು ಹೊನ್ನಾವರ ಟೊಂಕ ಮದ್ರಸದಲ್ಲಿ ನಡೆಯಿತು. ಖತೀಬ್ ಕೆ.ಪಿ.ಮುಹಮ್ಮದ್ ಮುಸ್ಲಿಯಾರ್ ನೇತೃತ್ವ ನೀಡಿದರು. ಜಿಲ್ಲಾಧ್ಯಕ್ಷ ಸೈದಲವಿ ಸಖಾಫಿ ಗಂಗಾವಳಿ, ಪಿ.ಕೆ.ಎಂ.ಮದನಿ ಕಾಜೂರು, ಹನೀಫ್ ಮುಸ್ಲಿಯಾರ್ ಜಾಲಿ ಉಪದೇಶ ನೀಡಿದರು. ಹಾಜಿ ಭಾಷಾ ಸಾಹಿಬ್ ಹೊನ್ನಾವರ, ಶರೀಫ್ ಸರ್ಪನಕಟ್ಟೆ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯದರ್ಶಿ ಹಾರಿಸ್ ಹೊನ್ನಾವರ ಸ್ವಾಗತಿಸಿದರು.

## ಎಸ್ಸೆಸ್ಸೆಫ್ ತರ್ಖಿಯತ್ ನೈಟ್

ಮಂಗಳೂರು: ಜಿಲ್ಲಾ ಎಸ್ಸೆಸ್ಸೆಫ್ ವತಿಯಿಂದ ರಮಳಾನ್ 21ನೇ ರಾತ್ರಿ ತರ್ಖಿಯತ್ ನೈಟ್ ಕುತ್ತಾರ್ ಸ್ವಲಾತ್‌ನಗರ ಅರ್ಬದಿಯಾ ಶಿಕ್ಷಣಾಲಯದಲ್ಲಿ ನಡೆಯಿತು. ಹಾಜೀ ಸಲೀಂ ಮದನಿ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ ಇಸ್ಹಾಖ್ ಝುಹ್ರಿ ಅಧ್ಯಕ್ಷತೆ ವಹಿಸಿದ್ದರು. ಸಯ್ಯಿದ್ ಸಿಟಿಎಂ ಉಮರ್ ಅಸ್ಸಖಾಫ್ ತಂಙಳ್ ಮನ್‌ಶರ್ ಪ್ರಾರ್ಥನೆ ನಡೆಸಿದರು. ಸಾಮೂಹಿಕ ಇಫ್ತಾರ್ ಕೂಟ, ಇಸ್ತಿಗ್‌ಫಾರ್, ಖತ್ಮುಲ್ ಖುರ್‌ಆನ್, ನಸೀಹತ್ ಮೊದಲಾದ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯಿತು.

ಎಸ್‌ವೈಎಸ್ ರಾಜ್ಯಾಧ್ಯಕ್ಷ ಕೆ.ಪಿ.ಹುಸೈನ್ ಸಅದಿ, ಎಸ್ಸೆಸ್ಸೆಫ್ ಕೆ.ಎಂ. ಅಬೂಬಕರ್ ಸಿದ್ದೀಖ್, ಜಿಲ್ಲಾ ಸಂ.ಕಾರ್ಯದರ್ಶಿ ಹಾಫಿಳ್ ಯಾಖೂಬ್ ಸಅದಿ ತರಗತಿ ನಡೆಸಿದರು. ರಾಜ್ಯ ಕಾರ್ಯದರ್ಶಿ ಎಂಬಿಎಂ ಸ್ವಾದಿಖ್ ಮಾಸ್ಟರ್ ಸಂಘಟನಾ ನಿಧಿ ಸ್ವೀಕರಿಸಿದರು. ರಾಜ್ಯ ಸದಸ್ಯರಾದ ಹಾಫಿಳ್ ಅಬ್ದುಸ್ಸಲಾಂ, ಹಾಜೀ ಅಬ್ದುರ್ರಹ್ಮಾನ್ ಉಪಸ್ಥಿತರಿದ್ದರು. ಇಸ್ಮಾಯೀಲ್ ಮಾಸ್ಟರ್ ಸ್ವಾಗತಿಸಿ ಫಾರೂಖ್ ತಲಪಾಡಿ ಧನ್ಯವಾದವಿತ್ತರು.

## ಹೊಸ ಪುಸ್ತಕಗಳು


ಬೆಲೆ ರೂ.25.00


ಬೆಲೆ ರೂ.25.00



ಬೆಲೆ ರೂ.20.00


ಬೆಲೆ ರೂ.20.00

M.O. ಕಳಿಸಿರಿ

ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph:0824-2467886, Cell: 9480075704

## ರಮಳಾನೋತ್ತರ...

←3ನೇ ಪುಟದಿಂದ

ನಿರ್ವಹಿಸಲು, ರಾತ್ರಿ ವಿತ್‌ರ್ ನಮಾಝ್ ನಿರ್ವಹಿಸಲು ನನ್ನಲ್ಲಿ ಉಪದೇಶಿಸಿದರು. (ಬುಖಾರಿ, ಮುಸ್ಲಿಂ). ಮಧ್ಯಾಹ್ನಕ್ಕೆ ಮುನ್ನ ನಿರ್ವಹಿಸುವ ಎರಡು ರಕ್‌ಅತ್ ಳುಹಾ ನಮಾಝ್, ದೇಹದಲ್ಲಿರುವ ಸಂದುಗಳ ಪ್ರಮಾಣದಲ್ಲಿ ಕೊಡಬೇಕಾದ ಸದಖಕ್ಕೆ ಸಮಾನವಾಗುವುದು ಎಂದೂ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದು, ಇದನ್ನು ರೂಢಿಸುವುದಕ್ಕೆ ಕಷ್ಟವಿಲ್ಲ. ಅಂತೆಯೇ ರಮಳಾನಿನ ರಾತ್ರಿಗಳಲ್ಲಿ ರೂಢಿಸಿದ 3 ರಕ್‌ಅತ್ ವಿತ್ರ್ ಅನ್ನು ವರ್ಷವಿಡೀ ಜಾರಿಯಲ್ಲಿಡುವುದು ಬಹಳ ದೊಡ್ಡ ಭಾಗ್ಯ.

ರಮಳಾನಿನಲ್ಲಿ ಮೂವತ್ತು ದಿನ ಉಪವಾಸವಾಚರಿಸಿದವರಿಗೆ ಉಳಿದ ತಿಂಗಳ ಮೂರು ದಿನ ಉಪವಾಸವಿರುವುದು ಅಸಾಧ್ಯವೆ? ಒಂದು ವ್ರತಕ್ಕೆ ಹತ್ತು ಪುಣ್ಯ. ಮಾಸಕ್ಕೆ ಮೂರು ವ್ರತ ಇಡೀ ತಿಂಗಳ ವ್ರತಕ್ಕೆ ಸಮಾನ. ಅಂದರೆ ತಿಂಗಳಲ್ಲಿ ಮೂರು ವ್ರತಾಚರಿಸುವ ಮೂಲಕ ವರ್ಷವಿಡೀ ಉಪವಾಸವಾಚರಿಸಿದ ಪುಣ್ಯ ಸಂಪಾದಿಸಬಹುದು. ಉಪವಾಸವು ಮನುಷ್ಯನ ಮತ್ತು ನರಕದ ನಡುವೆ ಆಕಾಶ - ಭೂಮಿಗಳಷ್ಟು ದೊಡ್ಡ ಅಂತರವನ್ನು ಸೃಷ್ಟಿಸುವುದೆಂಬ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಭರವಸೆ, ಉಪವಾಸವು ಕೆಡುಕುಗಳಿಂದ ತಡೆಯುವ ಗುರಾಣಿ ಎಂಬ ಅವರ ವಚನ ರತ್ನಗಳು ರಮಳಾನಿನ ಬಳಿಕವೂ ಕೆಲವು ನಿರ್ದಿಷ್ಟ ದಿನಗಳಲ್ಲಿ ಉಪವಾಸವಾಚರಿಸಲು ನಮ್ಮನ್ನು ಪ್ರಚೋದಿಸಬೇಕು.

ರಮಳಾನ್ ಪಶ್ಚಾತ್ತಾಪ ಮತ್ತು ಪ್ರಾರ್ಥನೆಯ ತಿಂಗಳು. ಹಾಗೆಂದು ಅವು ಆ ತಿಂಗಳಿಗಷ್ಟೆ ಸೀಮಿತವಲ್ಲ. ಯಾವುದೇ ತಪ್ಪನ್ನು ಮಾಡಲು ಸಾಧ್ಯವಿಲ್ಲದ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ದಿನಕ್ಕೆ ನೂರು ಬಾರಿ ಅಲ್ಲಾಹನಲ್ಲಿ ಕ್ಷಮೆಯಾಚನೆ ಮಾಡುತ್ತಿದ್ದರೆಂದರೆ, ಪ್ರತಿಕ್ಷಣವೂ ಪಾಪಯುತರಾಗುವ ನಾವು ಅದೆಷ್ಟು ಪಶ್ಚಾತ್ತಾಪ ಮಾಡಬೇಕು! ಪ್ರಾರ್ಥನೆಯಂತೂ ಸತ್ಯ ವಿಶ್ವಾಸಿಯ ಪ್ರಬಲ ಆಯುಧ. ಅವನ ಏನೇನು ಅಗತ್ಯವಿದ್ದರೂ ಅಲ್ಲಾಹನಲ್ಲಿ ಪ್ರಾರ್ಥಿಸಿ ಪಡೆದುಕೊಳ್ಳಬೇಕು. ಪಶ್ಚಾತ್ತಾಪ ಮತ್ತು ಪ್ರಾರ್ಥನೆ ಅಲ್ಲಾಹು ಅತ್ಯಂತ ಇಷ್ಟಪಡುವ ಆರಾಧನೆ ಕೂಡಾ. ಇವುಗಳಲ್ಲಿ ನಾವು ನಿರಂತರ ತೊಡಗಿಕೊಂಡಿರಬೇಕು.

ರಮಳಾನಿನಲ್ಲಿ ಎಲ್ಲರೂ ಉದಾರಿಗಳು. ಕೈಲಾದಷ್ಟು ಕೊಡುವವರೇ ಹೆಚ್ಚು. ಆದರೆ ರಮಳಾನಿನ ನಂತರವೂ ಈ ಗುಣವನ್ನು ಉಳಿಸಿಕೊಳ್ಳಬೇಕು. ದಾನವು ವಿಘ್ನನಿವಾರಕವೆಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ.

ರಮಳಾನಿನಲ್ಲಿ ಯಾವೆಲ್ಲ ಸತ್ಕರ್ಮಗಳಲ್ಲಿ ನಾವು ತೊಡಗಿದ್ದೆವೋ, ಅವೆಲ್ಲವನ್ನೂ ಅಲ್ಪ ಪ್ರಮಾಣದಲ್ಲಾದರೂ ರಮಳಾನೋತ್ತರ ಬದುಕಿನಲ್ಲೂ ರೂಢಿಸಿಕೊಂಡರೆ ಬದುಕು ಪಾವನವಾಗುತ್ತದೆ. ರಮಳಾನಿನ ಫಲ ಎದ್ದು ಕಾಣುತ್ತದೆ. ರೂಢಿಸಿಕೊಂಡವನಿಗೆ ಯಾವುದೂ ಕಷ್ಟವಿಲ್ಲ. ಯಾವುದೇ ಸತ್ಕರ್ಮವನ್ನಾದರೂ ಯಾವಾಗಲೊಮ್ಮೆ ಮಾಡುವುದಕ್ಕಿಂತ ನಿರಂತರವಾಗಿ ರೂಢಿಸಿಕೊಳ್ಳುವುದು ಶ್ರೇಷ್ಠ. "ಆರಾಧನೆಗಳ ಪೈಕಿ ಅಲ್ಲಾಹನಿಗೆ ಇಷ್ಟವಾದುದು ನಿತ್ಯವೂ ರೂಢಿಸಿದ ಆರಾಧನೆ; ಅದು ಕಮ್ಮಿಯಾದರೂ ಸರಿ" ಎಂದಿದ್ದಾರೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್. ಈ ಮೂಲಕ ರಮಳಾನಿನಲ್ಲಿ ಅನುಭವಿಸಿದ ಮಾನಸಿಕ ನೆಮ್ಮದಿ, ಆಧ್ಯಾತ್ಮಿಕತ ಚೈತನ್ಯ, ಜೀವನ ಸಮೃದ್ಧಿಗಳನ್ನು ರಮಳಾನೋತ್ತರ ಜೀವನದಲ್ಲೂ ಅನುಭವಿಸಲು ಸಾಧ್ಯವಾದರೆ ರಮಳಾನಿನಲ್ಲಿ ಬೇಡಿದ ಸ್ವರ್ಗವು ಮರಣೋತ್ತರ ಜೀವನದಲ್ಲಿ ನಮ್ಮ ಪಾಲಾಗುವುದು ಖಂಡಿತಾ. ■

## ತೌಫೀಕ್ ಗ್ರೈಂಡರ್ಸ್

ಕ್ರಾಮ್ಟನ್ ಮೋಟರ್ ಅಳವಡಿಸುವುದರೊಂದಿಗೆ



*ತಯಾರಕರು:*

**ತೌಫೀಕ್ ಇಂಡಸ್ಟ್ರೀಸ್**

ಆಲಡ್ಕ, ಪಾಣೆಮಂಗಳೂರು.

ಫೋನ್: 280019(O), 320819(O), 280219(R)

ಮೊಬೈಲ್: 9945190219



ಹಾಲ್‌ಮಾರ್ಕ್ ಪ್ರಾಮಾಣೀಕೃತ ಚಿನ್ನಾಭರಣ, ಐಜಿಐ ವಜ್ರಾಭರಣಗಳು

ನಿಮ್ಮ ಮನೋಭಿಲಾಷೆಯನ್ನು ಪೂರೈಸುವುದು ಖಚಿತ

● ಮದುವೆ ಖರೀದಿಗೆ ವಿಶೇಷ ರಿಯಾಯಿತಿ ● ಹಳೇ ಚಿನ್ನಕ್ಕೆ ಅತ್ಯುತ್ತಮ ಮೌಲ್ಯ



ಇಂದೇ ಭೇಟಿ ನೀಡಿ.

ಆಕರ್ಷಣ್ ಗೋಲ್ಡ್

ಶುದ್ಧತೆ ಹಾಗೂ ವಿನ್ಯಾಸಗಳ ಸಮ್ಮಿಲನ

ಮಸೀದಿ ರಸ್ತೆ, ಉಡುಪಿ

☎ : 0820-2529316 / 9845125488



RNI No: KARKAN/2009/28984 Regd No.: KA/SK/MNG/ 982/ 2009-11

Licensed to Post without prepayment License No. WPP-SK-12

Posted at : RMS MANGALORE, On 29-8-2011 (Monday)

If Undelivered Please Return : Al-Alnsar, Kuthar, Mangalore-575 017

E-mail : alansar.weekly@yahoo.com

ಚಂದಾ ನಂಬ್ರ :

To, ..............................................................................

..............................................................................

..............................................................................

..............................................................................

..............................................................................


# ಭ್ರಷ್ಟಾಚಾರಕ್ಕೆ ಉಪವಾಸ ಮದ್ದು!?

←1ನೇ ಪುಟದಿಂದ

ತರಲಾಗಿತ್ತು. ಅವನ್ನೀಗ ಸಣ್ಣ ಸಣ್ಣ ಬಾಟಲಿಗಳಿಗೆ ತುಂಬಿ ಜನರಿಗೆ ಹಂಚಬೇಕು. ಈ ಕೆಲಸ ಯಾರು ಮಾಡಬಲ್ಲಿರಿ? ಎಂದು ಕೇಳಿದಾಗ ಅವರ ಪತ್ನಿಯೇ ಸಿದ್ಧರಾಗಿ ಮುಂದೆ ಬಂದಿದ್ದರು. ಆದರೆ ಖಲೀಫಾ ಒಪ್ಪಲಿಲ್ಲ. ಅವರು ನೀಡಿದ ಕಾರಣವೇನೆಂದರೆ; ಪ್ರಿಯೆ! ನೀನು ಬಾಟಲಿಗೆ ತುಂಬುವಾಗ ನಿನ್ನ ಕೈಗೂ ಅತ್ತರು ಮೆತ್ತಿಕೊಳ್ಳುತ್ತದೆ. ಅದನ್ನು ನೀನು ಪ್ರೀತಿಯಿಂದ ನನ್ನ ಮೈಗೆ ಒರೆಸುತ್ತೀಯಾ? ಜನರ ಪಾಲಿನಿಂದ ನಾನು ಅನ್ಯಾಯವಾಗಿ ಅತ್ತರು ಬಳಸಿದಂತಾದೀತು. ಅದಕ್ಕೆ ನಾನು ಅವಕಾಶ ನೀಡುವುದಿಲ್ಲ!

**ಘಟನೆ-2:** ಖಲೀಫಾ ಉಮರ್ رضي الله عنه ಒಮ್ಮೆ ತಮ್ಮ ಮನೆಯ ಹಿತ್ತಿಲಲ್ಲಿ ದಷ್ಟಪುಷ್ಟವಾದ ಒಂದು ಒಂಟೆಯನ್ನು ಕಂಡರು. ಯಾರದೆಂದು ವಿಚಾರಿಸಿದಾಗ ಅವರ ಮಗನದ್ದೆಂದು ತಿಳಿಯಿತು. ಮಗನನ್ನು ಕರೆದು ಕೇಳಿದರು; ನಿನಗೆ ಈ ಒಂಟೆಯನ್ನು ಇಷ್ಟು ದಷ್ಟಪುಷ್ಟವಾಗಿ ಬೆಳೆಸಲು ಹೇಗೆ ಸಾಧ್ಯವಾಯಿತು? ಏನನ್ನು ತಿನ್ನಿಸಿದೆ?

'ನಾನೇನೂ ತಿನ್ನಿಸಿಲ್ಲ. ಸುಮ್ಮನೆ ಮೇಯಲು ಬಿಡುತ್ತೇನೆ. ಖಲೀಫರ ಮಗನ ಒಂಟೆ ತಾನೆ ಎಂದು ಜನರೆಲ್ಲ ಅದನ್ನು ಕರೆದು ಆಹಾರ ತಿನ್ನಿಸುತ್ತಾರೆ. ಹಾಗೇ ಇದು ದಪ್ಪಪುಷ್ಟವಾಗಿ ಬೆಳೆದಿದೆ.'

'ಹೌದು, ಖಲೀಫರ ಮಗನ ಒಂಟೆಯೆಂದು ಜನರೇ ಇದನ್ನು ಪೋಷಿಸಿದ್ದಾರೆ. ಖಲೀಫಾ ದೇಶಕ್ಕೆ ಸಂಬಂಧಿಸಿರುವುದರಿಂದ ಅವರ ಹೆಸರಲ್ಲಿ ಕೊಬ್ಬಿದ ಒಂಟೆ ಕೂಡಾ ದೇಶಕ್ಕೇ ಸೇರಬೇಕಾದುದು ನ್ಯಾಯ. ಆದ್ದರಿಂದ ನೀನು ಇದನ್ನು ಮಾರಬೇಕು. ನೀನು ಕೊಳ್ಳುವಾಗ ಎಷ್ಟು ಹಣ ಕೊಟ್ಟಿದ್ದಿಯೋ, ಅಷ್ಟನ್ನು ತೆಗೆದು ಉಳಿದುದನ್ನು ಸರ್ಕಾರದ ಖಜಾನೆಗೆ ಪಾವತಿಸಬೇಕು' ಖಲೀಫಾ ಆದೇಶ ನೀಡಿದರು!

**ಘಟನೆ-3:** ಸಾರ್ವಜನಿಕ ವಸ್ತ್ರ ವಿತರಣೆ ನಡೆದಿತ್ತು. ಬಳಿಕ ನಡೆದ ಸಭೆಯೊಂದರಲ್ಲಿ ಖಲೀಫಾ ಭಾಷಣಕ್ಕೆ ಎದ್ದು ನಿಂತಾಗ ಸಭೆಯಲ್ಲೊಬ್ಬರ ಪ್ರತಿಭಟನೆ. 'ನೀವು ತೊಟ್ಟಿರುವ ವಸ್ತ್ರ ಬಹಳ ದೊಡ್ಡದಿದೆ. ಬಹುಷಃ ಜನರಿಗೆ ವಿತರಿಸಿದ್ದಕ್ಕಿಂತ ಹೆಚ್ಚಿನ ಪಾಲನ್ನು ನೀವು ಪಡೆದಿರಬೇಕು. ಹಾಗಿದ್ದರೆ ನಿಮ್ಮ ಭಾಷಣವನ್ನು ನಾವು ಆಲಿಸುವುದಿಲ್ಲ, ನಿಮ್ಮನ್ನು ಅನುಸರಿಸುವುದಿಲ್ಲ'.

ಇದಕ್ಕೆ ಉತ್ತರ ಕೊಡಲು ಖಲೀಫಾ ತಮ್ಮ ಮಗನನ್ನು ಕರೆದರು. 'ಎಲ್ಲರಿಗೂ ವಸ್ತ್ರ ವಿತರಿಸಿದ ಬಳಿಕ ನನಗೂ ತಂದೆಗೂ ಉಳಿದದ್ದು ಎರಡು ಸಣ್ಣ ತುಂಡು ಬಟ್ಟೆಗಳು. ಅದರಿಂದ ಇಬ್ಬರಿಗೂ ಎರಡು ಅಂಗಿ ಹೊಲಿಸಲು ಸಾಧ್ಯವಿರಲಿಲ್ಲ. ಅದಕ್ಕೆ ನನ್ನ ಪಾಲನ್ನು ಕೂಡಾ ತಂದೆಗೆ ನೀಡಿದೆ. ಇಬ್ಬರ ಬಟ್ಟೆ ಸೇರಿದ್ದರಿಂದ ಅವರ ವಸ್ತ್ರ ಸ್ವಲ್ಪ ದೊಡ್ಡದಾಗಿದೆ' - ಮಗ ಸ್ಪಷ್ಟೀಕರಣ ನೀಡಿದಾಗ ಸಭೆ ಶಾಂತವಾಯಿತು.

ಇಲ್ಲಿ ದೇಶದ ಸಂಪತ್ತಿನ ಮೊದಲ ಹಕ್ಕು ದಾರರು ಜನರಾಗಿದ್ದರು, ಆಡಳಿತಗಾರರಲ್ಲ. ತಮ್ಮನ್ನು ಪ್ರಶ್ನಿಸಲು ಪ್ರಜೆಗಳಿಗೆ ಮುಕ್ತ ಅವಕಾಶವಿತ್ತು. ತಮ್ಮನ್ನು ಪ್ರಶ್ನಿಸಿದರೆಂಬ ಕಾರಣಕ್ಕೆ ರಾಜದ್ರೋಹದ ಆರೋಪದಲ್ಲೋ, ನಕ್ಸಲಿಸಂನ ನೆಪದಲ್ಲೋ ಜೈಲಿಗೆ ಹಾಕಲಿಲ್ಲ ಎಂಬುದನ್ನು ಗಮನಿಸಬಹುದು.

ಉಮರುಲ್ ಫಾರೂಖ್ رضي الله عنه ರವರನ್ನು ಇಲ್ಲಿ ಪ್ರಾತಿನಿಧಿಕವಾಗಿ ಮಾತ್ರ ಬಳಸಲಾಗಿದೆ. ಇಸ್ಲಾಮೀ ಆಡಳಿತ ನಡೆಸಿದ ಇತರ ಖಲೀಫರುಗಳ ಸ್ಥಿತಿಯೂ ತಥ್ಯೈವ. ಇಂತಹುದೊಂದು ಭ್ರಷ್ಟಾಚಾರ ಮುಕ್ತ ಆಡಳಿತ ನೀಡಲು ಖಲೀಫರುಗಳಿಗೆ ಸಾಧ್ಯವಾಗಿದ್ದು, ಅವರು ದೇವಭಕ್ತರಾಗಿದ್ದರಿಂದ ಮಾತ್ರ. ಅವರನ್ನು ವೀಕ್ಷಿಸಲು ಲೋಕಾಯುಕ್ತರೋ ಸಿಬಿಐಗಳೋ ಯಾವುದೂ ಇರಲಿಲ್ಲ. ಆದರೆ, ತನ್ನಲ್ಲವನ್ನೂ ಅಲ್ಲಾಹು ವೀಕ್ಷಿಸುತ್ತಿದ್ದಾನೆಂಬ ಪ್ರಜ್ಞೆ ಅವರಲ್ಲಿ ಸದಾ ಜಾಗೃತವಾಗಿತ್ತು. ಇದು ಮಠಮಂದಿರಗಳಿಗೆ ಸುತ್ತಾಡುವುದರಿಂದಲೋ, ಭರ್ಜರಿ ಕಾಣಿಕೆಗಳನ್ನು ನೀಡುವುದರಿಂದಲೋ ಬರುವುದಿಲ್ಲ. ಬದಲು ಹೃದಯದ ಅಂತರಾಳದಲ್ಲಿ ಭದ್ರವಾಗಿ ನೆಲೆಯೂರಿರುವ ನಂಬಿಕೆಯ ಪರಿಣಾಮ.

ನ್ಯಾಯಯುತವಾಗಿ ಸರ್ಕಾರ ನಡೆಸುವ ಆಡಳಿತಗಾರನಿಗೆ ಪರಲೋಕದಲ್ಲಿ ಪ್ರತ್ಯೇಕ ರಕ್ಷಣೆಯಿದೆ. ಲಂಚಕೋರನು ನರಕಕ್ಕೆ ಹೋಗುವನು. ಅನ್ಯಾಯದ ಸೊತ್ತಿನಿಂದ ತುಂಬಿಸುವ ಹೊಟ್ಟೆಯು ನರಕಾಗ್ನಿಗೆ ಹತ್ತಿರವಾದುದು. ಯಾರಾದರೂ ಒಂದಿಷ್ಟು ಭೂಮಿಯನ್ನು ಕಬಳಿಸಿದರೆ, ಅಷ್ಟು ಭೂಮಿಯನ್ನು ಏಳು ಭೂಮಿಗಳ ಆಳಕ್ಕೆ ಕೊಯ್ದು ಅವನ ಕೊರಳಿಗೆ ಹಾರವಾಗಿ ಹಾಕಲಾಗುವುದು ಎಂಬಿತ್ಯಾದಿ ಖುರ್‌ಆನ್-ಹದೀಸ್‌ಗಳ ಎಚ್ಚರಿಕೆಯು ಆಡಳಿತಗಾರನನ್ನು ಅನ್ಯಾಯ, ಭ್ರಷ್ಟಾಚಾರ, ಲಂಚಕೋರತನ, ಅಕ್ರಮ ಭೂಸ್ವಾಧೀನಗಳಿಂದೆಲ್ಲ ನಿಯಂತ್ರಿಸುತ್ತದೆ.

ಆಡಳಿತಗಾರ ಭ್ರಷ್ಟಾಚಾರ ಮುಕ್ತನಾಗಲು ದೇವಭಕ್ತನಾಗಬೇಕು. ನಿಯತ್ತಿನಿಂದ ಕೂಡಿದ ಉಪವಾಸವು ದೇವಭಕ್ತಿಯನ್ನು ಉದ್ದೀಪನಗೊಳಿಸಬಲ್ಲದು. ಧಾರ್ಮಿಕ-ನೈತಿಕ ತರಬೇತಿ ಪಡೆದು ಸ್ವಯಂ ಉಪವಾಸ ವ್ರತಧಾರಿಯಾದಾಗ ವ್ಯಕ್ತಿ ಸಂಸ್ಕರಣೆಗೊಳ್ಳಬಲ್ಲ. ಇದು ಅವನನ್ನು ಭ್ರಷ್ಟತೆಯಿಂದ ತಡೆಯಬಲ್ಲದು. ಯಾರೋ ಉಪವಾಸವಿರುವುದರಿಂದ ಭ್ರಷ್ಟಾಚಾರಿಗಳು ಸ್ವಚ್ಛಗೊಳ್ಳಲಾರರು. ಅಂತಹ ಉಪವಾಸಿಗರಿಗೆ ಸರ್ಕಾರ ಶರಣಾದರೂ ಅದು ಉಪವಾಸಕ್ಕಾಗಿ ಅಲ್ಲ, ಉಪವಾಸಿಗರ ಹಿಂದಿರುವ ಜನಬೆಂಬಲಕ್ಕೆ ಹೆದರಿ ಮಾತ್ರ.

- ಕೆ.ಎಂ.

## ರಾಜ್ಯ ವಕ್ಫ್ ಮಂಡಳಿಗೆ ಶಾಫೀ ಸಅದಿ, ಯೇನಪೋಯ ಆಯ್ಕೆ

**ಬೆಂಗಳೂರು:** ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸದಸ್ಯರ ಆಯ್ಕೆ ಪ್ರಕ್ರಿಯೆಯು ಮುಗಿದಿದ್ದು, ಎಸ್‌ಎಸ್‌ಎಫ್ ಮಾಜಿ ರಾಜ್ಯಾಧ್ಯಕ್ಷ ಎನ್.ಕೆ.ಎಂ.ಶಾಫೀ ಸಅದಿ ಹಾಗೂ ಮಂಗಳೂರಿನ ಹಿರಿಯ ಉದ್ಯಮಿ ಯೇನಪೋಯ ಮುಹಮ್ಮದ್ ಕುಂಞಿ ಹಾಜಿ ಸೇರಿದಂತೆ 11 ಸದಸ್ಯರು ಆಯ್ಕೆಗೊಂಡಿದ್ದಾರೆ.

ಎಸ್‌ಎಸ್‌ಎಫ್ ರಾಜ್ಯ ಕೋಶಾಧಿಕಾರಿಯಾಗಿರುವ ಶಾಫೀ ಸಅದಿಯವರನ್ನು ಸುನ್ನೀ ವಿದ್ವಾಂಸ ಕೋಟಾದಡಿ ರಾಜ್ಯ ಸರ್ಕಾರವು ಆಯ್ಕೆ ಮಾಡಿದ್ದು, ಮುಸ್ಲಿಂ ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಯೇನಪೋಯ ಆಯ್ಕೆಯಾಗಿದ್ದಾರೆ.

ರಾಜ್ಯಸಭಾ ಉಪಾಧ್ಯಕ್ಷ ಕೆ.ರಹ್ಮಾನ್ ಖಾನ್, ಮಾಜಿ ಸಚಿವ ಖಮರುಲ್ ಇಸ್ಲಾಂ ಗುಲ್ಬರ್ಗ, ಶಾಸನ ತನ್ವೀರ್ ಸೇಠ್ ಮೈಸೂರು, ಆರ್.ಎ.ರಿಯಾಝ್ ಖಾನ್ ಬೆಂಗಳೂರು, ಡಾ.ಮುಹಮ್ಮದ್ ಯೂಸುಫ್, ಸಯ್ಯಿದ್ ಶಾ ಖುಸ್ರೋ ಹುಸೈನಿ ಗುಲ್ಬರ್ಗ, ಎನ್. ನೂರ್ ಬಾಶಾ ಬಳ್ಳಾರಿ, ಸಯ್ಯಿದ್ ಮುಹಮ್ಮದ್ ಇಬ್ರಾಹೀಂ ಹಾಗೂ ಸರ್ಕಾರಿ ಅಧಿಕಾರಿ ಇಸ್ಮಾಈಲ್ ಖಾನ್ ಇತರ ಸದಸ್ಯರು.




## ಪ್ರಾರ್ಥಿಸಲು ವಿನಂತಿ

ನಮ್ಮ ತಂದೆಯವರಾದ **ಮುಹಮ್ಮದ್ ಹಳವಳ್ಳಿ ಕುಂದಾಪುರ** (56 ವ) ಮಾಜಿ ಅಧ್ಯಕ್ಷರು ಖಿಳ್‌ರಿಯಾ ಜುಮಾ ಮಸ್ಜಿದ್ ಹಳವಳ್ಳಿ, ಕುಂದಾಪುರರವರು ದಿನಾಂಕ 12.8.2011ರಂದು ಅಲ್ಲಾಹುವಿನ ಅನುಲ್ಲಂಘನೀಯ ವಿಧಿಗೆ ವಿಧೇಯರಾಗಿರುತ್ತಾರೆ.

*ಮೃತರ ಮೇಲೆ ಮಯ್ಯಿತ್ ನಮಾಝ್ ಮಾಡಲು ಮತ್ತು ಪಾರತ್ರಿಕ ಮೋಕ್ಷಕ್ಕೆ ಪ್ರಾರ್ಥಿಸಲು ಸರ್ವ ಜಮಾಅತ್ ಬಾಂಧವರಲ್ಲಿ ವಿನಂತಿಸುವ,*

**ಪತ್ನಿ ಮಕ್ಕಳು ಹಾಗೂ ಕುಟುಂಬಸ್ಥರು ಹಳವಳ್ಳಿ ಕುಂದಾಪುರ**





## ಅಭಿನಂದನೆಗಳು

SSF ಕರ್ನಾಟಕ ರಾಜ್ಯ ಸಮಿತಿಯ ನಿಕಟಪೂರ್ವ ಅಧ್ಯಕ್ಷ, ಹಾಲಿ ಕೋಶಾಧಿಕಾರಿ, ಬೆಂಗಳೂರು ಸಅದೀಸ್ ಫೌಂಡೇಶನ್ ಕಾರ್ಯದರ್ಶಿ ಇತ್ಯಾದಿ ಹುದ್ದೆಗಳಲ್ಲಿ ಕ್ರಿಯಾಶೀಲರಾಗಿರುವ ಯುವ ವಿದ್ವಾಂಸ, ನನ್ನ ಆತ್ಮೀಯ ಮಿತ್ರ

**ಎನ್.ಕೆ.ಎಂ.ಶಾಫಿ ಸಅದಿ**

ಇವರು ರಾಜ್ಯ ವಕ್ಫ್ ಬೋರ್ಡ್ ಸದಸ್ಯರಾಗಿ ನೇಮಕಗೊಂಡಿರುವ ಸಂದರ್ಭದಲ್ಲಿ ಹಾರ್ದಿಕವಾಗಿ ಅವರನ್ನು ಅಭಿನಂದಿಸತ್ತಿದ್ದೇನೆ.



**ಯಾಕೂಬ್ ಯೂಸುಫ್ ಹೊಸನಗರ**

ಸದಸ್ಯರು ರಾಷ್ಟ್ರೀಯ ಕಾರ್ಯಕಾರಿ ಸಮಿತಿ ರಾಷ್ಟ್ರೀಯ ಜನತಾದಳ



Owned, Published & Printed by : M. Ibraheem Bava, Hasan Enclave, Kuthar, P.O.Munnur, Mangalore. Editor : Al-Haj Bekal Ibraheem Musliyar.

Printed at : Sanabil Printing Press, Kuthar- 575 017, Mangalore. Ph: 0824-2467886